**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

**(1965ರ ಕರ್ನಾಟಕ ಅಧಿನಿಯಮ ಸಂಖ್ಯೆ 10)**

# ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965

# ಮತ್ತು

# ಅದರ ಮೇರೆಗಿನ ನಿಯಮಗಳು ಮತ್ತು ಅಧಿಸೂಚನೆಗಳು

# ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965

## ಮತ್ತು

## ಅದರ ಮೇರೆಗಿನ ನಿಯಮಗಳು ಮತ್ತು ಅಧಿಸೂಚನೆಗಳು

**ಕರ್ನಾಟಕ ಸರ್ಕಾರ**

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಲಾ 45 ಎಲ್‌ಎಂಪಿ 92, ದಿನಾಂಕ 21ನೇ ಡಿಸೆಂಬರ್ 1992**

The Karnataka Public Libraries Act, 1965 (Karnataka Act No. 10 of 1965) and the Rules and Notification thereunder ಇದರ ಕನ್ನಡ ಭಾಷಾಂತರವನ್ನು ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ 1963ರ ಕರ್ನಾಟಕ ರಾಜಭಾಷಾ ಅಧಿನಿಯಮದ 5ಎ ಪ್ರಕರಣದ ಅನುಸಾರವಾಗಿ ಸಾರ್ವಜನಿಕ ಮಾಹಿತಿಗಾಗಿ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

The Karnataka Public Libraries Act, 1965 (Karnataka Act No. 10 of 1965) and the Rules and Notification thereunder ಇದರ ಈ ಮುಂದಿನ ಕನ್ನಡ ಭಾಷಾಂತರವನ್ನು ಕರ್ನಾಟಕ ರಾಜ್ಯಪಾಲರ ಆದೇಶದ ಮೇರೆಗೆ 1963ರ ಕರ್ನಾಟಕ ರಾಜಭಾಷಾ ಅಧಿನಿಯಮದ 5ಎ ಪ್ರಕರಣದ ಅನುಸಾರವಾಗಿ ರಾಜ್ಯಪತ್ರದಲ್ಲಿ ಪ್ರಕಟಿಸಲಾಗಿದೆ.

## ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| 1 | ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965. | |
| 2 | ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮಗಳು, 1966. | |
| 3 | 1966ರ ಏಪ್ರಿಲ್ 1 ರಿಂದ ಅಧಿನಿಯಮವನ್ನು ಜಾರಿಗೆ ತರುವ ಎಸ್.ಓ. 4074 ದಿನಾಂಕ 5ನೇ ಡಿಸೆಂಬರ್ 1966. | |
| 4 | ರಾಜ್ಯ ಗ್ರಂಥಾಲಯ ಪ್ರಾಧಿಕಾರದ ರಚನೆ ಮತ್ತು ಸಂಘಟನೆಗೆ ಸಂಬಂಧಿಸಿದ ಅಧಿಸೂಚನೆಗಳು. | |
| 5 | ಮೈಸೂರು ನಗರದ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಸೂಚನೆಗಳು. | |
| 6 | ಹುಬ್ಬಳ್ಳಿ–ಧಾರವಾಡ ನಗರದ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಸೂಚನೆಗಳು. | |
| 7 | ಮೈಸೂರು ನಗರದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಸೂಚನೆ. | |
| 8 | ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂಬಂಧಿಸಿದ ಅಧಿಸೂಚನೆಗಳು. | |

# ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965

## ಪ್ರಕರಣಗಳ ಅನುಕ್ರಮಣಿಕೆ

## ಪ್ರಸ್ತಾವನೆ

## ಅಧ್ಯಾಯ–I

## ಪ್ರಾರಂಭಿಕ

**ಪ್ರಕರಣಗಳು**

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು

## ಅಧ್ಯಾಯ– II

## ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರ

3. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ರಚನೆ ಮತ್ತು ಸಂಘಟನೆ
4. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪ್ರಕಾರ್ಯಗಳು
5. ಚುನಾವಣೆ ಇಲ್ಲದಿರುವಲ್ಲಿ ಸದಸ್ಯರ ನಾಮನಿರ್ದೇಶನ
6. ಪದಾವಧಿ
7. ಖಾಲಿ ಸ್ಥಾನಗಳು
8. ಸದಸ್ಯನಾಗಿ ಮುಂದುವರಿಯುವುದಕ್ಕೆ ಅಸಮರ್ಥತೆಗಳು
9. ಅನರ್ಹತೆಗಳು
10. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಳು
11. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪ್ರಕ್ರಿಯೆ

## ಅಧ್ಯಾಯ– III

## ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ

12. ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ
13. ಇಲಾಖೆಯ ಪ್ರಕಾರ್ಯಗಳು
14. ರಾಜ್ಯ ಗ್ರಂಥಪಾಲ
15. ರಾಜ್ಯ ಗ್ರಂಥಾಲಯ ಸೇವೆ

## ಅಧ್ಯಾಯ– IV

## ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು

16. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಂಘಟನೆ
17. ನಗರ ಗ್ರಂಥಾಲಯ ಪ್ರಾಧಿಕಾರಗಳ ರಚನೆ
18. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳ ರಚನೆ
19. ಚುನಾವಣೆ ನಡೆಯದಿದ್ದಲ್ಲಿ ಸದಸ್ಯರ ನಾಮನಿರ್ದೇಶನ

20. ಪದಾವಧಿ

21. ಖಾಲಿ ಸ್ಥಾನಗಳು

22. ಸದಸ್ಯನಾಗಿ ಮುಂದುವರಿಯುವುದಕ್ಕೆ ಅಸಮರ್ಥತೆಗಳು

23. ಅನರ್ಹತೆಗಳು

24. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು

25. ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು

26. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು

27. ಗ್ರಂಥಾಲಯ ಅಭಿವೃದ್ಧಿ ಯೋಜನೆ

28. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಸಮಿತಿಗಳನ್ನು ನೇಮಕ ಮಾಡುವುದು

29. ಗ್ರಂಥಾಲಯ ಸಲಹಾ ಸಮಿತಿಗಳು

**ಅಧ್ಯಾಯ–V**

**ಹಣಕಾಸು ಮತ್ತು ಲೆಕ್ಕಪತ್ರಗಳು**

30. ಗ್ರಂಥಾಲಯ ಉಪಕರ

31. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಭೂಕಂದಾಯದ ಒಂದು ಭಾಗವನ್ನು ಸರ್ಕಾರವು ಅನುದಾನವಾಗಿ ಕೊಡತಕ್ಕದ್ದು.

32. ನಗರ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗಳು

33. ರಾಜ್ಯ ಗ್ರಂಥಾಲಯ ನಿಧಿ

34. ಲೆಕ್ಕಪತ್ರಗಳು

**ಅಧ್ಯಾಯ–VI**

**ರಾಜ್ಯ ಕೇಂದ್ರ ಗ್ರಂಥಾಲಯ**

35. ಬೆಂಗಳೂರು ಸಾರ್ವಜನಿಕ ಗ್ರಂಥಾಲಯವು ರಾಜ್ಯ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತಗೊಳ್ಳುವುದು

36. ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯ

37. ರಾಜ್ಯ ಕೇಂದ್ರ ಗ್ರಂಥಾಲಯದ ವಿಭಾಗಗಳು

**ಅಧ್ಯಾಯ–VII**

**ವರದಿಗಳು, ವಿವರ ಪಟ್ಟಿಕೆಗಳು ಮತ್ತು ಪರಿಶೀಲನೆ**

38. ವರದಿಗಳು ಮತ್ತು ವಿವರ ಪಟ್ಟಿಕೆಗಳು

39. ಗ್ರಂಥಾಲಯಗಳ ಪರಿಶೀಲನೆ

40. ವಾರ್ಷಿಕ ವರದಿ

## ಅಧ್ಯಾಯ–VIII

## ಸಂಕೀರ್ಣ

41. ನಿಯಮಗಳ ರಚನಾಧಿಕಾರ

42. ಉಪವಿಧಿಗಳನ್ನು ರಚಿಸಲು ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಿಗಳ ಅಧಿಕಾರ

43. ಅಪರಾಧಗಳು ಮತ್ತು ದಂಡಗಳು

44. ಸರ್ಕಾರದಿಂದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ನಿಯಂತ್ರಣ

45. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಸದಸ್ಯರ ಹೊಣೆಗಾರಿಕೆ

46. ಗ್ರಂಥಾಲಯ ಪ್ರಾಧಿಕಾರಗಳ ಸದಸ್ಯರು ಮತ್ತು ನಿಯೋಜಿತರು ಲೋಕ ನೌಕರರಾಗಿರತಕ್ಕದ್ದು

47. ಕಾರ್ಯಗಳ ಮತ್ತು ವ್ಯವಹರಣೆಗಳ ಸಿಂಧುತ್ವದ ಬಗ್ಗೆ ಉಳಿಸುವಿಕೆ

48. ದಾವೆಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಉಪಬಂಧಗಳು

49. ತೊಂದರೆಗಳನ್ನು ನಿವಾರಿಸಲು ಅಧಿಕಾರ

50. ಕೆಲವು ಗ್ರಂಥಾಲಯಗಳ ವರ್ಗಾವಣೆ

51. ಕರ್ನಾಟಕ ರಾಜ್ಯಕ್ಕೆ ಅದನ್ನು ಅನ್ವಯಿಸುವಲ್ಲಿ ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1987ರ ತಿದ್ದುಪಡಿ

52. ನಿರಸನ ಮತ್ತು ಉಳಿಸುವಿಕೆಗಳು

**ಕರ್ನಾಟಕ ಸರ್ಕಾರ**

**ಕಾನೂನು ಇಲಾಖೆ**

**ಕರ್ನಾಟಕ ಅಧಿನಿಯಮ ಸಂಖ್ಯೆ 1965ರ 10**

(1965ರ ಮೇ ಹದಿಮೂರನೇ ದಿವಸದಂದು ಕರ್ನಾಟಕ ರಾಜಪತ್ರದಲ್ಲಿ ಮೊದಲು ಪ್ರಕಟವಾಯಿತು)

**ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965**

(1965ರ ಏಪ್ರಿಲ್ ಇಪ್ಪತ್ತೆರಡನೇ ದಿವಸದಂದು ರಾಷ್ಟ್ರಪತಿಯ ಅನುಮತಿಯನ್ನು ಪಡೆಯಿತು)

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಮತ್ತು ನಿರ್ವಹಣೆ ಮತ್ತು ಸಮಗ್ರ ಗ್ರಾಮೀಣ ಮತ್ತು ನಗರ ಪ್ರದೇಶಗಳ ಗ್ರಂಥಾಲಯ ಸೇವೆಯ ಸಂಘಟನೆಗಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆ ಮತ್ತು ಸಮಗ್ರ ಗ್ರಾಮೀಣ ಮತ್ತು ನಗರ ಪ್ರದೇಶಗಳ ಗ್ರಂಥಾಲಯ ಸೇವೆಯ ಸಂಘಟನೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

## ಅಧ್ಯಾಯ–I

## ಪ್ರಾರಂಭಿಕ

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

[1](3) ಇದು ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ವಿದ್ಯಾ ವಿಷಯಕ ಗ್ರಂಥಾಲಯ"** ಎಂದರೆ ವಿಶ್ವವಿದ್ಯಾನಿಲಯ, ಕಾಲೇಜು, ಶಾಲೆ ಅಥವಾ ಸಂಶೋಧನಾ ಸಂಸ್ಥೆಯು ಇಟ್ಟುಕೊಂಡು ಬರುವ ಗ್ರಂಥಾಲಯ;

(2) **"ನೆರವು ಪಡೆದ ಗ್ರಂಥಾಲಯ"** ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳಿಗನುಸಾರವಾಗಿ ಸರ್ಕಾರದಿಂದ ನೆರವಿಗಾಗಿ ಅರ್ಹವಾಗಿರುವ ಗ್ರಂಥಾಲಯವೆಂದು ರಾಜ್ಯ ಗ್ರಂಥಪಾಲನು ಘೋಷಿಸಿದ ಗ್ರಂಥಾಲಯ;

(3) **"ಪುಸ್ತಕ"** ಎಂಬುದು–

(i) ಯಾವುದೇ ಭಾಷೆಯ ಪ್ರತಿಯೊಂದು ಸಂಪುಟ, ಸಂಪುಟದ ಭಾಗ ಅಥವಾ ವಿಭಾಗ ಮತ್ತು ಕಿರು ಹೊತ್ತಿಗೆ;

---

1. ಈ ಅಧಿನಿಯಮವು 1966ರ ಏಪ್ರಿಲ್ ಒಂದರಂದು ಜಾರಿಗೆ ಬಂದಿದೆ (ಎಸ್.ಓ. 4074, ದಿನಾಂಕ 28ನೇ ಮಾರ್ಚ್ 1966 ನೋಡಿ.)

(ii) ಪ್ರತ್ಯೇಕವಾಗಿ ಮುದ್ರಿತವಾದ ಅಥವಾ ಕಲ್ಲಚ್ಚು ಮಾಡಿದ ಸಂಗೀತ, ಭೂಪಟ, ಚಾರ್ಟು ಅಥವಾ ನಕ್ಷೆಯ ಪ್ರತಿಯೊಂದು ಹಾಳೆ ;

(iii) ವೃತ್ತ ಪತ್ರಿಕೆಗಳು, ನಿಯತ ಕಾಲಿಕೆಗಳು ಮತ್ತು ಅಂಥ ಇತರ ವಿಷಯಗಳು

–ಇವುಗಳನ್ನು ಒಳಗೊಳ್ಳುತ್ತದೆ.

(4) "ಮುಖ್ಯ ಗ್ರಂಥಪಾಲ" ಎಂದರೆ ಸಂದರ್ಭಾನುಸಾರ ನಗರ ಕೇಂದ್ರ ಗ್ರಂಥಾಲಯ ಅಥವಾ ಜಿಲ್ಲಾ ಕೇಂದ್ರ ಗ್ರಂಥಾಲಯ ಮತ್ತು ಇತರ ಗ್ರಂಥಾಲಯಗಳ ಮತ್ತು ನಗರ ಗ್ರಂಥಾಲಯ ಪ್ರಾಧಿಕಾರದ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ನಿಯಂತ್ರಣದಲ್ಲಿರುವ ಗ್ರಂಥಾಲಯ ಸೇವೆಯ ಪ್ರಭಾರದಲ್ಲಿರಲು ನೇಮಕಗೊಂಡ ಗ್ರಂಥಪಾಲ;

(5) "ನಗರ ಗ್ರಂಥಾಲಯ ಪ್ರಾಧಿಕಾರ" ಎಂದರೆ 16 ಮತ್ತು 17ನೇ ಪ್ರಕರಣಗಳ ಮೇರೆಗೆ ಒಂದು ನಗರಕ್ಕಾಗಿ ಅಥವಾ ಇತರ ನಗರ ಪ್ರದೇಶಕ್ಕಾಗಿ ರಚಿಸಿದ ಗ್ರಂಥಾಲಯ ಪ್ರಾಧಿಕಾರ ;

(6) "ರಾಜ್ಯದ ಒಡೆತನದಲ್ಲಿರುವ ಗ್ರಂಥಾಲಯ" ಎಂದರೆ ರಾಜ್ಯ ಸರ್ಕಾರದ ಒಂದು ಇಲಾಖೆ, ರಾಜ್ಯ ವಿಧಾನ ಮಂಡಲ, ಉಚ್ಚ ನ್ಯಾಯಾಲಯ ಅಥವಾ ಇತರ ಯಾವುದೇ ನ್ಯಾಯಾಲಯ ಅಥವಾ ರಾಜ್ಯದ ಯಾವುದೇ ಪ್ರಾಧಿಕಾರವು ಇಟ್ಟುಕೊಂಡು ಬಂದ ಗ್ರಂಥಾಲಯ;

(7) "ಜಿಲ್ಲೆ" ಎಂದರೆ ರೆವಿನ್ಯೂ ಜಿಲ್ಲೆ;

(8) "ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ" ಎಂದರೆ 16 ಮತ್ತು 18ನೇ ಪ್ರಕರಣಗಳ ಮೇರೆಗೆ ಜಿಲ್ಲೆಗಾಗಿ ರಚಿಸಿದ ಗ್ರಂಥಾಲಯ ಪ್ರಾಧಿಕಾರ;

(9) "ಗ್ರಂಥಾಲಯ ಉಪಕರ" ಎಂದರೆ 30ನೇ ಪ್ರಕರಣದ ಮೇರೆಗೆ ವಿಧಿಸಲಾದ ಉಪಕರ;

(10) "ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ" ಎಂದರೆ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರ;

(11) "ಅಧಿಸೂಚನೆ" ಎಂದರೆ ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(12) "ಅನ್ಯ ಗ್ರಂಥಾಲಯ" ಎಂದರೆ ಸಾರ್ವಜನಿಕ ಗ್ರಂಥಾಲಯವನ್ನು ಹೊರತುಪಡಿಸಿದಂತೆ ಇತರ ಯಾವುದೇ ಗ್ರಂಥಾಲಯ;

(13) "ನಿಯಮಿಸಲಾದ" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(14) "ಸಾರ್ವಜನಿಕ ಗ್ರಂಥಾಲಯ" ಎಂದರೆ,–

(ಕ) ಅಂಥ ಗ್ರಂಥಾಲಯದ ಶಾಖೆಗಳು ಮತ್ತು ಬಟವಾಡೆ ಕೇಂದ್ರಗಳನ್ನು ಒಳಗೊಂಡು, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಸ್ಥಾಪಿಸಿದ ಅಥವಾ ಇಟ್ಟುಕೊಂಡು ಬಂದಿರುವ ಗ್ರಂಥಾಲಯ;

(ಖ) ರಾಜ್ಯ ಸರ್ಕಾರವು ಸ್ಥಾಪಿಸಿದ ಅಥವಾ ಇಟ್ಟುಕೊಂಡು ಬಂದ ಮತ್ತು ಸಾರ್ವಜನಿಕರಿಗೆ ತೆರೆದಿರುವುದೆಂದು ಘೋಷಿಸಿದ ಗ್ರಂಥಾಲಯ;

(ಗ) ಯಾವುದೇ ಸ್ಥಳೀಯ ಪ್ರಾಧಿಕಾರವು ಸ್ಥಾಪಿಸಿದ ಅಥವಾ ಇಟ್ಟುಕೊಂಡು ಬಂದಿರುವ ಮತ್ತು ಸಾರ್ವಜನಿಕರಿಗೆ ತೆರೆದಿರುವುದಾಗಿ ಘೋಷಿಸಿದ ಗ್ರಂಥಾಲಯ;

(ಘ) ರಾಜ್ಯ ಸರ್ಕಾರದಿಂದ ನೆರವಿಗಾಗಿ ಅರ್ಹವಾಗಿದೆಯೆಂದು ಮತ್ತು ಅದರಿಂದ ನೆರವನ್ನು ಸ್ವೀಕರಿಸುತ್ತಿದೆಯೆಂದು ಘೋಷಿಸಲಾದ ಗ್ರಂಥಾಲಯ;

ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಸಾರ್ವಜನಿಕ ಗ್ರಂಥಾಲಯವೆಂದು ರಾಜ್ಯ ಸರ್ಕಾರವು ಅಧಿಸೂಚಿಸಿದ ಯಾವುದೇ ಇತರ ಗ್ರಂಥಾಲಯವನ್ನು ಒಳಗೊಳ್ಳುತ್ತದೆ;

(15) **"ರಾಜ್ಯ ಕೇಂದ್ರ ಗ್ರಂಥಾಲಯ"** ಎಂದರೆ IVನೇ ಅಧ್ಯಾಯದ ಮೇರೆಗೆ ರಾಜ್ಯ ಕೇಂದ್ರ ಗ್ರಂಥಾಲಯವಾಗಿರುವುದಾಗಿ ಘೋಷಿಸಿದ ಗ್ರಂಥಾಲಯ;

(16) **"ರಾಜ್ಯ ಗ್ರಂಥಪಾಲರು"** ಎಂದರೆ ಈ ಅಧಿನಿಯಮದ ಮೇರೆಗೆ ನೇಮಕಗೊಂಡ ರಾಜ್ಯ ಗ್ರಂಥಪಾಲ;

(17) **"ರಾಜ್ಯ ಗ್ರಂಥಾಲಯ ಪ್ರಾಧಿಕಾರ"** ಎಂದರೆ 3ನೇ ಪ್ರಕರಣದ ಮೇರೆಗೆ ರಚಿಸಿದ ಪ್ರಾಧಿಕಾರ;

(18) **"ವರ್ಷ"** ಎಂದರೆ ಹಣಕಾಸು ವರ್ಷ.

## ಅಧ್ಯಾಯ–II

## ಕರ್ನಾಟಕ ರಾಜ್ಯ ಗ್ರಂಥಾಲಯ ಪ್ರಾಧಿಕಾರ

**3. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ರಚನೆ ಮತ್ತು ಸಂಘಟನೆ.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ಆದಷ್ಟು ಬೇಗನೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಗ್ರಂಥಾಲಯ ಪ್ರಾಧಿಕಾರವೆಂದು ಕರೆಯಲಾಗುವ ಒಂದು ಪ್ರಾಧಿಕಾರವನ್ನು ರಚಿಸತಕ್ಕದ್ದು. ಅಂಥ ಪ್ರಾಧಿಕಾರವು, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿದ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದು, ಅದೇ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(2) ರಾಜ್ಯ ಗ್ರಂಥಾಲಯ ಪ್ರಾಧಿಕಾರವು,–

(ಕ) ಸಾರ್ವಜನಿಕ ಗ್ರಂಥಾಲಯಗಳ ಪ್ರಭಾರದಲ್ಲಿರುವ ಮಂತ್ರಿ–ಅವನು ಆ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು.

(ಖ) ಕರ್ನಾಟಕ ವಿಧಾನ ಸಭೆಯು, ಅದರ ಸದಸ್ಯರುಗಳಿಂದ ಚುನಾಯಿಸಿದ ನಾಲ್ಕು ವ್ಯಕ್ತಿಗಳು;

(ಗ) ಕರ್ನಾಟಕ ವಿಧಾನ ಪರಿಷತ್ತು, ಅದರ ಸದಸ್ಯರುಗಳಿಂದ ಚುನಾಯಿಸಿದ ಇಬ್ಬರು ವ್ಯಕ್ತಿಗಳು;

(ಘ) ರಾಜ್ಯದಲ್ಲಿನ ಪ್ರತಿಯೊಂದು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸದಸ್ಯರಿಂದ ಆ ಸಿಂಡಿಕೇಟು ಚುನಾಯಿಸಿದ ಒಬ್ಬ ವ್ಯಕ್ತಿ ;

**ವಿವರಣೆ.–** ಈ ಖಂಡದ ಉದ್ದೇಶಗಳಿಗಾಗಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ "ಸಿಂಡಿಕೇಟ್" ಎಂದರೆ ರೀಜೆಂಟರುಗಳ ಮಂಡಲಿ.

(ಙ) ಕರ್ನಾಟಕ ಗ್ರಂಥಾಲಯ ಸಂಘದ ಕಾರ್ಯನಿರ್ವಾಹಕ ಸಮಿತಿಯು, ಆ ಸಂಘದ ಸದಸ್ಯರಿಂದ ಚುನಾಯಿಸಿದ ಒಬ್ಬ ವ್ಯಕ್ತಿ;

(ಚ) ಬೆಂಗಳೂರು ನಗರದ ನಗರ ಗ್ರಂಥಾಲಯ ಪ್ರಾಧಿಕಾರವು ಅದರ ಸದಸ್ಯರಿಂದ ಚುನಾಯಿಸಿದ ಒಬ್ಬ ವ್ಯಕ್ತಿ;

(ಛ) ಬೆಂಗಳೂರು ನಗರವನ್ನು ಹೊರತುಪಡಿಸಿ ಯಾವ ನಗರಕ್ಕಾಗಿ ನಗರ ಗ್ರಂಥಾಲಯ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆಯೋ, ರಾಜ್ಯದಲ್ಲಿನ ನಗರಗಳ ಪೈಕಿ ಒಂದು ನಗರದ ನಗರ ಗ್ರಂಥಾಲಯ ಪ್ರಾಧಿಕಾರವು, ಅಂಥ ಪ್ರಾಧಿಕಾರದ ಸದಸ್ಯರಿಂದ ಚುನಾಯಿಸಿದ ಒಬ್ಬ ವ್ಯಕ್ತಿ; ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಸರದಿಯ ಕ್ರಮದಲ್ಲಿ ಒಂದು ಅವಧಿಗಾಗಿ ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರವು ಅಂಥ ಚುನಾವಣೆಯನ್ನು ಮಾಡತಕ್ಕಂಥ ಷರತ್ತಿಗೊಳಪಟ್ಟಿರತಕ್ಕದ್ದು ;

(ಜ) ರಾಜ್ಯದ ಪ್ರತಿಯೊಂದು ರೆವಿನ್ಯೂ ವಿಭಾಗದಲ್ಲಿನ ಜಿಲ್ಲೆಗಳಲ್ಲಿ ಒಂದು ಜಿಲ್ಲೆಯ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು, ಅಂಥ ಪ್ರಾಧಿಕಾರದ ಸದಸ್ಯರಿಂದ ಚುನಾಯಿಸಿದ ಒಬ್ಬ ವ್ಯಕ್ತಿ; ಇದು ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ಧರಿಸಬಹುದಾದಂಥ ಸರದಿಯ ಕ್ರಮದಲ್ಲಿ ಒಂದು ಅವಧಿಗಾಗಿ ಪ್ರತಿಯೊಂದು ರೆವಿನ್ಯೂ ವಿಭಾಗದಲ್ಲಿರುವ ಪ್ರತಿ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ಅಂಥ ಚುನಾವಣೆಯನ್ನು ಮಾಡತಕ್ಕದ್ದೆಂಬ ಷರತ್ತಿಗೊಳಪಟ್ಟಿರತಕ್ಕದ್ದು;

(ಝ) ಶಿಕ್ಷಣ ಇಲಾಖೆಯ ಸರ್ಕಾರದ ಕಾರ್ಯದರ್ಶಿ;

(ಞ) ಕರ್ನಾಟಕದಲ್ಲಿನ ಸಾರ್ವಜನಿಕ ಶಿಕ್ಷಣದ ನಿರ್ದೇಶಕರು ;

(ಟ) ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಗ್ರಂಥಾಲಯ ವಿಜ್ಞಾನದಲ್ಲಿ ತಜ್ಞರಾಗಿರುವ, ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂರು ವ್ಯಕ್ತಿಗಳು ಒಳಗೊಂಡಿರತಕ್ಕದ್ದು;

ಪರಂತು, (ಚ), (ಛ) ಹಾಗೂ (ಜ) ಖಂಡಗಳ ಉದ್ದೇಶಗಳಿಗಾಗಿ, ಪ್ರಾಧಿಕಾರದ ಮೊದಲ ರಚನೆಯ ಕಾಲದಲ್ಲಿ ಯಾವುದೇ ಗ್ರಂಥಾಲಯ ಪ್ರಾಧಿಕಾರಗಳನ್ನು ಸ್ಥಾಪಿಸಬಹುದಾದಲ್ಲಿ ಆ ರೆವಿನ್ಯೂ ವಿಭಾಗಗಳ ನಗರಗಳು ಹಾಗೂ ಜಿಲ್ಲೆಗಳಲ್ಲಿ ಸಾಮಾನ್ಯವಾಗಿ ನಿವಾಸಿಗಳಾದ ಆರು ವ್ಯಕ್ತಿಗಳನ್ನು ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡತಕ್ಕದ್ದು.

(3) ರಾಜ್ಯ ಗ್ರಂಥಪಾಲನು, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

**4. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪ್ರಕಾರ್ಯಗಳು.–** ರಾಜ್ಯ ಗ್ರಂಥಾಲಯ ಪ್ರಾಧಿಕಾರವು, ಈ ಅಧಿನಿಯಮದ ಆಡಳಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡತಕ್ಕುದು; ಅದು ರಾಜ್ಯ ಕೇಂದ್ರ ಗ್ರಂಥಾಲಯಕ್ಕಾಗಿ ವ್ಯವಸ್ಥಾಪಕ ಪ್ರಾಧಿಕಾರವಾಗಿರತಕ್ಕದ್ದು ಮತ್ತು ಈ ಅಧಿನಿಯಮದ ಮೂಲಕ ಸದರಿ ಪ್ರಾಧಿಕಾರಕ್ಕೆ ಪ್ರದಾನ ಮಾಡಿದ ಮತ್ತು ವಹಿಸಿದ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಚಲಾಯಿಸತಕ್ಕದ್ದು ಮತ್ತು ನೆರವೇರಿಸತಕ್ಕದ್ದು.

**5. ಚುನಾವಣೆ ಇಲ್ಲದಿರುವಲ್ಲಿ ಸದಸ್ಯರ ನಾಮನಿರ್ದೇಶನ.–** 3ನೇ ಪ್ರಕರಣದ 2ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನಿಕಾಯವು, ನಿಯಮಿಸಬಹುದಾದಂಥ ಅವಧಿಯೊಳಗಾಗಿ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯನಾಗಿರಲು ಒಬ್ಬ ವ್ಯಕ್ತಿಯನ್ನು ಚುನಾಯಿಸದಿದ್ದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಆ ಖಾಲಿ ಸ್ಥಾನಕ್ಕೆ ಅದಕ್ಕೆ ಚುನಾಯಿತನಾಗಲು ಅರ್ಹತೆ ಪಡೆದ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯು, ಅವನು ಸದರಿ ನಿಕಾಯದಿಂದ ಕ್ರಮಬದ್ಧವಾಗಿ ಚುನಾಯಿತನಾಗಿದಿದ್ದರೆ ಹೇಗೋ ಹಾಗೆ ಆ ಪ್ರಾಧಿಕಾರದ ಸದಸ್ಯನಾಗಿರುವುದಾಗಿ ಭಾವಿಸತಕ್ಕದ್ದು.

**6. ಪದಾವಧಿ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಇತರ ಸದಸ್ಯರ ಪದಾವಧಿಯು, 3ನೇ ಪ್ರಕರಣದ ಮೇರೆಗೆ ಸದಸ್ಯರ ಚುನಾವಣೆ ಅಥವಾ ನಾಮನಿರ್ದೇಶನವು ಆದ ತರುವಾಯ ಪ್ರಾಧಿಕಾರದ ಮೊದಲ ಸಭೆಯು ನಡೆಯುವಂಥ ದಿನಾಂಕದಿಂದ ಪ್ರಾರಂಭವಾಗಿ ಮೂರು ವರ್ಷಗಳ ಅವಧಿಗಾಗಿ ಇರತಕ್ಕದ್ದು.

(2) ಹೊರಹೋಗುವ ಸದಸ್ಯನು, ಅವನ ಉತ್ತರಾಧಿಕಾರಿಯ ಚುನಾವಣೆ ಅಥವಾ ನಾಮನಿರ್ದೇಶನವಾಗುವವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(3) ಹೊರಹೋಗುವ ಸದಸ್ಯನು, ಮರುಚುನಾವಣೆ ಅಥವಾ ಮರು ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದು.

**7. ಖಾಲಿ ಸ್ಥಾನಗಳು.–** ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಯಾವನೇ ಸದಸ್ಯನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮರಣ, ರಾಜೀನಾಮೆ, ಅಸಮರ್ಥತೆಯ ಕಾರಣದಿಂದಾಗಿ ಅಥವಾ ಅನ್ಯಥಾ ಖಾಲಿ ಸ್ಥಾನವುಂಟಾಗುವ ಸಂದರ್ಭದಲ್ಲಿ, ಆ ಖಾಲಿ ಸ್ಥಾನವನ್ನು, 3ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಸಂದರ್ಭಾನುಸಾರ ಬೇರೊಬ್ಬ ವ್ಯಕ್ತಿಯನ್ನು ಚುನಾವಣೆ ಅಥವಾ ನಾಮನಿರ್ದೇಶಿಸುವ ಮೂಲಕ ಭರ್ತಿ ಮಾಡತಕ್ಕದ್ದು ಮತ್ತು ಆ ಖಾಲಿಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಯಾವನೇ ವ್ಯಕ್ತಿಯು, ಆ ಖಾಲಿ ಸ್ಥಾನವು ಸಂಭವಿಸಿಲ್ಲದಿದ್ದರೆ ಯಾರ ಸ್ಥಾನದಲ್ಲಿ ಅವನನ್ನು ಚುನಾಯಿಸಲಾಗಿದೆಯೋ ಅಥವಾ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನು ಪದವನ್ನು ಧಾರಣ ಮಾಡುತ್ತಿದ್ದಂಥ ಕಾಲದವರೆಗೆ ಪದವನ್ನು ಧಾರಣ ಮಾಡತಕ್ಕದ್ದು.

**8. ಸದಸ್ಯನಾಗಿ ಮುಂದುವರಿಯುವುದಕ್ಕೆ ಅಸಮರ್ಥತೆಗಳು.–** ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪದನಿಮಿತ್ತ ಸದಸ್ಯನನ್ನು ಹೊರತುಪಡಿಸಿ ಯಾವನೇ ಸದಸ್ಯನು ಅವನನ್ನು ನಾಮನಿರ್ದೇಶನ ಮಾಡಿದ ಅಥವಾ ಚುನಾಯಿಸಲಾಗಿರುವಂಥ ಅವಧಿಯಲ್ಲಿ,–

(ಕ) ಆ ಪ್ರಾಧಿಕಾರದ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ ಪ್ರಾಧಿಕಾರದ ಮೂರು ಕ್ರಮಾನುಗತ ಸಭೆಗಳಿಗೆ ಅವನು ಗೈರುಹಾಜರಾದರೆ; ಅಥವಾ

(ಖ) 3ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನಿಕಾಯವು ಚುನಾಯಿಸಿದ ಸದಸ್ಯನ ಸಂದರ್ಭದಲ್ಲಿ, ಅವನು ಸಂಬಂಧಪಟ್ಟ ನಿಕಾಯದ ಸದಸ್ಯನಾಗಿರುವುದು ನಿಂತು ಹೋದರೆ

–ಪ್ರಾಧಿಕಾರದಲ್ಲಿನ ಅವನ ಪದವು ಖಾಲಿಯಾಗತಕ್ಕದ್ದು.

**9. ಅನರ್ಹತೆಗಳು.–** ವ್ಯಕ್ತಿಯು, ರಾಜ್ಯ ಗ್ರಂಥಾಲಯದ ಪ್ರಾಧಿಕಾರದ ಸದಸ್ಯನಾಗಿ ಆಯ್ಕೆಯಾಗಿರಲು ಅಥವಾ ಅದರ ಸದಸ್ಯನಾಗಿರಲು,–

(ಕ) ನೈತಿಕ ಪತನವನ್ನೊಳಗೊಂಡ ಮತ್ತು ಮೂರು ತಿಂಗಳುಗಳನ್ನು ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಅವನು ಶಿಕ್ಷೆಗೆ ಗುರಿಯಾಗಿದ್ದು, ಈ ಬಗ್ಗೆ ರಾಜ್ಯ ಸರ್ಕಾರವು ಈ ಮೂಲಕ ಮಾಡಲು ಶಕ್ತಗೊಂಡ ಆದೇಶದ ಮೂಲಕ ಅವನನ್ನು ಅಂಥ ಶಿಕ್ಷೆಯ ಕಾರಣದಿಂದ ಉದ್ಭವಿಸುವ ಅನರ್ಹತೆಯಿಂದ ಮುಕ್ತಗೊಳಿಸಲಾಗಿದ್ದ ಹೊರತು, ಅಂಥ ಶಿಕ್ಷೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ, ರದ್ದು ಮಾಡಿಲ್ಲದಿದ್ದರೆ ಅಥವಾ ಮಾಫಿ ಮಾಡಿಲ್ಲದಿದ್ದರೆ;

(ಖ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ;

(ಗ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ

–ಅನರ್ಹಗೊಳ್ಳತಕ್ಕದ್ದು.

**10. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಳು.–** (1) ರಾಜ್ಯ ಗ್ರಂಥಾಲಯ ಪ್ರಾಧಿಕಾರವು, ಅಧ್ಯಕ್ಷನು ನಿಗದಿಪಡಿಸಬೇಕಾದ ದಿನಾಂಕಗಳಂದು ವರ್ಷದಲ್ಲಿ ಕೊನೆಯ ಪಕ್ಷ ಎರಡು ಸಾರಿ ಸಭೆ ಸೇರತಕ್ಕದ್ದು. ಅಂಥ ಸಭೆಗಳ ಪೈಕಿ ಒಂದು ಸಭೆಯು ವಾರ್ಷಿಕ ಸಭೆಯಾಗಿರತಕ್ಕದ್ದು.

(2) ಅಧ್ಯಕ್ಷನು, ಅವನು ಸೂಕ್ತವೆಂದು ಯೋಚಿಸಿದಾಗಲೆಲ್ಲ ತುರ್ತು ವ್ಯವಹಾರವನ್ನು ನಡೆಸುವುದಕ್ಕಾಗಿ ಪ್ರಾಧಿಕಾರದ ವಿಶೇಷ ಸಭೆಯನ್ನು ಸಹ ಕರೆಯಬಹುದು.

(3) ನಿಯಮಿಸಿದ ಷರತ್ತುಗಳಿಗೊಳಪಟ್ಟು, ಪ್ರಾಧಿಕಾರದ ಸದಸ್ಯರ ಕೋರಿಕೆಯ ಮೇರೆಗೆ ತುರ್ತು ಮಹತ್ವದ ವಿಷಯಗಳನ್ನು ಚರ್ಚಿಸಲು ಅಧ್ಯಕ್ಷನು ವಿಶೇಷ ಸಭೆಗಳನ್ನು ಕರೆಯತಕ್ಕದ್ದು.

(4) ಪ್ರಾಧಿಕಾರದ ಸದಸ್ಯರ ಒಟ್ಟು ಸಂಖ್ಯೆಯ ಐದನೇ ಎರಡು ಭಾಗವು, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಾಗಿನ ಕೋರಂ ಆಗಿರತಕ್ಕದ್ದು.

(5) ಅಧ್ಯಕ್ಷನು ಹಾಜರಿದ್ದರೆ, ಪ್ರಾಧಿಕಾರದ ಪ್ರತಿಯೊಂದು ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸತಕ್ಕುದು. ಅಧ್ಯಕ್ಷನ ಗೈರುಹಾಜರಿಯಲ್ಲಿ ಸಭೆಯಲ್ಲಿ ಹಾಜರಿರುವ ಸದಸ್ಯರು, ಅಧ್ಯಕ್ಷತೆ ವಹಿಸುವುದಕ್ಕಾಗಿ ಅವರಲ್ಲಿ ಒಬ್ಬನನ್ನು ಆಯ್ಕೆ ಮಾಡತಕ್ಕದ್ದು.

**11. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪ್ರಕ್ರಿಯೆ.–** ರಾಜ್ಯ ಗ್ರಂಥಾಲಯ ಪ್ರಾಧಿಕಾರವು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂತಹ ಪ್ರಕ್ರಿಯೆಗನುಸಾರವಾಗಿ ವ್ಯವಹಾರವನ್ನು ನಡೆಸತಕ್ಕದ್ದು.

## ಅಧ್ಯಾಯ–III

## ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ

**12. ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ.–** ಈ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಗ್ರಂಥಪಾಲನು ಅದರ ಮುಖ್ಯಸ್ಥನಾಗಿರುವ ಮತ್ತು ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಇತರ ಅಧಿಕಾರಿಗಳು ಮತ್ತು ನೌಕರರನ್ನು ಒಳಗೊಂಡ ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯನ್ನು ರಚಿಸತಕ್ಕದ್ದು.

**13. ಇಲಾಖೆಯ ಪ್ರಕಾರ್ಯಗಳು.–** (1) ರಾಜ್ಯ ಸರ್ಕಾರದ ನಿಯಂತ್ರಣಕ್ಕೊಳಪಟ್ಟು, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯು ಈ ಅಧಿನಿಯಮದ ಆಡಳಿತಕ್ಕೆ ಜವಾಬ್ದಾರಿಯಾಗಿರತಕ್ಕದ್ದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಇಲಾಖೆಯು,–

(ಕ) ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಅಧೀಕ್ಷಿಸತಕ್ಕದ್ದು ಮತ್ತು ನಿರ್ದೇಶಿಸತಕ್ಕದ್ದು ;

(ಖ) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವ ಹಾಗೆ ಸಾರ್ವಜನಿಕ ಗ್ರಂಥಾಲಯ ಸೇವೆಯ ಸ್ಥಾಪನೆಯನ್ನು ಸಂವರ್ಧಿಸತಕ್ಕದ್ದು;

(ಗ) ರಾಜ್ಯ ಸರ್ಕಾರದಿಂದ ನೆರವನ್ನು ಸ್ವೀಕರಿಸುತ್ತಿರುವ ಗ್ರಂಥಾಲಯಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಮೇಲ್ವಿಚಾರಿಸತಕ್ಕುದು ಮತ್ತು ನಿರ್ದೇಶಿಸತಕ್ಕದ್ದು;

(ಘ) ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರತಕ್ಕದ್ದು;

(ಙ) ಈ ಅಧಿನಿಯಮದ ಮೇರೆಗೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು ಅದರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಕರ್ತವ್ಯಗಳ ನೆರವೇರಿಕೆಯನ್ನು ಅಧೀಕ್ಷಿಸತಕ್ಕದ್ದು, ನಿರ್ದೇಶಿಸತಕ್ಕುದು ಮತ್ತು ಅವುಗಳೊಂದಿಗೆ ವ್ಯವಹರಿಸತಕ್ಕದ್ದು;

(ಚ) ಗ್ರಂಥಾಲಯ ನಿಧಿಗಳ ಮತ್ತು ರಾಜ್ಯದ ಗ್ರಂಥಾಲಯ ಮಾನವ ಶಕ್ತಿಯ ಯುಕ್ತ ಬಳಕೆಯನ್ನು ಸುನಿಶ್ಚಿತಗೊಳಿಸತಕ್ಕದ್ದು;

(ಛ) ಈ ಅಧಿನಿಯಮದ ಉಪಬಂಧಗಳ ಮೂಲಕ ಅಥವಾ ಅವುಗಳ ಮೇರೆಗೆ ಇಲಾಖೆಗೆ ವಹಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**14. ರಾಜ್ಯ ಗ್ರಂಥಪಾಲ.–** (1) ಗ್ರಂಥಾಲಯ ವೃತ್ತಿಯನ್ನು ನಡೆಸಲು ನಿಯಮಿಸಿದ ಅರ್ಹತೆಗಳನ್ನು ಹೊಂದಿರುವ ಪೂರ್ಣಕಾಲಿಕ ಅಧಿಕಾರಿಯನ್ನು ರಾಜ್ಯ ಸರ್ಕಾರವು ರಾಜ್ಯ ಗ್ರಂಥಪಾಲನೆಂದು ನೇಮಕ ಮಾಡತಕ್ಕದ್ದು.

(2) ರಾಜ್ಯ ಗ್ರಂಥಪಾಲನು,–

(ಕ) ರಾಜ್ಯ ಕೇಂದ್ರ ಗ್ರಂಥಾಲಯದ ಗ್ರಂಥಪಾಲನಾಗಿ ಕೆಲಸ ಮಾಡತಕ್ಕದ್ದು ;

(ಖ) ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867ಕ್ಕೆ (ಕೇಂದ್ರಾಧಿನಿಯಮ 1867ರ 25) ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಮತ್ತು ಸದರಿ ಅಧಿನಿಯಮದ ಮೇರೆಗೆ ಕಳುಹಿಸಲಾದ ಪುಸ್ತಕಗಳನ್ನು ಇಟ್ಟುಕೊಂಡು ಬರುವುದು ಮತ್ತು ಅವುಗಳನ್ನು ಒದಗಿಸುವುದಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಅಧೀಕ್ಷಿಸತಕ್ಕುದು, ನಿರ್ದೇಶಿಸತಕ್ಕದ್ದು ಮತ್ತು ವ್ಯವಹರಿಸತಕ್ಕದ್ದು;

(ಗ) ರಾಜ್ಯ ಗ್ರಂಥಾಲಯ ಸೇವೆಯಲ್ಲಿರುವ ಅಧಿಕಾರಿಗಳು ಮತ್ತು ನೌಕರರ ನೇಮಕಾತಿಗಳು, ಸ್ಥಳ ನಿಯುಕ್ತಿಗಳು ಮತ್ತು ವರ್ಗಾವಣೆಗಳನ್ನು ನಿಯಂತ್ರಿಸತಕ್ಕದ್ದು;

(ಘ) ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಅದರ ಪ್ರಕಾರ್ಯಗಳನ್ನು ನೆರವೇರಿಸುವಲ್ಲಿ ಸಾಮಾನ್ಯವಾಗಿ ಸಹಾಯ ಮಾಡತಕ್ಕದ್ದು;

(ಙ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅವನಿಗೆ ಪ್ರದಾನ ಮಾಡಬಹುದಾದಂಥ ಮತ್ತು ವಿಧಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**15. ರಾಜ್ಯ ಗ್ರಂಥಾಲಯ ಸೇವೆ.–** (1) ಯಾವುದೇ ಇತರ ಕಾನೂನಿನಲ್ಲಿ ಏನೇ ಅಡಕವಾಗಿದ್ದಾಗ್ಯೂ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ, ರಾಜ್ಯ ಕೇಂದ್ರ ಗ್ರಂಥಾಲಯ ಮತ್ತು ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದಲ್ಲಿನ ಎಲ್ಲಾ ಹುದ್ದೆಗಳಿಗೆ ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಗೆ ಸೇರಿದ ವ್ಯಕ್ತಿಗಳನ್ನು ನೇಮಕ ಮಾಡುವ ಮೂಲಕ ಭರ್ತಿ ಮಾಡತಕ್ಕದ್ದು.

(2) ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಯು, ರಾಜ್ಯ ಗ್ರಂಥಪಾಲ, ನಗರಗಳ ಮತ್ತು ಜಿಲ್ಲೆಗಳ ಮುಖ್ಯ ಗ್ರಂಥಪಾಲರು, ಗ್ರಂಥಪಾಲರು ಮತ್ತು ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ನಿರ್ಧರಿಸಬಹುದಾದಂಥ ಇತರ ವರ್ಗಗಳು ಹಾಗೂ ಪ್ರವರ್ಗಗಳ ಹುದ್ದೆಗಳನ್ನು ಒಳಗೊಂಡಿರತಕ್ಕದ್ದು. ಸದರಿ ಸೇವೆಯ ಎಲ್ಲಾ ಸದಸ್ಯರು ಸರ್ಕಾರಿ ನೌಕರರಾಗಿರತಕ್ಕದ್ದು ಮತ್ತು ಅವರ ನೌಕರಿ ಭರ್ತಿ ಮತ್ತು ಸೇವಾ ಷರತ್ತುಗಳು, ಸಂವಿಧಾನದ 309ನೇ ಅನುಚ್ಛೇದದ ಉಪಬಂಧಗಳಿಗೊಳಪಟ್ಟು ನಿಯಮಿಸಬಹುದಾದಂಥ ನಿಯಮಗಳ ಮೂಲಕ ವಿನಿಯಮಿತವಾಗತಕ್ಕದ್ದು.

(3) ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಯ ಸದಸ್ಯರ ಸಂಬಳ, ಭತ್ಯೆಗಳು, ಉಪದಾನ, ಪಿಂಚಣಿ ಮತ್ತು ಇತರ ಪ್ರಯೋಜನಗಳನ್ನು ರಾಜ್ಯದ ಸಂಚಿತ ನಿಧಿಯಿಂದ ಭರಿಸತಕ್ಕದ್ದು.

## ಅಧ್ಯಾಯ–IV

## ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು

**16. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಂಘಟನೆ.–** (1) ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳನ್ನು ಸಂಘಟಿಸುವ ಮತ್ತು ಅವುಗಳ ಆಡಳಿತವನ್ನು ನಿರ್ವಹಿಸುವ ಉದ್ದೇಶಕ್ಕಾಗಿ,–

(ಕ) ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಮೈಸೂರು ಮತ್ತು ಬೆಳಗಾವಿ ನಗರಗಳಿಗಾಗಿ ಮತ್ತು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಒಂದು ಲಕ್ಷಕ್ಕಿಂತ ಹೆಚ್ಚಿನ ಜನಸಂಖ್ಯೆ ಇರುವಂಥ ಇತರ ನಗರ ಪ್ರದೇಶಕ್ಕಾಗಿ, ನಗರ ಗ್ರಂಥಾಲಯ ಪ್ರಾಧಿಕಾರವೆಂದು ಕರೆಯಲಾಗುವ; ಮತ್ತು

(ಖ) ಯಾವ ಪ್ರದೇಶಕ್ಕಾಗಿ ನಗರ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಲಾಗಿದೆಯೋ, ಆ ಪ್ರದೇಶವನ್ನು ಹೊರತುಪಡಿಸಿ, ಪ್ರತಿಯೊಂದು ರೆವಿನ್ಯೂ ಜಿಲ್ಲೆಗಾಗಿ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವೆಂದು ಕರೆಯಲಾಗುವ

–ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳನ್ನು ರಚಿಸತಕ್ಕದ್ದು.

* * *

(2) ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು, ಯಾವ ಪ್ರದೇಶಕ್ಕಾಗಿ ಅದನ್ನು ರಚಿಸಲಾಗಿದೆಯೋ ಆ ಪ್ರದೇಶದ ಹೆಸರಿನಿಂದ ಅದು ಈ ಅಧಿನಿಯಮದ ಉಪ ಬಂಧಗಳಿಗೊಳಪಟ್ಟು, ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಮತ್ತು ವಿಲೆ ಮಾಡಲು ಮತ್ತು ಕರಾರು ಮಾಡಿಕೊಳ್ಳಲು ಅಧಿಕಾರವನ್ನು ಹೊಂದಿರುವುದರೊಂದಿಗೆ ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಅದೇ ಹೆಸರಿನಲ್ಲಿ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

**17. ನಗರ ಗ್ರಂಥಾಲಯ ಪ್ರಾಧಿಕಾರಗಳ ರಚನೆ.–** (1) ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರವು–

(ಕ) ಪೌರನಿಗಮದ ಮೇಯರನು ಅಥವಾ ಮುನ್ಸಿಪಲ್ ಕೌನ್ಸಿಲ್‌ನ ಅಥವಾ ನಗರದ ಇತರ ಪೌರ ನಿಕಾಯದ ಅಧ್ಯಕ್ಷ–ಅವನು ಆ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಖ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ಉಪಾಧ್ಯಕ್ಷನೆಂದು ನಾಮನಿರ್ದೇಶನ ಮಾಡಿದ ನಗರದಲ್ಲಿನ ಮೊದಲನೇ ದರ್ಜೆ ಕಾಲೇಜಿನ ಪ್ರಾಂಶುಪಾಲ–ಅವನು ಪ್ರಾಧಿಕಾರದ ಉಪಾಧ್ಯಕ್ಷನಾಗಿರತಕ್ಕದ್ದು;

(ಗ) ಪೌರ ನಿಗಮ, ಮುನ್ಸಿಪಲ್ ಕೌನ್ಸಿಲ್ ಅಥವಾ ನಗರದ ಇತರ ಪೌರ ನಿಕಾಯವು ಅದರ ಸದಸ್ಯರಿಂದ ಚುನಾಯಿಸಿದ ಇಬ್ಬರು ವ್ಯಕ್ತಿಗಳು;

(ಘ) ನಗರದಲ್ಲಿನ ನೆರವು ಪಡೆದ ಗ್ರಂಥಾಲಯಗಳ ಆಡಳಿತ ಮಂಡಲಿಯ ಸದಸ್ಯರಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಙ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ನಾಮನಿರ್ದೇಶನ ಮಾಡಿದ ನಗರದ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ;

(ಚ) ಕರ್ನಾಟಕ ಗ್ರಂಥಾಲಯ ಸಂಘದ ನಗರ ಶಾಖೆಯ ಮಂಡಲಿ ಯಾವುದಾದರೂ ಇದ್ದರೆ, ಅದು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಛ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ನಾಮನಿರ್ದೇಶನ ಮಾಡಿದ, ನಗರದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿ;

(ಜ) ನಗರದಲ್ಲಿ ಸಾಮಾನ್ಯವಾಗಿ ವಾಸಿಸುವ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು

– ಇವರನ್ನು ಒಳಗೊಂಡಿರತಕ್ಕದ್ದು.

**18. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳ ರಚನೆ.–** (1) ಪ್ರತಿಯೊಂದು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು–

(ಕ) ಜಿಲ್ಲೆಯ ಡೆಪ್ಯುಟಿ ಕಮೀಷನರನು–ಅವನು ಆ ಪ್ರಾಧಿಕಾರದ ಪದನಿಮಿತ್ತ ಅಧ್ಯಕ್ಷನಾಗಿರತಕ್ಕದ್ದು;

(ಖ) ಜಿಲ್ಲೆಯ ಪ್ರಭಾರವನ್ನು ಹೊಂದಿರುವ ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕ;

(ಗ) ಜಿಲ್ಲಾ ಅಭಿವೃದ್ಧಿ ಪರಿಷತ್ತು ಅದರ ಸದಸ್ಯರಿಂದ ಚುನಾಯಿಸಿದ ಇಬ್ಬರ ವ್ಯಕ್ತಿಗಳು;

(ಘ) ನಗರ ಗ್ರಂಥಾಲಯ ಪ್ರಾಧಿಕಾರವು ಸ್ಥಾಪಿಸಲಾಗಿರುವಂಥ ಪ್ರದೇಶವನ್ನು ಹೊರತುಪಡಿಸಿ, ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮುನ್ಸಿಪಲ್ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆಯಲ್ಲಿನ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರ ನಿಕಾಯಗಳ ಅದರ ಸದಸ್ಯರಿಂದ ಚುನಾಯಿಸಿದ ಒಬ್ಬ ವ್ಯಕ್ತಿ;

(ಙ) ಐವತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಮುನಿಸಿಪಲ್ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲೆಯಲ್ಲಿನ ಮುನ್ಸಿಪಲ್ ಕೌನ್ಸಿಲುಗಳು ಅಥವಾ ಇತರ ಪೌರ ನಿಕಾಯಗಳ ಸದಸ್ಯರಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು;

(ಚ) ಕರ್ನಾಟಕ ಗ್ರಂಥಾಲಯದ ಸಂಘದ ಜಿಲ್ಲಾ ಶಾಖೆ ಮಂಡಲಿಯು ಯಾವುದಾದರೂ ಇದ್ದರೆ, ಅದು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಛ) ಜಿಲ್ಲೆಯಲ್ಲಿನ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಸದಸ್ಯರಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಒಬ್ಬ ವ್ಯಕ್ತಿ;

(ಜ) ಜಿಲ್ಲೆಯಲ್ಲಿನ ಗ್ರಾಮ ಪಂಚಾಯತಿಗಳು ಮತ್ತು ಪಟ್ಟಣ ಪಂಚಾಯತಿಗಳ ಸದಸ್ಯರಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು;

(ಝ) ಜಿಲ್ಲೆಯಲ್ಲಿನ ನೆರವು ಪಡೆದ ಗ್ರಂಥಾಲಯಗಳ ಆಡಳಿತ ಮಂಡಲಿಗಳ ಸದಸ್ಯರಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ವ್ಯಕ್ತಿಗಳು;

(ಞ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ನಾಮನಿರ್ದೇಶನ ಮಾಡಿದ ಜಿಲ್ಲೆಯಲ್ಲಿನ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ;

(ಟ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ನಾಮನಿರ್ದೇಶನ ಮಾಡಿದ ಜಿಲ್ಲೆಯಲ್ಲಿನ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ;

(ಠ) ರಾಜ್ಯ ಸರ್ಕಾರವು ಪದನಿಮಿತ್ತವಾಗಿ ನಾಮನಿರ್ದೇಶನ ಮಾಡಿದ ಜಿಲ್ಲೆಯ ಅಥವಾ ಅದರ ಭಾಗದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಶಿಕ್ಷಣ ಇಲಾಖೆಯ ಅಧಿಕಾರಿ;

(ಡ) ಜಿಲ್ಲೆಯಲ್ಲಿ ಸಾಮಾನ್ಯ ನಿವಾಸಿಗಳಾಗಿರುವ ವ್ಯಕ್ತಿಗಳಿಂದ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಮೂವರು ವ್ಯಕ್ತಿಗಳು

–ಇವರನ್ನು ಒಳಗೊಂಡಿರತಕ್ಕದ್ದು.

(2) ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷನನ್ನು ಸದಸ್ಯರು ಅವರಿಂದಲೇ ಚುನಾಯಿಸತಕ್ಕದ್ದು.

(3) ಜಿಲ್ಲೆಯ ಮುಖ್ಯ ಗ್ರಂಥಪಾಲನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಮತ್ತು ಸದರಿ ಪ್ರಾಧಿಕಾರದ ಸಮಿತಿಗಳ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

**19. ಚುನಾವಣೆ ನಡೆಯದಿದ್ದರೆ ಸದಸ್ಯರ ನಾಮನಿರ್ದೇಶನ.–** 17 ಅಥವಾ 18ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನಿಕಾಯಗಳ ಪೈಕಿ, ಯಾವುದೇ ನಿಕಾಯವು ನಿಯಮಿಸಲಾದಂಥ ಅವಧಿಯವರೆಗೆ ಸಂದರ್ಭಾನುಸಾರ ನಗರ ಗ್ರಂಥಾಲಯ ಪ್ರಾಧಿಕಾರದ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಸದಸ್ಯನೆಂಬುದಾಗಿ ವ್ಯಕ್ತಿಯನ್ನು ಚುನಾವಣೆ ಅಥವಾ ನಾಮನಿರ್ದೇಶನ ಮಾಡದಿದ್ದರೆ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಆ ಖಾಲಿ ಸ್ಥಾನಕ್ಕೆ ಅದಕ್ಕೆ ಚುನಾವಣೆಗಾಗಿ ಅರ್ಹನಾದ ವ್ಯಕ್ತಿಯನ್ನು ನಾಮನಿರ್ದೇಶನ ಮಾಡತಕ್ಕದ್ದು ಮತ್ತು ಹಾಗೆ ನಾಮನಿರ್ದೇಶಿತನಾದ ವ್ಯಕ್ತಿಯನ್ನು, ಸದರಿ ನಿಕಾಯವು ಅವನನ್ನು ಕ್ರಮಬದ್ಧವಾಗಿ ಚುನಾಯಿಸಲಾಗಿದ್ದರೆ ಹೇಗೋ ಹಾಗೆ ಆ ಪ್ರಾಧಿಕಾರದ ಸದಸ್ಯನೆಂಬುದಾಗಿ ಭಾವಿಸತಕ್ಕದ್ದು.

**20. ಪದಾವಧಿ.–** (1) ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯರ ಪದಾವಧಿಯು, 17, 18 ಮತ್ತು 19ನೇ ಪ್ರಕರಣಗಳ ಮೇರೆಗೆ ಸದಸ್ಯರ ಚುನಾವಣೆ ಅಥವಾ ನಾಮನಿರ್ದೇಶನದ ತರುವಾಯ ಪ್ರಾಧಿಕಾರದ ಮೊದಲ ಸಭೆಯು ನಡೆದ ದಿನಾಂಕದಿಂದ ಪ್ರಾರಂಭವಾಗಿ ಮೂರು ವರ್ಷಗಳ ಅವಧಿಯಾಗಿರತಕ್ಕದ್ದು.

(2) ಹೊರಹೋಗುವ ಸದಸ್ಯನು ಅವನ ಉತ್ತರಾಧಿಕಾರಿಯ ಚುನಾವಣೆ ಅಥವಾ ನಾಮನಿರ್ದೇಶನವಾಗುವವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(3) ಹೊರಹೋಗುವ ಸದಸ್ಯನು ಪುನಃ ಚುನಾಯಿತನಾಗಲು ಅಥವಾ ಪುನಃ ನಾಮನಿರ್ದೇಶಿತನಾಗಲು ಅರ್ಹನಾಗಿರತಕ್ಕದ್ದು.

**21. ಖಾಲಿ ಸ್ಥಾನಗಳು.–** ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಯಾವನೇ ಸದಸ್ಯನ ಪದಾವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ಮರಣ, ರಾಜೀನಾಮೆ, ಅಸಮರ್ಥತೆಯಿಂದಾಗಿ ಅಥವಾ ಅನ್ಯಥಾ ಖಾಲಿ ಸ್ಥಾನವು ಉದ್ಭವಿಸುವ ಸಂದರ್ಭದಲ್ಲಿ ಆ ಖಾಲಿ ಸ್ಥಾನವನ್ನು ಸಂದರ್ಭಾನುಸಾರ 17ನೇ ಪ್ರಕರಣ ಅಥವಾ 18ನೇ ಪ್ರಕರಣದಲ್ಲಿ ಉಪಬಂಧಿಸಿದ ರೀತಿಯಲ್ಲಿ ಇನ್ನೊಬ್ಬ ವ್ಯಕ್ತಿಯನ್ನು ಸಂದರ್ಭಾನುಸಾರ ಚುನಾವಣೆ ಅಥವಾ ನಾಮನಿರ್ದೇಶನ ಮಾಡುವ ಮೂಲಕ ಭರ್ತಿ ಮಾಡತಕ್ಕುದು ಮತ್ತು ಆ ಖಾಲಿ ಸ್ಥಾನವನ್ನು ಭರ್ತಿ ಮಾಡಲು ಚುನಾಯಿತನಾದ ಅಥವಾ ನಾಮನಿರ್ದೇಶಿತನಾದ ಯಾವನೇ ವ್ಯಕ್ತಿಯು, ಆ ಖಾಲಿ ಸ್ಥಾನವು ಸಂಭವಿಸಿಲ್ಲದಿದ್ದರೆ ಅವನನ್ನು ಯಾವ ಸದಸ್ಯನ ಸ್ಥಾನಕ್ಕೆ ಚುನಾಯಿಸಲಾಗಿದೆಯೋ ಅಥವಾ ನಾಮನಿರ್ದೇಶನ ಮಾಡಲಾಗಿದೆಯೋ ಆ ಸದಸ್ಯನು ಎಲ್ಲಿಯವರೆಗೆ ಪದವನ್ನು ಧಾರಣ ಮಾಡುತ್ತಿದ್ದನೋ ಅಲ್ಲಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

**22. ಸದಸ್ಯನಾಗಿ ಮುಂದುವರಿಯುವುದಕ್ಕೆ ಅಸಮರ್ಥತೆಗಳು.–** ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಯಾವನೇ ಸದಸ್ಯನು, ಅವನನ್ನು ನಾಮನಿರ್ದೇಶನ ಮಾಡಲಾಗಿರುವ ಅಥವಾ ಚುನಾಯಿಸಲಾಗಿರುವಂಥ ಅವಧಿಯಲ್ಲಿ,–

(ಕ) ಪ್ರಾಧಿಕಾರದ ಅಭಿಪ್ರಾಯದಲ್ಲಿ ಸಾಕಷ್ಟು ಕಾರಣವಿಲ್ಲದೆ ಪ್ರಾಧಿಕಾರದ ಕ್ರಮಾನುಗತ ಮೂರು ಸಭೆಗಳಿಗೆ ಗೈರು ಹಾಜರಾದರೆ; ಅಥವಾ

(ಖ) 17ನೇ ಪ್ರಕರಣ ಅಥವಾ 18ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಯಾವುದೇ ನಿಕಾಯದಿಂದ ಚುನಾಯಿತನಾದ ಸದಸ್ಯನ ಸಂದರ್ಭದಲ್ಲಿ, ಅವನು ಸಂಬಂಧಪಟ್ಟ ನಿಕಾಯದ ಸದಸ್ಯನಾಗಿರುವುದು ನಿಂತು ಹೋದರೆ

–ಪ್ರಾಧಿಕಾರದಲ್ಲಿನ ಅವನ ಪದವು ಖಾಲಿಯಾಗತಕ್ಕದ್ದು.

**23. ಅನರ್ಹತೆಗಳು.–** ವ್ಯಕ್ತಿಯು, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯನಾಗಿ ಆಯ್ಕೆಯಾಗಿರಲು ಅಥವಾ ಅದರ ಸದಸ್ಯನಾಗಿರಲು,–

(ಕ) ನೈತಿಕ ಪತನವನ್ನೊಳಗೊಂಡ ಮತ್ತು ಮೂರು ತಿಂಗಳುಗಳನ್ನು ಮೀರಿದ ಅವಧಿಯ ಕಾರಾವಾಸದಿಂದ ದಂಡನೀಯವಾದ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಅವನು ಶಿಕ್ಷೆಗೆ ಗುರಿಯಾಗಿದ್ದು, ಈ ಬಗ್ಗೆ ರಾಜ್ಯ ಸರ್ಕಾರವು ಈ ಮೂಲಕ ಮಾಡಲು ಶಕ್ತಗೊಂಡ ಆದೇಶದ ಮೂಲಕ ಅವನನ್ನು ಅಂಥ ಶಿಕ್ಷೆಯ ಕಾರಣದಿಂದ ಉದ್ಭವಿಸುವ ಅನರ್ಹತೆಯಿಂದ ಮುಕ್ತಗೊಳಿಸಲಾಗಿದ್ದ ಹೊರತು, ಅಂಥ ಶಿಕ್ಷೆಯನ್ನು ತರುವಾಯ ವಿಪರ್ಯಯಗೊಳಿಸಿರದಿದ್ದರೆ, ರದ್ದು ಮಾಡಿಲ್ಲದಿದ್ದರೆ ಅಥವಾ ಮಾಫಿ ಮಾಡಿಲ್ಲದಿದ್ದರೆ.

(ಖ) ಅವನು ಅವಿಮುಕ್ತ ದಿವಾಳಿಯಾಗಿದ್ದರೆ;

(ಗ) ಅವನು ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಸಕ್ಷಮ ನ್ಯಾಯಾಲಯವು ಹಾಗೆಂದು ಘೋಷಿಸಿದ್ದರೆ.

–ಅನರ್ಹಗೊಳ್ಳತಕ್ಕದ್ದು.

**24. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು.–** (1) ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು, ಅಧ್ಯಕ್ಷನು ನಿಗದಿಪಡಿಸಬೇಕಾದಂಥ ದಿನಾಂಕಗಳಂದು ವರ್ಷದಲ್ಲಿ ಕೊನೆ ಪಕ್ಷ ಎರಡು ಬಾರಿ ಸಭೆ ಸೇರತಕ್ಕದ್ದು. ಅಂಥ ಸಭೆಗಳ ಪೈಕಿ ಒಂದು ಸಭೆಯು ವಾರ್ಷಿಕ ಸಭೆಯಾಗಿರತಕ್ಕದ್ದು.

(2) ಅಧ್ಯಕ್ಷನು, ಅವನು ಸೂಕ್ತವೆಂದು ಯೋಚಿಸಿದಾಗಲೆಲ್ಲ ತುರ್ತು ವ್ಯವಹಾರವನ್ನು ನಡೆಸುವುದಕ್ಕಾಗಿ ಪ್ರಾಧಿಕಾರದ ವಿಶೇಷ ಸಭೆಯನ್ನು ಸಹ ಕರೆಯತಕ್ಕದ್ದು.

(3) ನಿಯಮಿಸಿದ ಷರತ್ತುಗಳಿಗೊಳಪಟ್ಟ ಪ್ರಾಧಿಕಾರದ ಸದಸ್ಯರ ಕೋರಿಕೆಯ ಮೇರೆಗೆ ತುರ್ತು ಸ್ವರೂಪದ ಮುಖ್ಯ ವಿಷಯಗಳನ್ನು ಚರ್ಚಿಸಲು ಅಧ್ಯಕ್ಷನು ವಿಶೇಷ ಸಭೆಗಳನ್ನು ಕರೆಯತಕ್ಕದ್ದು.

(4) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು, ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ನಿಯಮಿಸಬಹುದಾದಂಥ ಪ್ರಕ್ರಿಯೆಗನುಸಾರವಾಗಿ ವ್ಯವಹಾರವನ್ನು ನಡೆಸತಕ್ಕದ್ದು.

**25. ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷನು.–

(ಕ) ಆ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ಖ) ಆ ಪ್ರಾಧಿಕಾರದ ಹಣಕಾಸಿನ ಮತ್ತು ಕಾರ್ಯನಿರ್ವಾಹಕ ಆಡಳಿತದ ಮೇಲೆ ನಿಗಾ ಇಟ್ಟಿರತಕ್ಕುದು ಮತ್ತು ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು.

(2) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷನು,–

(ಕ) ಅಧ್ಯಕ್ಷನ ಗೈರು ಹಾಜರಿಯಲ್ಲಿ, ಆ ಪ್ರಾಧಿಕಾರದ ಸಭೆಗಳ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ಖ) ಅಧ್ಯಕ್ಷನು, ಕಾಲಕಾಲಕ್ಕೆ ಅವನಿಗೆ ಪ್ರತ್ಯಾಯೋಜಿಸಬಹುದಾದಂಥ ಅಧ್ಯಕ್ಷನ ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**26. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಅಧಿಕಾರಗಳು ಮತ್ತು ಪ್ರಕಾರ್ಯಗಳು.–** (1) ಅದರ ಅಧಿಕಾರ ವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿ ವಾಸವಾಗಿರುವ ವ್ಯಕ್ತಿಗಳಿಗೆ ಗ್ರಂಥಾಲಯ ಸೇವೆಯನ್ನು ಒದಗಿಸುವುದು ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರ ಮತ್ತು ಪ್ರತಿಯೊಂದು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಕರ್ತವ್ಯವಾಗಿರತಕ್ಕದ್ದು. ಗ್ರಂಥಾಲಯ ಪ್ರಾಧಿಕಾರವು ಪ್ರತಿಯೊಂದು ನಗರದಲ್ಲಿ ಒಂದು ನಗರ ಕೇಂದ್ರ

ಗ್ರಂಥಾಲಯ ಮತ್ತು ಶಾಖಾ ಗ್ರಂಥಾಲಯಗಳನ್ನು ಮತ್ತು ಪ್ರತಿಯೊಂದು ಜಿಲ್ಲೆಯಲ್ಲಿ ಒಂದು ಜಿಲ್ಲಾ ಕೇಂದ್ರ ಗ್ರಂಥಾಲಯ ಮತ್ತು ಶಾಖಾ ಗ್ರಂಥಾಲಯಗಳನ್ನು ಸ್ಥಾಪಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು,–

(ಕ) ಸಾರ್ವಜನಿಕ ಗ್ರಂಥಾಲಯಗಳಿಗಾಗಿ ಸೂಕ್ತ ಭೂಮಿಗಳು ಮತ್ತು ಕಟ್ಟಡಗಳನ್ನು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾದ ಪೀಠೋಪಕರಣಗಳು, ಜೋಡಣೆಗಳು, ಸಲಕರಣೆಗಳು ಮತ್ತು ಇತರ ಸೌಕರ್ಯಗಳನ್ನು ಒದಗಿಸಬಹುದು;

(ಖ) ಅಂಥ ಗ್ರಂಥಾಲಯಗಳಿಗೆ, ಪುಸ್ತಕಗಳು, ನಿಯತ ಕಾಲಿಕೆಗಳು, ವೃತ್ತ ಪತ್ರಿಕೆಗಳು, ಭೂಪಟಗಳು, ಗ್ರಾಮಫೋನ್ ರೆಕಾರ್ಡ್‌ಗಳು, ಹಸ್ತ ಪ್ರತಿಗಳು, ಕಲೆ ಮತ್ತು ವಿಜ್ಞಾನದ ಕೃತಿಗಳು ಮತ್ತು ಮಾದರಿಗಳು, ಲ್ಯಾನ್‌ಟರ್ನ್ ಸ್ಲೈಡುಗಳು, ಫಿಲ್ಮುಗಳು, ಸಿನಿಮಾ ಪ್ರೊಜೆಕ್ಟರುಗಳು, ದಾಖಲೆಗಳು ಮತ್ತು ಅಂಥವುಗಳನ್ನೇ ಒದಗಿಸಬಹುದು.

(ಗ) ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು, ಯಾವುದೇ ಸಾರ್ವಜನಿಕ ಗ್ರಂಥಾಲಯವನ್ನು ಸ್ಥಳಾಂತರಿಸಬಹುದು ಅಥವಾ ಮುಚ್ಚಬಹುದು;

(ಘ) ಅದರ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಉದ್ದೇಶಕ್ಕಾಗಿ ಯಾವುದೇ ದತ್ತಿ ಅಥವಾ ದಾನವನ್ನು ಅಂಗೀಕರಿಸಬಹುದು;

ಪರಂತು, ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆಯದೆ, ಸ್ಥಿರಸ್ವತ್ತಿನ ಯಾವುದೇ ದಾನ ಅಥವಾ ದತ್ತಿಯನ್ನು ಅಂಗೀಕರಿಸತಕ್ಕದ್ದಲ್ಲ;

(ಙ) ಭಾಷಣಗಳನ್ನು ಏರ್ಪಡಿಸಬಹುದು ಮತ್ತು ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಸಹಾಯಕವಾಗಬಹುದಾದ ಇತರ ಚಟುವಟಿಕೆಗಳನ್ನು ನಡೆಸಬಹುದು;

(ಚ) ವ್ಯವಸ್ಥಾಪನೆಯ ಸಮ್ಮತಿ ಪಡೆದು ಮತ್ತು ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯೊಂದಿಗೆ, ರಾಜ್ಯ ಸರ್ಕಾರವು ಅನುಮೋದಿಸಬಹುದಾದಂಥ ಷರತ್ತುಗಳ ಮೇಲೆ, ಯಾವುದೇ ಗ್ರಂಥಾಲಯವನ್ನು ಆರ್ಜಿಸಬಹುದು;

(ಛ) ರಾಜ್ಯ ಸರ್ಕಾರದ ಮಂಜೂರಾತಿಯನ್ನು ಪಡೆದು, ಈ ಅಧಿನಿಯಮದ ಉದ್ದೇಶವನ್ನು ಮುಂದುವರಿಸುವುದಕ್ಕೆ ಸಹಾಯಕವಾಗಬಹುದಾದ ಯಾವುದೇ ಇತರ ಕಾರ್ಯವನ್ನು ಮಾಡಬಹುದು;

(ಜ) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದಾನ ಮಾಡಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು ಮತ್ತು ವಿಧಿಸಬಹುದಾದಂಥ ಇತರ ಕರ್ತವ್ಯಗಳನ್ನು ನೆರವೇರಿಸಬಹುದು.

**27. ಗ್ರಂಥಾಲಯ ಅಭಿವೃದ್ಧಿ ಯೋಜನೆ.–** (1) ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶಗಳಿಗೊಳಪಟ್ಟು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗ ಮತ್ತು ಆ ತರುವಾಯ ರಾಜ್ಯ ಗ್ರಂಥಪಾಲನಿಗೆ ಅಗತ್ಯವಾಗಬಹುದಾದಷ್ಟು ಸಲ, ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು, ನಿಯಮಿಸಬಹುದಾದಂಥ ರೂಪದಲ್ಲಿ ಮತ್ತು ರೀತಿಯಲ್ಲಿ ಅಂಥ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗೆ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅಂಥ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯಲ್ಲಿ ಗ್ರಂಥಾಲಯ ಸೇವೆಗಳನ್ನು ವಿಸ್ತರಿಸುವುದಕ್ಕಾಗಿ ಮತ್ತು ಅಂಥ ವಿವರಗಳನ್ನೊಳಗೊಂಡ ಯೋಜನೆಯನ್ನು (ಇಲ್ಲಿ ಇನ್ನು ಮುಂದೆ 'ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆ' ಎಂದು ಉಲ್ಲೇಖಿಸಲಾಗಿದೆ) ತಯಾರಿಸತಕ್ಕದ್ದು ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಹಾಗೆ ಮಾಡುವುದು ಅವಶ್ಯವೆಂದು ಅದು ಪರ್ಯಾಲೋಚಿಸಿದಾಗಲೆಲ್ಲಾ ಹಾಗೆ ಅದನ್ನು ತಯಾರಿಸಬಹುದು.

(2) (1)ನೇ ಉಪ ಪ್ರಕರಣದ ಮೇರೆಗೆ ತಯಾರಿಸಿದ ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ಪ್ರಮುಖ ವೈಶಿಷ್ಟ್ಯಗಳನ್ನು, ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗೆ ಆ ಯೋಜನೆಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆಗಳು ಮತ್ತು ಸೂಚನೆಗಳನ್ನು ಆಹ್ವಾನಿಸುವ ನೋಟೀಸಿನೊಂದಿಗೆ, ನಿಯಮಿಸಬಹುದಾದಂಥ ರೀತಿಯಲ್ಲಿ ಪ್ರಕಟಿಸತಕ್ಕದ್ದು. ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಯಾವನೇ ವ್ಯಕ್ತಿಯಿಂದ ಸ್ವೀಕರಿಸಬಹುದಾದಂಥ ಯಾವುದೇ ಆಕ್ಷೇಪಣೆ ಅಥವಾ ಸೂಚನೆಯನ್ನು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಪರ್ಯಾಲೋಚಿಸತಕ್ಕುದು ಮತ್ತು ಆ ಪ್ರಾಧಿಕಾರವು ಸೂಕ್ತವೆಂದು ಭಾವಿಸತಕ್ಕಂಥ ಮಾರ್ಪಾಟುಗಳನ್ನು ಮಾಡತಕ್ಕದ್ದು.

(3) ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು, ಆ ತರುವಾಯ (2)ನೇ ಉಪಪ್ರಕರಣದ ಮೇರೆಗೆ ಸ್ವೀಕರಿಸಿದ ಆಕ್ಷೇಪಣೆಗಳು ಮತ್ತು ಸೂಚನೆಗಳ ಒಂದು ಪ್ರತಿಯೊಂದಿಗೆ ರಾಜ್ಯ ಗ್ರಂಥಪಾಲನಿಗೆ ಕಳುಹಿಸಿ ಕೊಡತಕ್ಕುದು. ರಾಜ್ಯ ಗ್ರಂಥಪಾಲನು, ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆ ಬಗ್ಗೆ ಅವನ ಟಿಪ್ಪಣಿಗಳೊಂದಿಗೆ ಮಂಜೂರಾತಿಗಾಗಿ ಅದನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(4) ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಅಭಿಪ್ರಾಯಗಳನ್ನು ಖಚಿತಪಡಿಸಿಕೊಂಡ ತರುವಾಯ ರಾಜ್ಯ ಸರ್ಕಾರವು ಸೂಕ್ತವೆಂದು ಭಾವಿಸಿದರೆ, ಅದು ಅವಶ್ಯವೆಂದು ಪರ್ಯಾಲೋಚಿಸಿ ಬದಲಾವಣೆಗಳೊಂದಿಗೆ ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡಬಹುದು. ರಾಜ್ಯ ಸರ್ಕಾರವು ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಮಾಡಿಕೊಂಡ ಅರ್ಜಿಯ ಮೇಲೆ ಈ ಉಪಪ್ರಕರಣದ ಮೇರೆಗೆ ಮಂಜೂರು ಮಾಡಿದ ಯಾವುದೇ ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು ಮಾರ್ಪಾಟು ಮಾಡಬಹುದು.

(5) (ಕ) (4)ನೇ ಉಪಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು ಮಂಜೂರು ಮಾಡಿದ ತರುವಾಯ, ಆದಷ್ಟು ಬೇಗ ರಾಜ್ಯ ಗ್ರಂಥಪಾಲನು ಸದರಿ ಯೋಜನೆಯ ಉಪಬಂಧಗಳಿಗೆ ಅನುಗುಣವಾಗಿ ಶೈಕ್ಷಣಿಕ ಸಂಸ್ಥೆಗಳು, ಕಾರಾಗೃಹಗಳು, ಆಸ್ಪತ್ರೆಗಳು ಮತ್ತು ಸೇವಾ ಕೇಂದ್ರಗಳಲ್ಲಿ ಸ್ಥಾಪಿಸಬೇಕಾದ ಶಾಖೆಗಳನ್ನು ಒಳಗೊಂಡು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಸ್ಥಾಪಿಸಬೇಕಾದಂಥ ಮತ್ತು ಇಟ್ಟುಕೊಂಡು ಬರುವಂಥ ಕೇಂದ್ರ ಗ್ರಂಥಾಲಯ ಮತ್ತು ಶಾಖಾ ಗ್ರಂಥಾಲಯ, ಆ ಪ್ರದೇಶದಲ್ಲಿ ಜನರಿಗೆ ಸಾಕಷ್ಟು ಗ್ರಂಥಾಲಯ ಸೇವೆಯನ್ನು ಒದಗಿಸುವುದಕ್ಕಾಗಿ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಕೈಗೊಳ್ಳಬೇಕಾದ ಕ್ರಮಗಳು ಮತ್ತು ಅಂಥ ಕ್ರಮಗಳನ್ನು ತೆಗೆದುಕೊಳ್ಳತಕ್ಕಂಥ ಹಂತಗಳನ್ನು ನಿರ್ದಿಷ್ಟಪಡಿಸಿ ಆ ಪ್ರದೇಶಕ್ಕಾಗಿ ಸ್ಥಳೀಯ ಗ್ರಂಥಾಲಯ ಆದೇಶವೆಂದು ಕರೆಯಲಾಗುವ ಆದೇಶವನ್ನು ಮಾಡತಕ್ಕದ್ದು.

(ಖ) (ಕ) ಖಂಡದ ಮೇರೆಗೆ ಮಾಡಿದ ಸ್ಥಳೀಯ ಗ್ರಂಥಾಲಯ ಆದೇಶವನ್ನು ಹಾಗೆ ಮಾಡುವುದು ವಿಹಿತವೆಂದು ರಾಜ್ಯ ಗ್ರಂಥಪಾಲನು ಪರ್ಯಾಲೋಚಿಸಿದಾಗಲೆಲ್ಲಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದೊಡನೆ ಸಮಾಲೋಚಿಸಿ ತಿದ್ದುಪಡಿ ಮಾಡಬಹುದು.

(6) ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು, ರಾಜ್ಯ ಸರ್ಕಾರವು ಮಂಜೂರು ಮಾಡಿದಂತೆ ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಯನ್ನು ಮತ್ತು (5)ನೇ ಉಪ ಪ್ರಕರಣದ ಮೇರೆಗೆ ಮಾಡಲಾದ ಸ್ಥಳೀಯ ಗ್ರಂಥಾಲಯ ಆದೇಶವನ್ನು ಜಾರಿಗೊಳಿಸತಕ್ಕದ್ದು.

**28. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಸಮಿತಿಗಳನ್ನು ನೇಮಕ ಮಾಡುವುದು.–** (1) ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಅದರ ಸದಸ್ಯರಿಂದ ಚುನಾವಣೆಯ ಮೂಲಕ ಈ ಕೆಳಕಂಡ ಸಮಿತಿಗಳನ್ನು ರಚಿಸತಕ್ಕದ್ದು, ಎಂದರೆ:–

(i) ಕಾರ್ಯ ನಿರ್ವಾಹಕ ಸಮಿತಿ; ಮತ್ತು

(ii) ಹಣಕಾಸು ಸಮಿತಿ

(2) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಅದು ಸೂಕ್ತವೆಂದು ಭಾವಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ಸಮಿತಿಗಳನ್ನು ರಚಿಸಬಹುದು.

(3) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಅಧ್ಯಕ್ಷನು, ಕಾರ್ಯನಿರ್ವಾಹಕ ಸಮಿತಿಯ ಮತ್ತು ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯ ಮತ್ತು ಅಧ್ಯಕ್ಷನಾಗಿರತಕ್ಕದ್ದು.

(4) (ಕ) ಕಾರ್ಯನಿರ್ವಾಹಕ ಸಮಿತಿಯು, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಕಾರ್ಯನಿರ್ವಾಹಕ ಪ್ರಕಾರ್ಯಗಳಿಗಾಗಿ ಜವಾಬ್ದಾರಿಯನ್ನು ಹೊಂದಿರತಕ್ಕದ್ದು.

(ಖ) ಹಣಕಾಸು ಸಮಿತಿಯು, ರಾಜಸ್ವದ ಹೆಚ್ಚಳಕ್ಕಾಗಿನ ಪ್ರಸ್ತಾವಗಳನ್ನು ಪರಿಶೀಲಿಸತಕ್ಕುದು, ಜಮೆಗಳು ಹಾಗೂ ವೆಚ್ಚಗಳ ವಿವರ ಪತ್ರಗಳನ್ನು ಪರೀಕ್ಷಿಸತಕ್ಕದ್ದು. ಹಣಕಾಸಿನ ಸ್ಥಿತಿ ಬಾಧಕವನ್ನುಂಟು ಮಾಡುವ ಎಲ್ಲಾ ಹೊಸ ಪ್ರಸ್ತಾವಗಳನ್ನು ಪರ್ಯಾಲೋಚಿಸತಕ್ಕದ್ದು ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ರಾಜಸ್ವ ಮತ್ತು ವೆಚ್ಚವನ್ನು ಸಾಮಾನ್ಯವಾಗಿ ಮೇಲ್ವಿಚಾರಣೆ ಮಾಡತಕ್ಕದ್ದು.

**29. ಗ್ರಂಥಾಲಯ ಸಲಹಾ ಸಮಿತಿಗಳು.–** (1) ಪ್ರತಿಯೊಂದು ಶಾಖಾ ಗ್ರಂಥಾಲಯದ ಸೇವೆ ಮತ್ತು ಸಂಚಾರಿ ಗ್ರಂಥಾಲಯ ಸೇವೆಯ ಮೂಲಕ ಸೇವೆಯನ್ನು ಪಡೆಯುತ್ತಿರುವ ಗ್ರಾಮದಲ್ಲಿನ ಪ್ರತಿಯೊಂದು ಸೇವಾ ಕೇಂದ್ರದ ಗ್ರಂಥಾಲಯ ಸೇವೆಗೆ ಸಂಬಂಧಪಟ್ಟ ಸ್ಥಳೀಯ ಅಗತ್ಯತೆಗಳ ಬಗ್ಗೆ ಸಲಹೆಯನ್ನು ಕೊಡುವ ಉದ್ದೇಶಕ್ಕಾಗಿ, ಈ ಪ್ರಕರಣದ ಉಪಬಂಧಗಳಿಗನುಸಾರವಾಗಿ ಸಲಹಾ ಸಮಿತಿಗಳನ್ನು ರಚಿಸತಕ್ಕದ್ದು.

(2) ಪ್ರತಿಯೊಂದು ಶಾಖಾ ಗ್ರಂಥಾಲಯ ಸಮಿತಿಯು,–

(ಕ) ಶಾಖಾ ಗ್ರಂಥಪಾಲ–ಅವನು ಸಮಿತಿಯ ಪದನಿಮಿತ್ತ ಅಧ್ಯಕ್ಷ ಹಾಗೂ ಸಂಚಾಲಕನಾಗಿರತಕ್ಕದ್ದು;

(ಖ) ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರ ಅಥವಾ ನಿಕಾಯ ಅಥವಾ ಪಂಚಾಯತಿಯಲ್ಲಿ ಆ ಶಾಖಾ ಗ್ರಂಥಾಲಯವು ಸೇವೆ ಸಲ್ಲಿಸುತ್ತಿರುವಂಥ ಪ್ರದೇಶವನ್ನು ಪ್ರತಿನಿಧಿಸುವ ಸಂಬಂಧಪಟ್ಟ ನಿಕಾಯವು ಚುನಾಯಿಸಿದ ಒಬ್ಬ ವ್ಯಕ್ತಿ;

(ಗ) ಸಂದರ್ಭಾನುಸಾರ ನಗರದ ಮುಖ್ಯ ಗ್ರಂಥಪಾಲ ಅಥವಾ ಜಿಲ್ಲೆಯ ಮುಖ್ಯ ಗ್ರಂಥಪಾಲನು ನಾಮನಿರ್ದೇಶನ ಮಾಡಿದ, ಶಾಖಾ ಗ್ರಂಥಾಲಯವು ಇರತಕ್ಕಂಥ ಪ್ರದೇಶದಲ್ಲಿನ ಶೈಕ್ಷಣಿಕ ಸಂಸ್ಥೆಗಳ ಮೂವರು ಅಧ್ಯಾಪಕರು;

(ಘ) ಸಂದರ್ಭಾನುಸಾರ ನಗರದ ಮುಖ್ಯ ಗ್ರಂಥಪಾಲ ಅಥವಾ ಜಿಲ್ಲೆಯ ಮುಖ್ಯ ಗ್ರಂಥಪಾಲನು ನಾಮನಿರ್ದೇಶನ ಮಾಡಿದ ಶಾಖಾ ಗ್ರಂಥಾಲಯದ ಪುಸ್ತಕಗಳನ್ನು ನೋಂದಾಯಿತ ಎರವಲು ಪಡೆಯುವವರಿಂದ ಮೂವರು ವ್ಯಕ್ತಿಗಳು

–ಇವರನ್ನು ಒಳಗೊಂಡಿರತಕ್ಕದ್ದು.

(3) ಪ್ರತಿಯೊಂದು ಗ್ರಾಮ ಸೇವಾ ಗ್ರಂಥಾಲಯ ಸಮಿತಿಯು–

(ಕ) ಆ ಗ್ರಾಮದಲ್ಲಿನ ಸೇವಾ ಕೇಂದ್ರಕ್ಕೆ ಭೇಟಿ ಕೊಡುವ ಸಂಚಾರಿ ಗ್ರಂಥಪಾಲ–ಅವನು ಸಮಿತಿಯ ಪದನಿಮಿತ್ತ ಅಧ್ಯಕ್ಷ ಮತ್ತು ಸಂಚಾಲಕನಾಗಿರತಕ್ಕದ್ದು;

(ಖ) ಜಿಲ್ಲೆಯ ಮುಖ್ಯ ಗ್ರಂಥಪಾಲನು ನಾಮನಿರ್ದೇಶನ ಮಾಡಿದ ಸೇವಾ ಕೇಂದ್ರದಿಂದ ಸೇವೆಯನ್ನು ಪಡೆಯುತ್ತಿರುವ ಪ್ರದೇಶದಲ್ಲಿನ ಶೈಕ್ಷಣಿಕ ಸಂಸ್ಥೆಗಳ ಇಬ್ಬರು ಅಧ್ಯಾಪಕರು;

(ಗ) ಆ ಜಿಲ್ಲೆಯ ಮುಖ್ಯ ಗ್ರಂಥಪಾಲನು ನಾಮನಿರ್ದೇಶನ ಮಾಡಿದ ಸೇವಾ ಕೇಂದ್ರದಿಂದ ಸೇವೆ ಪಡೆಯುತ್ತಿರುವ ಪ್ರದೇಶದಲ್ಲಿನ ನೋಂದಾಯಿತ ಎರವಲು ಪಡೆಯುವವರಿಂದ ಇಬ್ಬರು ವ್ಯಕ್ತಿಗಳು

–ಇವರನ್ನು ಒಳಗೊಂಡಿರತಕ್ಕದ್ದು.

(4) ಶಾಖಾ ಗ್ರಂಥಾಲಯ ಸಮಿತಿ ಮತ್ತು ಗ್ರಾಮ ಸೇವಾ ಗ್ರಂಥಾಲಯ ಸಮಿತಿಯ ನಾಮನಿರ್ದೇಶಿತ ಸದಸ್ಯರು, ಮೂರು ವರ್ಷಗಳ ಅವಧಿಗಾಗಿ ಅಥವಾ ಅವರ ಉತ್ತರಾಧಿಕಾರಿಗಳನ್ನು ನಾಮನಿರ್ದೇಶನ ಮಾಡುವವರೆಗೆ ಪದಧಾರಣ ಮಾಡತಕ್ಕದ್ದು.

## ಅಧ್ಯಾಯ–V

## ಹಣಕಾಸು ಮತ್ತು ಲೆಕ್ಕಪತ್ರಗಳು

**30. ಗ್ರಂಥಾಲಯ ಉಪಕರ.–** (1) ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಜಾರಿಗೆ ಬರುವಂತೆ,–

(ಕ) (i) ಭೂಮಿಗಳು ಮತ್ತು ಕಟ್ಟಡಗಳ ಮೇಲಣ ತೆರಿಗೆ;

(ii) ಬಳಕೆ, ಉಪಯೋಗ ಅಥವಾ ಮಾರಾಟಕ್ಕಾಗಿ ಸ್ಥಳೀಯ ಪ್ರದೇಶದೊಳಕ್ಕೆ ಬರುವ ಪ್ರತಿಯೊಂದು ಸರಕುಗಳ ಮೇಲಣ ತೆರಿಗೆ;

(iii) ವಾಹನಗಳ ಮೇಲಣ ತೆರಿಗೆಯ ಮೇಲೆ;

(iv) ವೃತ್ತಿಗಳು, ವ್ಯಾಪಾರಗಳು, ಆಜೀವಿಕೆಗಳು ಮತ್ತು ಉದ್ಯೋಗಗಳ ಮೇಲಣ ತೆರಿಗೆ;

–ಇವುಗಳ ಮೇಲೆ ಅಧಿಭಾರದ ರೂಪದಲ್ಲಿ ಗ್ರಂಥಾಲಯ ಉಪಕರವನ್ನು ಹಾಗೆ ವಿಧಿಸಲಾದ ತೆರಿಗೆಗಳ ಪ್ರತಿಯೊಂದು ರೂಪಾಯಿಗೆ ಮೂರು ಪೈಸೆ ದರದಲ್ಲಿ, ಅಂಥ ತೆರಿಗೆಗಳನ್ನು ವಿಧಿಸುವುದಕ್ಕಾಗಿ ಉಪಬಂಧಿಸುವ, ಸ್ಥಳೀಯ ಪ್ರಾಧಿಕಾರಗಳಿಗೆ ಸಂಬಂಧಿಸಿದ ಸಂಬಂಧಪಟ್ಟ ಕಾನೂನುಗಳ ಮೇರೆಗೆ ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರದ ಅಧಿಕಾರ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ವಿಧಿಸತಕ್ಕದ್ದು;

(ಖ) ಭೂಮಿಗಳ ಮತ್ತು ಕಟ್ಟಡಗಳ ಮೇಲಿನ ತೆರಿಗೆಯ ಮೇಲೆ ಅಧಿಭಾರದ ರೂಪದಲ್ಲಿ ಗ್ರಂಥಾಲಯ ಉಪಕರವನ್ನು, ಹಾಗೆ ವಿಧಿಸಿದ ತೆರಿಗೆಯ ಪ್ರತಿಯೊಂದು ರೂಪಾಯಿಗೆ ಮೂರು ಪೈಸೆ ದರದಲ್ಲಿ, ಅಂಥ ತೆರಿಗೆಯನ್ನು ವಿಧಿಸಲು ಉಪಬಂಧಿಸಿರುವ, ಸ್ಥಳೀಯ ಪ್ರಾಧಿಕಾರಗಳಿಗೆ ಸಂಬಂಧಪಟ್ಟ ಸುಸಂಗತ ಕಾನೂನುಗಳ ಮೇರೆಗೆ ಪ್ರತಿಯೊಂದು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ವ್ಯಾಪ್ತಿಯೊಳಗಿನ ಪ್ರದೇಶದಲ್ಲಿ ವಿಧಿಸತಕ್ಕದ್ದು.

(2) ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು, ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು, ಅಧಿಸೂಚನೆಯ ಮೂಲಕ ವಿಧಿಸಿದ ತೆರಿಗೆಯ ಪ್ರತಿಯೊಂದು ರೂಪಾಯಿಗೆ, ದರವು ಆರು ಪೈಸೆಯನ್ನು ಮೀರತಕ್ಕದ್ದಲ್ಲವೆಂಬ ಷರತ್ತಿಗೊಳಪಟ್ಟು (1)ನೇ ಉಪ ಪ್ರಕರಣದ (ಕ) ಅಥವಾ (ಖ) ಖಂಡದಲ್ಲಿ ನಿರ್ದಿಷ್ಟಪಡಿಸಿದ ತೆರಿಗೆಯ ಯಾವುದೇ ಬಾಬಿನ ಮೇಲೆ ವಿಧಿಸಿದ ಗ್ರಂಥಾಲಯ ಉಪಕರದ ದರವನ್ನು ಹೆಚ್ಚಿಸಬಹುದು.

(3) (1)ನೇ ಉಪ ಪ್ರಕರಣದ (ಕ) ಖಂಡ ಅಥವಾ (ಖ) ಖಂಡದ ಮೇರೆಗೆ ವಿಧಿಸಿದ ಅಥವಾ (2)ನೇ ಉಪ ಪ್ರಕರಣದ ಮೇರೆಗೆ ಹೆಚ್ಚಿಸಿದ ಉಪಕರವನ್ನು, ಆ ಪ್ರದೇಶದ ಮೇಲೆ ಅಧಿಕಾರ ವ್ಯಾಪ್ತಿ ಹೊಂದಿರುವ ಪೌರ ನಿಗಮ, ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರನಿಕಾಯ ಅಥವಾ ಗ್ರಾಮ ಪಂಚಾಯಿತಿಯು ಅಥವಾ ಇತರ ಸ್ಥಳೀಯ ಪ್ರಾಧಿಕಾರವು, ಉಪಕರವು ಆ ಪ್ರದೇಶದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಗತ ಕಾನೂನುಗಳ ಮೇರೆಗೆ ಸಂದಾಯ ಮಾಡಬೇಕಾದ ಸದರಿ ಖಂಡದಲ್ಲಿ ಉಲ್ಲೇಖಿಸಿದ ತೆರಿಗೆಯಾಗಿದ್ದಿದ್ದರೆ ಹೇಗೋ ಹಾಗೆ ಸಂಗ್ರಹಿಸತಕ್ಕದ್ದು ಮತ್ತು ಸದರಿ ತೆರಿಗೆಯನ್ನು ವಿಧಿಸುವುದಕ್ಕೆ ಮತ್ತು ಅದರ ಸಂಗ್ರಹಣೆಗೆ ಸಂಬಂಧಪಟ್ಟ ಕಾನೂನುಗಳು ನಿಯಮಿಸಬಹುದಾದಂಥ ಮಾರ್ಪಟುಗಳಿಗೊಳಪಟ್ಟು ಅನ್ವಯಿಸತಕ್ಕದ್ದು.

(4) (3)ನೇ ಉಪ ಪ್ರಕರಣದ ಮೇರೆಗೆ ಅದು ಸಂಗ್ರಹಿಸಿದ ಉಪಕರದಲ್ಲಿ, ಪ್ರತಿಯೊಂದು ಸ್ಥಳೀಯ ಪ್ರಾಧಿಕಾರಕ್ಕೆ ಸಂಗ್ರಹಣೆ ಖರ್ಚಿನ ಬಗ್ಗೆ ಸಂಗ್ರಹಿಸಿದ ಮೊಬಲಗಿನ ಶೇಕಡಾ ಹತ್ತರಷ್ಟನ್ನು ಉಳಿಸಿಕೊಳ್ಳಲು ಹಕ್ಕಿರತಕ್ಕದ್ದು ಮತ್ತು ಶಿಲ್ಕನ್ನು ಸಂದರ್ಭಾನುಸಾರ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಸಂದಾಯ ಮಾಡತಕ್ಕದ್ದು.

**31. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಭೂಕಂದಾಯದ ಒಂದು ಭಾಗವನ್ನು ಸರ್ಕಾರವು ಅನುದಾನವಾಗಿ ಕೊಡತ**ಕ್ಕದ್ದು.– (1) ರಾಜ್ಯ ಸರ್ಕಾರವು, ಪ್ರತಿಯೊಂದು ಜಿಲ್ಲೆಯಲ್ಲಿ ಸಂಗ್ರಹಿಸಿದ ಭೂಕಂದಾಯದ ಶೇಕಡಾ ಮೂರಕ್ಕೆ ಸಮಾನವಾದ ಮೊಬಲಗನ್ನು ಆ ಜಿಲ್ಲೆಯ ಗ್ರಂಥಾಲಯ ಪ್ರಾಧಿಕಾರಕ್ಕೆ ವಾರ್ಷಿಕ ಅನುದಾನವಾಗಿ ಕೊಡತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಕೊಟ್ಟ ಮೊಬಲಗನ್ನು ನಿಯಮಿಸಬಹುದಾದಂಥ ಕಾಲಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಜಿಲ್ಲಾ ಗ್ರಂಥಾಲಯ ನಿಧಿಗೆ ಜಮೆ ಮಾಡತಕ್ಕದ್ದು.

(3) (1)ನೇ ಉಪ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲೆಯ ಭೂಕಂದಾಯ ಸಂಗ್ರಹಣೆಯು–

(ಕ) ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ Xನೇ ಅಧ್ಯಾಯದ ಮೇರೆಗೆ ಭೂಕಂದಾಯದ ಪರಿಷ್ಕರಿಸಿದ ಕಂದಾಯ ವ್ಯವಸ್ಥೆಯಾಗುವವರೆಗೆ ಅಂಥ ನಿರ್ಧರಣೆಯ ದಿನಾಂಕಕ್ಕೆ ಮುಂಚಿನ ಮೂರು ವರ್ಷಗಳ ಅವಧಿಗಾಗಿ ಆ ಜಿಲ್ಲೆಯಲ್ಲಿ ಸಂಗ್ರಹಿಸಿದ ಸರಾಸರಿ ಭೂಕಂದಾಯದ ಆಧಾರದ ಮೇಲೆ ನಿರ್ಧರಿಸಿದ ಭೂಕಂದಾಯ;

(ಖ) ಹಿಂದೆ ಹೇಳಿದ ಪರಿಷ್ಕರಿಸಿದ ಕಂದಾಯ ವ್ಯವಸ್ಥೆ ಆಧಾರದ ಮೇಲೆ ಭೂಕಂದಾಯವನ್ನು ನಿರ್ಧರಣೆ ಮಾಡಿದ ತರುವಾಯ, ಯಾವ ವರ್ಷಕ್ಕಾಗಿ ಅನುದಾನವನ್ನು ಕೊಡಲಾಗಿದೆಯೋ, ಆ ಹಿಂದಿನ ವರ್ಷಾವಧಿಯಲ್ಲಿ ಸಂಗ್ರಹಿಸಿದ ಭೂಕಂದಾಯ ಎಂಬ ಅರ್ಥವನ್ನು ಹೊಂದಿರತಕ್ಕದ್ದು.

**32. ನಗರ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗಳು.**– (1) ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರ ಮತ್ತು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು, ಸಂದರ್ಭಾನುಸಾರ ನಗರ ಗ್ರಂಥಾಲಯ ನಿಧಿ ಮತ್ತು ಜಿಲ್ಲಾ ಗ್ರಂಥಾಲಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಇಟ್ಟುಕೊಂಡು ಬರತಕ್ಕದ್ದು. ಅದರಿಂದ ಅಧಿನಿಯಮದ ಮೇರೆಗಿನ ಅದರ ಎಲ್ಲಾ ಸಂದಾಯಗಳನ್ನು ಮಾಡತಕ್ಕದ್ದು.

(2) ಸಂದರ್ಭಾನುಸಾರ ನಗರ ಗ್ರಂಥಾಲಯ ನಿಧಿ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗೆ, ಈ ಕೆಳಕಂಡ ಮೊತ್ತಗಳನ್ನು ಜಮೆ ಮಾಡತಕ್ಕದ್ದು, ಎಂದರೆ:–

(ಕ) 30ನೇ ಪ್ರಕರಣದ (4)ನೇ ಉಪ ಪ್ರಕರಣದ ಮೇರೆಗೆ ಸ್ಥಳೀಯ ಪ್ರಾಧಿಕಾರವು ಸಂದಾಯ ಮಾಡಿದ ಉಪಕರದ ಮೊಬಲಗು;

(ಖ) 31ನೇ ಪ್ರಕರಣದ ಮೇರೆಗೆ ಮಾಡಿದ ಅನುದಾನ;

(ಗ) ಸಾರ್ವಜನಿಕ ಗ್ರಂಥಾಲಯಗಳ ಪ್ರಯೋಜನಕ್ಕಾಗಿ ಗ್ರಂಥಾಲಯ ಪ್ರಾಧಿಕಾರಕ್ಕೆ ಕೊಟ್ಟ ವಂತಿಗೆಗಳು, ದಾನಗಳು ಮತ್ತು ದತ್ತಿಗಳಿಂದ ಬಂದ ಆದಾಯ;

(ಘ) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರವು ಕೊಡಬಹುದಾದಂಥ ಅನುದಾನ;

(ಙ) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಸಂಗ್ರಹಿಸಿದ ನಿಧಿಗಳು ಮತ್ತು ಇತರ ಮೊಬಲಗು.

**33. ರಾಜ್ಯ ಗ್ರಂಥಾಲಯ ನಿಧಿ.–** (1) ರಾಜ್ಯ ಗ್ರಂಥಾಲಯ ಪ್ರಾಧಿಕಾರವು ರಾಜ್ಯ ಗ್ರಂಥಾಲಯ ನಿಧಿ ಎಂದು ಕರೆಯಲಾಗುವ ನಿಧಿಯನ್ನು ಇಟ್ಟುಕೊಂಡು ಬರತಕ್ಕದ್ದು ಮತ್ತು ಅದರಿಂದ ಈ ಅಧಿನಿಯಮದ ಮೇರೆಗಿನ ಅದರ ಎಲ್ಲಾ ಸಂದಾಯಗಳನ್ನು ಮಾಡತಕ್ಕದ್ದು.

(2) ಈ ಕೆಳಕಂಡ ಮೊತ್ತಗಳನ್ನು, ರಾಜ್ಯ ಗ್ರಂಥಾಲಯ ನಿಧಿಗೆ ಜಮೆ ಮಾಡತಕ್ಕದ್ದು, ಎಂದರೆ:–

(ಕ) ರಾಜ್ಯ ಗ್ರಂಥಾಲಯಕ್ಕೆ ವಹಿಸಿಕೊಟ್ಟ ಕರ್ತವ್ಯಗಳನ್ನು ನೆರವೇರಿಸಲು ಅದಕ್ಕೆ ರಾಜ್ಯ ಸರ್ಕಾರವು ಕೊಟ್ಟ ಅನುದಾನಗಳು;

(ಖ) ಕೇಂದ್ರ ಸರ್ಕಾರವು ಕೊಡಬಹುದಾದಂಥ ಅನುದಾನಗಳು;

(ಗ) ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಕೊಟ್ಟ ವಂತಿಗೆಗಳು ಮತ್ತು ದಾನಗಳು;

(ಘ) ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳು ಅಥವಾ ಉಪವಿಧಿಗಳ ಮೇರೆಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರವು ಸಂಗ್ರಹಿಸಿದ ನಿಧಿಗಳು ಮತ್ತು ಇತರ ಮೊಬಲಗುಗಳು.

**34. ಲೆಕ್ಕ ಪತ್ರಗಳು.–** (1) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರ ಮತ್ತು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಜಮೆಗಳು ಮತ್ತು ವೆಚ್ಚಗಳ ಲೆಕ್ಕವನ್ನು ಇಡತಕ್ಕುದು.

(2) ಆ ಲೆಕ್ಕಪತ್ರಗಳು ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು ಮತ್ತು ಅವು ಲೆಕ್ಕಪರಿಶೋಧನೆ, ಮಂಜೂರಾತಿ ಮತ್ತು ಅಧಿಭಾರ ಹೊರಿಸುವುದಕ್ಕೆ ಒಳಪಟ್ಟಿರತಕ್ಕದ್ದು ಮತ್ತು ಅದರೊಂದಿಗೆ ಇತರ ಎಲ್ಲಾ ವಿಷಯಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ರೀತಿಯಲ್ಲಿ ವ್ಯವಹರಿಸತಕ್ಕದ್ದು.

## ಅಧ್ಯಾಯ–VI

## ರಾಜ್ಯ ಕೇಂದ್ರ ಗ್ರಂಥಾಲಯ

**35. ಬೆಂಗಳೂರು ಸಾರ್ವಜನಿಕ ಗ್ರಂಥಾಲಯವು ರಾಜ್ಯ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತಗೊಳ್ಳುವುದು.–** (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ (ಇಲ್ಲಿ ಇನ್ನು ಮುಂದೆ ಈ ಅಧ್ಯಾಯದಲ್ಲಿ ಗೊತ್ತುಪಡಿಸಿದ ದಿನಾಂಕವೆಂದು ಉಲ್ಲೇಖಿತವಾಗಿದೆ) ಜಾರಿಗೆ ಬರುವಂತೆ ಈಗ, ಸಾರ್ವಜನಿಕ ಗ್ರಂಥಾಲಯ ವ್ಯವಸ್ಥಾಪನಾ ಸಮಿತಿ, ಬೆಂಗಳೂರು–ಇದರಲ್ಲಿ ನಿಹಿತವಾಗಿರುವ ಬೆಂಗಳೂರಿನ ಸಾರ್ವಜನಿಕ ಗ್ರಂಥಾಲಯದ ಸಮಗ್ರ ವ್ಯವಸ್ಥಾಪನೆ ಮತ್ತು ನಿಯಂತ್ರಣವು ರಾಜ್ಯ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತಗೊಳ್ಳತಕ್ಕದ್ದು.

(2) ಗೊತ್ತುಪಡಿಸಿದ ದಿವಸದಿಂದ ಈಗ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರ ಮೇರೆಗೆ ನೋಂದಾಯಿತವಾಗಿರುವುದಾಗಿ ಭಾವಿಸಲಾಗಿರುವ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1904ರ ಮೇರೆಗೆ ನೋಂದಾಯಿಸಿದ ಸಂಘವಾಗಿರುವ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥಾಪನಾ ಸಮಿತಿ ಬೆಂಗಳೂರು–ಇದು ವಿಘಟಿತಗೊಳ್ಳತಕ್ಕದ್ದು ಮತ್ತು ಗೊತ್ತುಪಡಿಸಿದ ದಿವಸಕ್ಕೆ ನಿಕಟ ಪೂರ್ವದಲ್ಲಿ ಸದರಿ ಸಂಘಕ್ಕೆ ಸೇರಿದ ಅಥವಾ ಅದರಲ್ಲಿ ನಿಹಿತವಾಗಿದ್ದ ಎಲ್ಲಾ ಚರ ಮತ್ತು ಸ್ಥಿರ ಸ್ವತ್ತುಗಳು ಮತ್ತು ಸದರಿ ಸಂಘದ ಎಲ್ಲಾ ಹಕ್ಕುಗಳು, ಅಧಿಕಾರಗಳು ಮತ್ತು ವಿಶೇಷಾಧಿಕಾರಗಳು ರಾಜ್ಯ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗಾಗಿ ಮತ್ತು ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

(3) ಗೊತ್ತುಪಡಿಸಿದ ದಿನಾಂಕದಿಂದ ಸದರಿ ಸಂಘದ ಎಲ್ಲಾ ಋಣಗಳು ಮತ್ತು ಹೊಣೆಗಾರಿಕೆಗಳು ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿತವಾಗತಕ್ಕದ್ದು ಹಾಗೂ ಅದರಲ್ಲಿ ನಿಹಿತವಾಗತಕ್ಕದ್ದು.

(4) ಸದರಿ ಸಂಘದ ಪ್ರತಿಯೊಬ್ಬ ನಿಯೋಜಿತನು, ಗೊತ್ತುಪಡಿಸಿದ ದಿವಸದಿಂದ ರಾಜ್ಯ ಸರ್ಕಾರದ ನಿಯೋಜಿತನಾಗತಕ್ಕದ್ದು ಮತ್ತು ರಾಜ್ಯ ಸರ್ಕಾರದ ಅಧೀನದಲ್ಲಿ ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಯ ಸದಸ್ಯನಾಗಿ ಸದರಿ ಸಂಘದ ನಿಯೋಜಿತನಾಗಿ ಅದನ್ನು ಅವನು ಧಾರಣ ಮಾಡಬಹುದಾಗಿದ್ದಂಥ ಅಂಥದೇ ಅವಧಿ, ಅದೇ ಪರಿಶ್ರಮ ಧನದ ಮೇಲೆ ಮತ್ತು ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಭವಿಷ್ಯ ನಿಧಿ, ಉಪದಾನ ಮತ್ತು ಇತರ ವಿಷಯಗಳ ಬಗ್ಗೆ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ, ಅವನು ಪದಧಾರಣ ಮಾಡತಕ್ಕುದು ಮತ್ತು ರಾಜ್ಯ ಸರ್ಕಾರವು ಅವನ ಪರಿಶ್ರಮಧನ, ನಿಬಂಧನೆಗಳು ಮತ್ತು ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸಿದ ಹೊರತು ಮತ್ತು ಅಲ್ಲಿಯವರೆಗೆ ಅವನು ಹಾಗೆ ಮಾಡುವುದು ಮುಂದುವರಿಯತಕ್ಕದ್ದು.

**36. ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯ.–** (1) ಗೊತ್ತುಪಡಿಸಿದ ದಿವಸದಿಂದ ಬೆಂಗಳೂರಿನ ಸಾರ್ವಜನಿಕ ಗ್ರಂಥಾಲಯವು ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯವಾಗಿರತಕ್ಕದ್ದು.

(2) (ಕ) ಕರ್ನಾಟಕ ರಾಜ್ಯ ಗ್ರಂಥಾಲಯವನ್ನು ರಾಜ್ಯ ಗ್ರಂಥಾಲಯ ವ್ಯವಸ್ಥೆಯ ಸರಿಯಾದ ಕಾರ್ಯನಿರ್ವಹಣೆಗಾಗಿ ಪುಸ್ತಕಗಳ ಮತ್ತು ಇತರ ವಸ್ತುಗಳ ಭಂಡಾರವೆಂದು ಇಟ್ಟುಕೊಂಡು ಬರತಕ್ಕದ್ದು.

(ಖ) ಸಾಮಾನ್ಯ ಗ್ರಂಥಾಲಯವಾಗಿರುವುದರ ಜೊತೆಗೆ ರಾಜ್ಯ ಕೇಂದ್ರ ಗ್ರಂಥಾಲಯವು ಈ ಕೆಳಕಂಡ ವಿಭಾಗಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(i) ಕೃತಿ ಸ್ವಾಮ್ಯ ಸಂಗ್ರಹಗಳ ರಾಜ್ಯ ವಿಭಾಗ;

(ii) ಅಂಧರಿಗಾಗಿನ ಒಂದು ರಾಜ್ಯ ಗ್ರಂಥಾಲಯ;

(iii) ಅಂತರ್ ಗ್ರಂಥಾಲಯ ಎರವಲು ಬಗ್ಗೆ ರಾಜ್ಯ ವಿಭಾಗ;

(iv) ರಾಜ್ಯ ಗ್ರಂಥ ವಿವರಣ ಪಟ್ಟಿಯ ವಿಭಾಗ;

(v) ತಾಂತ್ರಿಕ ಸೇವೆಯ ರಾಜ್ಯ ವಿಭಾಗ;

(vi) ನಿಯಮಿಸಬಹುದಾದಂಥ ಇತರ ಶಾಖೆಗಳು ;

**37. ರಾಜ್ಯ ಕೇಂದ್ರ ಗ್ರಂಥಾಲಯದ ವಿಭಾಗಗಳು.–** (1) (ಕ) ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867ರ (ಕೇಂದ್ರ ಅಧಿನಿಯಮ 1867ರ 25) ಮೇರೆಗೆ ಸ್ವೀಕರಿಸಿದ ಪ್ರತಿಯೊಂದು ಪುಸ್ತಕದ ಒಂದು ಪ್ರತಿಯನ್ನು ಕೃತಿ ಸ್ವಾಮ್ಯಗಳ ವಿಭಾಗವೆಂದು ರಾಜ್ಯ ಕೇಂದ್ರ ಗ್ರಂಥಾಲಯದಲ್ಲಿ ಇಡತಕ್ಕದ್ದು.

(ಖ) ಕೃತಿ ಸ್ವಾಮ್ಯದ ವಿಭಾಗದಲ್ಲಿನ ಪುಸ್ತಕಗಳ ಪ್ರತಿಗಳನ್ನು ಯಾವುದೇ ಬಗೆಯ ಎರವಲಿನ ರೂಪದಲ್ಲಿ ಕೊಡತಕ್ಕದ್ದಲ್ಲ. ಆದರೆ ಗ್ರಂಥಾಲಯದ ಆವರಣದಲ್ಲಿ ಅವುಗಳನ್ನು ಪರಾಮರ್ಶೆಗಾಗಿ ಲಭ್ಯವಾಗುವಂತೆ ಮಾಡಬಹುದು.

(2) (ಕ) ಅಂಧರಿಗಾಗಿ ಪುಸ್ತಕಗಳ ತಯಾರಿಕೆ ಮತ್ತು ದಾಸ್ತಾನು ಪುಸ್ತಕಗಳ ಧ್ವನಿ ಮುದ್ರಿಕೆ ಮತ್ತು ಅಂಥವೇ ಸಾಮಗ್ರಿಗಳು ಮತ್ತು ಅಂಧರ ಉಪಯೋಗಕ್ಕಾಗಿ ಅಂಥ ಪುಸ್ತಕಗಳು ಮತ್ತು ಸಾಮಗ್ರಿಗಳನ್ನು ಕೊಡುವುದನ್ನು ಅಂಧರಿಗಾಗಿ ರಾಜ್ಯ ಗ್ರಂಥಾಲಯಕ್ಕೆ ಸಂಬಂಧಪಟ್ಟ ವಿಭಾಗದಲ್ಲಿ ವ್ಯವಹರಿಸತಕ್ಕದ್ದು.

(ಖ) ರಾಜ್ಯ ವಿಭಾಗ ಗ್ರಂಥಾಲಯವು ಭಾರತದಲ್ಲಿ ಅಂಧರಿಗಾಗಿನ ಇತರ ಗ್ರಂಥಾಲಯಗಳೊಂದಿಗೆ ಜೊತೆಗೂಡಿ ಕೆಲಸ ಮಾಡಬಹುದು ಮತ್ತು ಅಂಥ ಜೊತೆಗೂಡಿ ಕೆಲಸ ಮಾಡುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಕೆಲಸವನ್ನು ಕೈಗೊಳ್ಳಬಹುದು.

(3) (ಕ) ಅಂತರ್ ಗ್ರಂಥಾಲಯ ಎರವಲಿನ ರಾಜ್ಯ ವಿಭಾಗವು, ಸಾರ್ವಜನಿಕ ಗ್ರಂಥಾಲಯಗಳು, ವಿದ್ಯಾ ವಿಷಯಕ ಗ್ರಂಥಾಲಯಗಳು, ರಾಜ್ಯದ ಒಡೆತನದಲ್ಲಿರುವ ಗ್ರಂಥಾಲಯಗಳು, ನೆರವು ಪಡೆಯುವ ಗ್ರಂಥಾಲಯಗಳು ಮತ್ತು ರಾಜ್ಯದಲ್ಲಿನ ಅನ್ಯ ಗ್ರಂಥಾಲಯಗಳ ನಡುವೆ ನಿಯಮಿಸಬಹುದಾದಂತೆ ಅಂತರ್ ಗ್ರಂಥಾಲಯ ಎರವಲು ಯೋಜನೆಗಳನ್ನು ಕಾರ್ಯಗತಗೊಳಿಸತಕ್ಕದ್ದು.

(ಖ) ರಾಜ್ಯ ಕೇಂದ್ರ ಗ್ರಂಥಾಲಯವು, ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು ಅಂತರ್ ರಾಜ್ಯ ಗ್ರಂಥಾಲಯ ಯಾವುದೇ ಎರವಲು ಯೋಜನೆಯಲ್ಲಿ ಜೊತೆಗೂಡಿ ಕೆಲಸ ಮಾಡಬಹುದು.

(4) (ಕ) ರಾಜ್ಯ ಗ್ರಂಥ ವಿವರಣಾ ಪಟ್ಟಿ ವಿಭಾಗವು, ನಿಯಮಿಸಬಹುದಾದಂಥ ಗ್ರಂಥ ವಿವರಣಾ ಪಟ್ಟಿ ಕೆಲಸವನ್ನು ಕೈಗೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಸರ್ಕಾರದ ಇಲಾಖೆಗಳು ಮತ್ತು ರಾಜ್ಯದಲ್ಲಿನ, ಶೈಕ್ಷಣಿಕ ಮತ್ತು ಇತರ ನಿಕಾಯಗಳೊಂದಿಗೆ ಜೊತೆಗೂಡಿ ಕೆಲಸ ಮಾಡಬಹುದು.

(ಖ) ರಾಜ್ಯ ಕೇಂದ್ರ ಗ್ರಂಥಾಲಯವು, ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು, ಭಾರತದಲ್ಲಿನ ಗ್ರಂಥ ವಿವರಣಾ ಪಟ್ಟಿ ಕೇಂದ್ರಗಳು ಅಥವಾ ಏಜನ್ಸಿಗಳೊಡನೆ ಜೊತೆಗೂಡಿ ಕೆಲಸ ಮಾಡಬಹುದು ಮತ್ತು ಹಾಗೆ ಜೊತೆಗೂಡಿ ಕೆಲಸ ಮಾಡುವ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಂಥ ಗ್ರಂಥ ವಿವರಣಾ ಪಟ್ಟಿ ಕೆಲಸವನ್ನು ಕೈಗೊಳ್ಳಬಹುದು.

(5) (ಕ) ರಾಜ್ಯ ತಾಂತ್ರಿಕ ಸೇವಾ ವಿಭಾಗವನ್ನು ನಿಯಮಿಸಬಹುದಾದಂಥ ಯೋಜನೆಗಳಿಗನುಸಾರವಾಗಿ ಸಾರ್ವಜನಿಕ ಗ್ರಂಥಾಲಯಗಳು, ವಿದ್ಯಾ ವಿಷಯಕ ಗ್ರಂಥಾಲಯಗಳು, ರಾಜ್ಯದ ಒಡೆತನದಲ್ಲಿರುವ ಗ್ರಂಥಾಲಯಗಳು, ನೆರವು ಪಡೆಯುವ ಗ್ರಂಥಾಲಯಗಳು ಮತ್ತು ಅನ್ಯ ಗ್ರಂಥಾಲಯಗಳಿಗಾಗಿ ಪುಸ್ತಕದ ಆರ್ಜನೆ, ವರ್ಗೀಕರಣ ಮತ್ತು ಗ್ರಂಥಸೂಚಿ ತಯಾರಿಕೆಯಂಥ ತಾಂತ್ರಿಕ ಸೇವೆಗಳನ್ನು ಕೇಂದ್ರೀಕರಿಸುವುದಕ್ಕಾಗಿ ಇಟ್ಟುಕೊಂಡು ಬರತಕ್ಕದ್ದು.

(ಖ) ರಾಜ್ಯ ಕೇಂದ್ರ ಗ್ರಂಥಾಲಯವು, ರಾಜ್ಯ ಸರ್ಕಾರದ ಅನುಮೋದನೆಯನ್ನು ಪಡೆದು ಭಾರತದಲ್ಲಿನ ಅಂಥದೇ ಇತರ ತಾಂತ್ರಿಕ ಸೇವಾ ಕೇಂದ್ರಗಳೊಂದಿಗೆ ಜೊತೆ ಗೂಡಿ ಕೆಲಸ ಮಾಡಬಹುದು ಮತ್ತು ಹಾಗೆ ಜೊತೆಗೂಡಿ ಕೆಲಸ ಮಾಡುವ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದಂಥ ತಾಂತ್ರಿಕ ಕೆಲಸವನ್ನು ಕೈಗೊಳ್ಳಬಹುದು.

ಪರಂತು, (3)ನೇ ಉಪ ಪ್ರಕರಣ ಅಥವಾ (5)ನೇ ಉಪ ಪ್ರಕರಣದ ಮೇರೆಗಿನ ಯಾವುದೇ ಯೋಜನೆಯನ್ನು ರಾಜ್ಯವು ಒಡೆತನ ಹೊಂದಿದ ಅಥವಾ ಅದರ ನಿಯಂತ್ರಣದಲ್ಲಿರುವ ಗ್ರಂಥಾಲಯವನ್ನು ಹೊರತುಪಡಿಸಿ ಯಾವುದೇ ಇತರ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ, ಅಂಥ ಗ್ರಂಥಾಲಯದ ಒಡೆತನವನ್ನು ಹೊಂದಿರುವಂಥ ಅಥವಾ ನಿಯಂತ್ರಣವನ್ನು ಹೊಂದಿರುವಂಥ ಪ್ರಾಧಿಕಾರದ ಸಹಮತಿಯಿಂದಲ್ಲದೆ ಕಾರ್ಯಗತಗೊಳಿಸತಕ್ಕದ್ದಲ್ಲ.

## ಅಧ್ಯಾಯ–VII

## ವರದಿಗಳು, ವಿವರಪಟ್ಟಿಕೆಗಳು ಮತ್ತು ಪರಿಶೀಲನೆ

**38. ವರದಿಗಳು ಮತ್ತು ವಿವರ ಪಟ್ಟಿಕೆಗಳು.–** ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಮತ್ತು ಸಾರ್ವಜನಿಕ ಗ್ರಂಥಾಲಯದ ಪ್ರಭಾರದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯು, ರಾಜ್ಯ ಗ್ರಂಥಪಾಲ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಗೆ, ಸದರಿ ಗ್ರಂಥಪಾಲನು ಅಥವಾ ಅಧಿಕೃತಗೊಂಡ ವ್ಯಕ್ತಿಯು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವರದಿಗಳು ಮತ್ತು ವಿವರ ಪಟ್ಟಿಕೆಗಳನ್ನು ಒಪ್ಪಿಸತಕ್ಕದ್ದು ಮತ್ತು ಅಂಥ ಮಾಹಿತಿಯನ್ನು ಒದಗಿಸತಕ್ಕದ್ದು.

**39. ಗ್ರಂಥಾಲಯಗಳ ಪರಿಶೀಲನೆ.–** ರಾಜ್ಯ ಗ್ರಂಥಪಾಲನು ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ಯಾವನೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು

ಮತ್ತು ಉಪವಿಧಿಗಳನ್ನು ಕ್ರಮಬದ್ಧವಾಗಿ ಕಾರ್ಯಗತಗೊಳಿಸಲಾಗುತ್ತಿರುವುದೋ ಹೇಗೆ ಎಂಬುದನ್ನು ಸ್ವತಃ ಮನದಟ್ಟು ಮಾಡಿಕೊಳ್ಳುವ ಉದ್ದೇಶಕ್ಕಾಗಿ ಯಾವುದೇ ಸಾರ್ವಜನಿಕ ಗ್ರಂಥಾಲಯ ಅಥವಾ ಅದಕ್ಕೆ ಲಗತ್ತಾದ ಯಾವುದೇ ಸಂಸ್ಥೆಯನ್ನು ಪರಿಶೀಲಿಸಬಹುದು.

**40. ವಾರ್ಷಿಕ ವರದಿ.–** (1) ರಾಜ್ಯ ಗ್ರಂಥಪಾಲನು, ಪ್ರತಿಯೊಂದು ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ನಿಯಮಿಸಬಹುದಾದಂಥ ಮಾಹಿತಿ ಮತ್ತು ವಿವರಗಳೊಂದಿಗೆ ಆ ವರ್ಷದಲ್ಲಿ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು ಸಾಧಿಸಿದ ಪ್ರಗತಿಯ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಒಪ್ಪಿಸತಕ್ಕದ್ದು.

(2) ರಾಜ್ಯ ಗ್ರಂಥಪಾಲನು, ಪ್ರತಿಯೊಂದು ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ನಿಯಮಿಸಬಹುದಾದಂಥ ಮಾಹಿತಿ ಮತ್ತು ವಿವರಗಳೊಂದಿಗೆ ಆ ವರ್ಷದಲ್ಲಿ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿಯನ್ನು ತಯಾರಿಸತಕ್ಕದ್ದು ಮತ್ತು ಅಂಥ ವರದಿಯನ್ನು ರಾಜ್ಯ ಸರ್ಕಾರಕ್ಕೆ ರಾಜ್ಯ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕಕ್ಕೆ ಮುಂಚೆ ಒಪ್ಪಿಸತಕ್ಕದ್ದು.

## ಅಧ್ಯಾಯ–VIII

## ಸಂಕೀರ್ಣ

**41. ನಿಯಮಗಳ ರಚನಾಧಿಕಾರ.–** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು.

(ಕ) ರಾಜ್ಯ ಗ್ರಂಥಾಲಯ ಪ್ರಾಧಿಕಾರಗಳು, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು, ಶಾಖಾ ಗ್ರಂಥಾಲಯ ಸಮಿತಿಗಳು ಮತ್ತು ಗ್ರಾಮ ಸೇವಾ ಗ್ರಂಥಾಲಯ ಸಮಿತಿಗಳಿಗೆ ಸದಸ್ಯರನ್ನು ಚುನಾಯಿಸುವ ಅಥವಾ ನಾಮನಿರ್ದೇಶನ ಮಾಡುವ ವಿಧಾನ;

(ಖ) ರಾಜ್ಯ ಗ್ರಂಥಾಲಯ ನಿಧಿ ಮತ್ತು ನಗರ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗಳನ್ನು ಇಟ್ಟುಕೊಂಡು ಬರುವುದು;

(ಗ) ರಾಜ್ಯ ಕೇಂದ್ರ ಗ್ರಂಥಾಲಯದ ಆಡಳಿತ, ಪರಿಶೀಲನೆ ಹಾಗೂ ವ್ಯವಸ್ಥಾಪನೆ;

(ಘ) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು ಲೆಕ್ಕಪತ್ರಗಳನ್ನು ಇಡುವುದು ಮತ್ತು ಲೆಕ್ಕ ಪತ್ರಗಳ ಲೆಕ್ಕ ಪರಿಶೋಧನಾ ವಿವರ ಪತ್ರ ಮತ್ತು ಲೆಕ್ಕ ಪರಿಶೋಧಕರ ವರದಿಗಳ ಪ್ರಕಟಣೆ;

(ಙ) ನೆರವು ಪಡೆಯುವ ಗ್ರಂಥಾಲಯಗಳಿಗೆ ಸಹಾಯಾನುದಾನಗಳು ಮತ್ತು ಅಂಥ ಗ್ರಂಥಾಲಯಗಳು ಕಾಪಾಡಿಕೊಂಡು ಬರಬೇಕಾದ ಗುಣಮಟ್ಟ;

(ಚ) ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು;

(ಛ) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳಿಂದ ಸಮಿತಿಗಳ ರಚನೆ;

(ಜ) ಕರಾರುಗಳನ್ನು ಮಾಡಿಕೊಳ್ಳಲು ಅಥವಾ ಸ್ವತ್ತನ್ನು ಆರ್ಜಿಸಲು, ಧಾರಣ ಮಾಡಲು ಅಥವಾ ವಿಲೇ ಮಾಡಲು ರಾಜ್ಯ ಗ್ರಂಥಾಲಯ ಪ್ರಾಧಿಕಾರ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು ಒಳಪಡಬೇಕಾದಂಥ ಪರಿಬಂಧಗಳು ಮತ್ತು ಷರತ್ತುಗಳು

–ಇವುಗಳಿಗಾಗಿ ಉಪಬಂಧಿಸಬಹುದು.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಿರಬಹುದಾದಂಥ ಒಟ್ಟು ಮೂವತ್ತು ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳಿಗೆ ನಿಕಟೋತ್ತರವಾದ ಅಧಿವೇಶನಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**42. ಉಪವಿಧಿಗಳನ್ನು ರಚಿಸಲು ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಿಗಳ ಅಧಿಕಾರ.–** (1) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಈ ಅಧಿನಿಯಮದ ಉಪಬಂಧಗಳು ಹಾಗೂ ಅದರ ಮೇರೆಗೆ ರಚಿಸಲಾದ ನಿಯಮಗಳಿಗೊಳಪಟ್ಟು ಸಾಮಾನ್ಯವಾಗಿ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ಮತ್ತು ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದು ಅಧಿಸೂಚನೆಯ ಮೂಲಕ ಉಪವಿಧಿಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಅಂಥ ಉಪವಿಧಿಗಳು ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

(ಕ) ಅಂಥ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ರಾಜ್ಯ ಗ್ರಂಥಾಲಯ ಪ್ರಾಧಿಕಾರ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ನಿಯಂತ್ರಣದಲ್ಲಿರುವ ಸಾರ್ವಜನಿಕ ಗ್ರಂಥಾಲಯಗಳಿಗೆ ಸಾರ್ವಜನಿಕರ ಪ್ರವೇಶ;

ಪರಂತು, ಅಂಥ ಪ್ರವೇಶಕ್ಕಾಗಿ ಯಾವುದೇ ಫೀಜನ್ನು ವಿಧಿಸತಕ್ಕದ್ದಲ್ಲ;

(ಖ) ಅಂಥ ಗ್ರಂಥಾಲಯಗಳ ಸ್ವತ್ತಿನ ಹಾನಿ ಅಥವಾ ದುರುಪಯೋಗ, ನಾಶ ಅಥವಾ ನಷ್ಟದ ಬಗ್ಗೆ ಅಂಥ ಗ್ರಂಥಾಲಯಗಳನ್ನು ಉಪಯೋಗಿಸಲಿಚ್ಛಿಸುವ ವ್ಯಕ್ತಿಗಳು ಒದಗಿಸಬೇಕಾದ ಖಾತರಿ ಅಥವಾ ಭದ್ರತೆ;

(ಗ) ಅಂಥ ಗ್ರಂಥಾಲಯಗಳ ಸ್ವತ್ತನ್ನು ಉಪಯೋಗಿಸಿಕೊಳ್ಳಬಹುದಾದಂಥ ರೀತಿ ಮತ್ತು ಹಾನಿ, ದುರುಪಯೋಗ, ನಾಶ ಅಥವಾ ನಷ್ಟದಿಂದ ಅಂಥ ಸ್ವತ್ತಿನ ಸಂರಕ್ಷಣೆ;

(ಘ) ಈ ಅಧಿನಿಯಮದ ಯಾವುದೇ ಉಪಬಂಧ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಉಪವಿಧಿಯನ್ನು ಉಲ್ಲಂಘಿಸುವ ಅಥವಾ ಅವುಗಳನ್ನು ಪಾಲಿಸದಿರುವ ಯಾವನೇ ವ್ಯಕ್ತಿಯನ್ನು ಅಂಥ ಯಾವುದೇ ಗ್ರಂಥಾಲಯದಿಂದ ಹೊರಗಿಡುವ ಅಥವಾ ತೆಗೆದುಹಾಕುವ ಉದ್ದೇಶಕ್ಕಾಗಿ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಅಧಿಕಾರಗಳು ಮತ್ತು ನೌಕರರು ಚಲಾಯಿಸಬೇಕಾದ ಅಧಿಕಾರ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಉಪವಿಧಿಯು, ಮೂವತ್ತು ದಿವಸಗಳಿಗಿಂತ ಕಡಿಮೆ ಇಲ್ಲದ ಅವಧಿಗಾಗಿನ ಪೂರ್ವ ಪ್ರಕಟಣೆಯ ಷರತ್ತಿಗೊಳಪಟ್ಟಿರತಕ್ಕದ್ದು ಮತ್ತು ಅಂಥ ಪ್ರಕಟಣೆಯು ಸರ್ಕಾರಿ ರಾಜಪತ್ರದಲ್ಲಿ ಮತ್ತು ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಇರತಕ್ಕದ್ದು.

(4) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಪ್ರಕರಣದ ಮೇರೆಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ರಚಿಸಿದ ಯಾವುದೇ ಉಪವಿಧಿಯನ್ನು ಮಾರ್ಪಾಡು ಮಾಡಬಹುದು ಅಥವಾ ರದ್ದುಪಡಿಸಬಹುದು;

ಪರಂತು, ಯಾವುದೇ ಉಪವಿಧಿಯನ್ನು ಮಾರ್ಪಾಡು ಮಾಡುವುದಕ್ಕೆ ಅಥವಾ ರದ್ದುಪಡಿಸುವುದಕ್ಕೆ ಮುಂಚೆ, ಆ ರಾಜ್ಯ ಸರ್ಕಾರವು, ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಅಥವಾ ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ, ಆ ವಿಷಯದ ಬಗ್ಗೆ ಅದರ ಮನವಿಗಳನ್ನು ಮಾಡಿಕೊಳ್ಳಲು ಯುಕ್ತ ಅವಕಾಶವನ್ನು ಕೊಡತಕ್ಕದ್ದು.

**43. ಅಪರಾಧಗಳು ಮತ್ತು ದಂಡಗಳು.–** ಯಾರೇ ಆಗಲಿ–

(ಕ) ಸಾರ್ವಜನಿಕ ಗ್ರಂಥಾಲಯದಲ್ಲಿ ಅಥವಾ ಈ ಅಧಿನಿಯಮದ ಮೇರೆಗೆ ಇಟ್ಟುಕೊಂಡು ಬಂದಿರುವ ಇತರ ಸಂಸ್ಥೆಯಲ್ಲಿ ಅಂಥ ಗ್ರಂಥಾಲಯ ಅಥವಾ ಸಂಸ್ಥೆಯನ್ನು ಉಪಯೋಗಿಸುತ್ತಿರುವ ಯಾವನೇ ವ್ಯಕ್ತಿಗೆ ಕಿರುಕುಳ ಅಥವಾ ತೊಂದರೆಯನ್ನುಂಟು ಮಾಡುವ ಸಂಭವವಿರುವ ರೀತಿಯಲ್ಲಿ ನಡೆದುಕೊಂಡರೆ ಅಥವಾ ಅಂಥ ಯಾವುದೇ ಗ್ರಂಥಾಲಯ ಅಥವಾ ಸಂಸ್ಥೆಯಲ್ಲಿ ಅವ್ಯವಸ್ಥಿತ ರೀತಿಯಲ್ಲಿ ವರ್ತಿಸಿದರೆ ಅಥವಾ ಹಿಂಸಾತ್ಮಕ ಅಥವಾ ಬೈಗುಳ ಭಾಷೆಯನ್ನು ಉಪಯೋಗಿಸಿದರೆ;

(ಖ) ಯುಕ್ತ ಎಚ್ಚರಿಕೆ ಕೊಟ್ಟ ತರುವಾಯವೂ, ಗ್ರಂಥಾಲಯವನ್ನು ಮುಚ್ಚುವುದಕ್ಕಾಗಿ ನಿಗದಿಪಡಿಸಿದ ವೇಳೆಗಳನ್ನು ಮೀರಿ ಅಲ್ಲೇ ಉಳಿಯಲು ಪಟ್ಟು ಹಿಡಿದರೆ ;

ಅಂಥ ಗ್ರಂಥಾಲಯ ಅಥವಾ ಸಂಸ್ಥೆಯಿಂದ ಹೊರದೂಡಿಸಿಕೊಳ್ಳಲು ಅವನು ಗುರಿಯಾಗತಕ್ಕದ್ದು ಮತ್ತು ಹತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಎರಡನೆಯ ಅಥವಾ ತರುವಾಯದ ಅಪರಾಧಕ್ಕಾಗಿ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡನೀಯನಾಗತಕ್ಕದ್ದು.

**44. ಸರ್ಕಾರದಿಂದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ನಿಯಂತ್ರಣ.–** (1) ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರಕ್ಕೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಅದರ ಪ್ರಕಾರ್ಯಗಳನ್ನು ನೆರವೇರಿಸಲು ವಿಫಲವಾಗಿದೆ ಅಥವಾ ಅದು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಅದಕ್ಕೆ ಪ್ರದಾನ ಮಾಡಿದ ಯಾವುದೇ ಅಧಿಕಾರವನ್ನು ಮೀರಿದೆ ಅಥವಾ ದುರುಪಯೋಗಪಡಿಸಿಕೊಂಡಿದೆಯೆಂದು ಯಾವುದೇ ಕಾಲದಲ್ಲಿ ರಾಜ್ಯ ಸರ್ಕಾರಕ್ಕೆ ಕಂಡು ಬಂದರೆ, ರಾಜ್ಯ ಸರ್ಕಾರವು ಅದರ ವಿವರಗಳನ್ನು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ ತಿಳಿಸಬಹುದು ಮತ್ತು ಅಂಥ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಅಂಥ ವೈಫಲ್ಯ ಅಥವಾ ಮೀರುವಿಕೆ ಅಥವಾ ದುರುಪಯೋಗವನ್ನು ಪರಿಹರಿಸಲು ತಪ್ಪಿದರೆ, ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ನಿಗದಿಪಡಿಸಬಹುದಾದಂಥ ಕಾಲದೊಳಗೆ, ರಾಜ್ಯ ಸರ್ಕಾರದ ಅಭಿಪ್ರಾಯದಲ್ಲಿ ಸಮಾಧಾನಕರವಾದಂಥ ವಿವರಣೆಯನ್ನು ಕೊಡಲು ತಪ್ಪಿದರೆ, ರಾಜ್ಯ ಸರ್ಕಾರವು, ನಿರ್ದೇಶಿಸಬಹುದಾದಂಥ ಅವಧಿಗಾಗಿ ಆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ರಾಜ್ಯ ಸರ್ಕಾರವು ರದ್ದುಗೊಳಿಸಬಹುದು.

(2) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ರದ್ದುಗೊಳಿಸಿದರೆ.–

(ಕ) ಆ ಪ್ರಾಧಿಕಾರದ ಎಲ್ಲಾ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ರದ್ದಿಯಾತಿಯ ಅವಧಿಯಲ್ಲಿ ಈ ಬಗ್ಗೆ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೇಮಕ ಮಾಡಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳು ಚಲಾಯಿಸತಕ್ಕದ್ದುಮತ್ತು ನೆರವೇರಿಸತಕ್ಕದ್ದು;

(ಖ) ಆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತವಾಗಿರುವ ಎಲ್ಲಾ ಸ್ವತ್ತು, ರದ್ದಿಯಾತಿಯ ಅವಧಿಯಲ್ಲಿ ರಾಜ್ಯ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು; ಮತ್ತು

(ಗ) ರದ್ದಿಯಾತಿಯ ಅವಧಿಯು, ಮುಕ್ತಾಯವಾದ ಮೇಲೆ ಆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು, ಈ ಅಧಿನಿಯಮದಲ್ಲಿ ಉಪಬಂಧಿಸಿದ ರೀತಿಯಲ್ಲಿ ಪುನಃ ರಚಿಸತಕ್ಕದ್ದು.

**45. ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಸದಸ್ಯರ ಹೊಣೆಗಾರಿಕೆ.–** (1) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನು, ಯಾವುದಕ್ಕೆ ಅವನು ಭಾಗಿಯಾಗಿರುವನೋ ಅಥವಾ ಸದಸ್ಯನಾಗಿ ಅವನ ದುರ್ನಡತೆ ಅಥವಾ ಅವನ ಕರ್ತವ್ಯದ ನಿರ್ಲಕ್ಷ್ಯದ ಮೂಲಕ ಯಾವುದು ಉಂಟಾಗಿದೆಯೋ ಅಥವಾ ಯಾವುದಕ್ಕೆ ಅನುವು ಮಾಡಿಕೊಡಲಾಗಿದೆಯೋ ಆ ಪ್ರಾಧಿಕಾರದ ಆ ಯಾವುದೇ ಹಣ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ವೈಯಕ್ತಿಕವಾಗಿ ಹೊಣೆಯಾಗಿರತಕ್ಕದ್ದು.

(2) ಸಂಬಂಧಪಟ್ಟ ಸದಸ್ಯ ಅಥವಾ ಸದಸ್ಯರಿಗೆ ತದ್ವಿರುದ್ದವಾದುದಕ್ಕೆ ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ರಾಜ್ಯ ಗ್ರಂಥಪಾಲನಿಗೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಯಾವುದೇ ಹಣ ಅಥವಾ ಇತರ ಸ್ವತ್ತಿನ ನಷ್ಟ, ಪೋಲು ಅಥವಾ ದುರ್ವಿನಿಯೋಗವು ಅವನ ಅಥವಾ ಅವರ ದುರ್ನಡತೆ ಅಥವಾ ನಿರ್ಲಕ್ಷ್ಯತೆಯ ನೇರ ಪರಿಣಾಮವಾಗಿದೆ ಎಂದು ಮನದಟ್ಟಾದರೆ, ರಾಜ್ಯ ಗ್ರಂಥಪಾಲನ ಬರಹದಲ್ಲಿನ ಆದೇಶದ ಮೂಲಕ ಅಂಥ ಸದಸ್ಯ ಅಥವಾ ಸದಸ್ಯರಿಗೆ ನಿರ್ದಿಷ್ಟಪಡಿಸಿದ ದಿನಾಂಕಕ್ಕೆ ಮುಂಚೆ, ಅಂಥ ನಷ್ಟ, ಪೋಲು ಅಥವಾ ದುರ್ವಿನಿಯೋಗಕ್ಕಾಗಿ ಅದನ್ನು ತುಂಬಿ ಕೊಡಲು ಅಗತ್ಯವಾದ ಮೊಬಲಗನ್ನು ಸಂದಾಯ ಮಾಡಲು ನಿರ್ದೇಶಿಸತಕ್ಕದ್ದು.

(3) ಆ ಮೊಬಲಗನ್ನು ಹಾಗೆ ಸಂದಾಯ ಮಾಡದಿದ್ದರೆ, ಅವು ಭೂಕಂದಾಯದ ಬಾಕಿಯಂತೆ ವಸೂಲಿಯಾಗತಕ್ಕದ್ದು.

(4) ರಾಜ್ಯ ಗ್ರಂಥಪಾಲರ ನಿರ್ಣಯದ ಸಂಬಂಧದಲ್ಲಿ, ನಿಯಮಿಸಬಹುದಾದಂಥ ಅವಧಿಯೊಳಗಾಗಿ ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧೀಕರಣಕ್ಕೆ ಅಪೀಲು ಇರತಕ್ಕದ್ದು ಮತ್ತು ಅಂಥ ಅಪೀಲಿನ ಮೇಲೆ ಕರ್ನಾಟಕ ರೆವಿನ್ಯೂ ಅಪೀಲು ನ್ಯಾಯಾಧೀಕರಣದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**46. ಗ್ರಂಥಾಲಯ ಪ್ರಾಧಿಕಾರಗಳ ಸದಸ್ಯರು ಮತ್ತು ನಿಯೋಜಿತರು ಲೋಕ ನೌಕರರಾಗಿರತಕ್ಕದ್ದು.–** ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಪ್ರತಿಯೊಬ್ಬ ಸದಸ್ಯನು ಮತ್ತು ಅಂಥ ಪ್ರಾಧಿಕಾರದ ಅಡಿಯಲ್ಲಿ ನಿಯೋಜಿತನಾದ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರನ್ನು ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರನೆಂಬುದಾಗಿ ಭಾವಿಸತಕ್ಕುದು.

**47. ಕಾರ್ಯಗಳ ಮತ್ತು ವ್ಯವಹರಣೆಗಳ ಸಿಂಧುತ್ವದ ಬಗ್ಗೆ ಉಳಿಸುವಿಕೆ.–** ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ವ್ಯವಹರಣೆಗಳನ್ನು,–

(ಕ) ಯಾವುದೇ ಪ್ರಾಧಿಕಾರ ಅಥವಾ ಅದರ ಯಾವುದೇ ಸಮಿತಿಯನ್ನು ರಚಿಸುವುದರಲ್ಲಿನ ಖಾಲಿಸ್ಥಾನ ಅಥವಾ ನ್ಯೂನತೆ; ಅಥವಾ

(ಖ) ಪ್ರಕರಣದ ಗುಣಾವಗುಣಗಳಿಗೆ ಬಾಧಕವಾಗದಂಥ ಕಾರ್ಯ ಅಥವಾ ವ್ಯವಹರಣೆಗಳಲ್ಲಿನ ಯಾವುದೇ ನ್ಯೂನತೆ ಅಥವಾ ಅಕ್ರಮತೆ

–ಇವುಗಳ ಆಧಾರದ ಮಾತ್ರದಿಂದಲೇ ಪ್ರಶ್ನಿಸತಕ್ಕದ್ದಲ್ಲ.

**48. ದಾವೆಗಳು, ಇತ್ಯಾದಿಗಳಿಗೆ ಸಂಬಂಧಪಟ್ಟ ಉಪಬಂಧಗಳು.–** (1) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ ಅಥವಾ ಅದರ ಯಾವನೇ ಅಧಿಕಾರಿ ಅಥವಾ ಅದರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾವನೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು

ವ್ಯವಹರಣೆಯನ್ನು, ಬರಹದಲ್ಲಿನ ನೋಟೀಸನ್ನು ಆ ಪ್ರಾಧಿಕಾರದ ಕಛೇರಿಯಲ್ಲಿ ಅಥವಾ ಅಂಥ ಅಧಿಕಾರಿ ಅಥವಾ ವ್ಯಕ್ತಿಯ ವಾಸ ಸ್ಥಳದಲ್ಲಿ ವಶಾವಣೆ ಮಾಡಲಾದ ಅಥವಾ ಬಿಟ್ಟ ತರುವಾಯ ನಿಕಟೋತ್ತರದ ಎರಡು ತಿಂಗಳುಗಳು ಮುಕ್ತಾಯವಾಗುವವರೆಗೆ, ಹೂಡತಕ್ಕದ್ದಲ್ಲ, ಅಂಥ ನೋಟೀಸು ವ್ಯಾಜ್ಯ ಕಾರಣ, ಕೋರಿದ ಪರಿಹಾರ, ಕ್ಲೇಮು ಮಾಡಿದ ನಷ್ಟ ಪರಿಹಾರ ಯಾವುದಾದರೂ ಇದ್ದರೆ, ಅದನ್ನು ಮತ್ತು ಉದ್ದೇಶಿತ ವಾದಿಯ ಹೆಸರು ಮತ್ತು ವಾಸ ಸ್ಥಳವನ್ನು ನಿರೂಪಿಸತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ, ಉಪವಿಧಿ ಅಥವಾ ಆದೇಶದ ಮೇರೆಗೆ ಕಾನೂನು ಸಮ್ಮತವಾಗಿ ಮತ್ತು ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆಯೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ, ರಾಜ್ಯ ಗ್ರಂಥಪಾಲ, ರಾಜ್ಯ ಗ್ರಂಥಾಲಯ ಪ್ರಾಧಿಕಾರ, ಸ್ಥಳೀಯ ಗ್ರಂಥಾಲಯ ಪ್ರಾಧಿಕಾರ ಅಥವಾ ಅಂಥ ಪ್ರಾಧಿಕಾರದ ಯಾವನೇ ಸದಸ್ಯ, ಅಧಿಕಾರಿ, ನೌಕರ ಅಥವಾ ಅದರ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾವನೇ ಸದಸ್ಯ, ಅಧಿಕಾರಿ, ನೌಕರ ಅಥವಾ ಏಜೆಂಟನ ವಿರುದ್ಧ ಯಾವುವೇ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**49. ತೊಂದರೆಗಳನ್ನು ನಿವಾರಿಸಲು ಅಧಿಕಾರ.–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಆದೇಶದ ಮೂಲಕ ಆ ತೊಂದರೆಯನ್ನು ನಿವಾರಿಸುವುದಕ್ಕಾಗಿ ಅದಕ್ಕೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ಮಾಡಬಹುದು.

**50. ಕೆಲವು ಗ್ರಂಥಾಲಯಗಳ ವರ್ಗಾವಣೆ.–** (1) (ಕ) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ (ಈ ಉಪಪ್ರಕರಣದಲ್ಲಿ ಇನ್ನು ಮುಂದೆ ಗೊತ್ತುಪಡಿಸಿದ ದಿನಾಂಕವೆಂದು ಉಲ್ಲೇಖಿತವಾಗಿದೆ) ಸಾರ್ವಜನಿಕ ಗ್ರಂಥಾಲಯ ವ್ಯವಸ್ಥಾಪನಾ ಸಮಿತಿ, ಮೈಸೂರು–ಇದರಲ್ಲಿ ಈಗ ನಿಹಿತವಾಗಿರುವ ಮೈಸೂರಿನ ಸಾರ್ವಜನಿಕ ಗ್ರಂಥಾಲಯದ ಸಮಗ್ರ ವ್ಯವಸ್ಥಾಪನೆ ಮತ್ತು ನಿಯಂತ್ರಣವು ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕದ್ದು.

(ಖ) ಗೊತ್ತುಪಡಿಸಿದ ದಿವಸದಿಂದ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1964ರ ಮೇರೆಗೆ ನೋಂದಾಯಿತವಾಗಿರುವುದಾಗಿ ಈಗ ಭಾವಿಸಲಾದ ಮೈಸೂರು ಸಂಘಗಳ ನೋಂದಣಿ ಅಧಿನಿಯಮ, 1904ರ ಮೇರೆಗೆ ನೋಂದಾಯಿತ ಸಂಘವಾದ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥಾಪನಾ ಸಮಿತಿ, ಮೈಸೂರು ಇದು ವಿಘಟಿತವಾಗತಕ್ಕುದು ಮತ್ತು ಗೊತ್ತುಪಡಿಸಿದ ನಿಕಟ ಪೂರ್ವದಲ್ಲಿ ಸದರಿ ಸಂಘಕ್ಕೆ ಸೇರಿದ್ದ ಅಥವಾ ಅದರಲ್ಲಿ ನಿಹಿತವಾಗಿದ್ದ ಸದರಿ ಸಂಘದ ಎಲ್ಲಾ ಚರ ಮತ್ತು ಸ್ಥಿರ ಸ್ವತ್ತು ಮತ್ತು ಎಲ್ಲಾ ಹಕ್ಕುಗಳು, ಅಧಿಕಾರಗಳು ಮತ್ತು ವಿಶೇಷಾಧಿಕಾರಿಗಳು ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರದಲ್ಲಿ ನಿಹಿತವಾಗತಕ್ಕುದು ಮತ್ತು ಅವುಗಳನ್ನು ಈ ಅಧಿನಿಯಮದಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳು ಮತ್ತು ನಿಯಮಿಸಬಹುದಾದಂಥ ಇತರ ಉದ್ದೇಶಗಳಿಗಾಗಿ ವಿನಿಯೋಗಿಸತಕ್ಕದ್ದು.

(ಗ) ಗೊತ್ತುಪಡಿಸಿದ ದಿವಸದಿಂದ ಸದರಿ ಸಂಘದ ಎಲ್ಲಾ ಋಣಗಳು ಹಾಗೂ ಹೊಣೆಗಾರಿಕೆಗಳು ಮೈಸೂರು ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿತವಾಗತಕ್ಕದ್ದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(ಘ) ಗೊತ್ತುಪಡಿಸಿದ ದಿವಸದಿಂದ ಸದರಿ ಸಂಘದ ಪ್ರತಿಯೊಬ್ಬ ನಿಯೋಜಿತನು ರಾಜ್ಯ ಸರ್ಕಾರದ ನಿಯೋಜಿತನಾಗತಕ್ಕದ್ದು ಮತ್ತು ಕರ್ನಾಟಕ ರಾಜ್ಯ ಗ್ರಂಥಾಲಯ ಸೇವಾ ಸದಸ್ಯನಾಗಿ ರಾಜ್ಯ ಸರ್ಕಾರದ ಸೇವೆಯಲ್ಲಿ ಅವನ ಪದವನ್ನು ಸದರಿ ಸಂಘದ ನಿಯೋಜಿತನೆಂದು ಅವನು ಹೊಂದಿರುತ್ತಿದ್ದ ಅದೇ ಅವಧಿಗಾಗಿ, ಅದೇ ಪರಿಶ್ರಮ ಧನವನ್ನು ಹೊಂದಿ ಮತ್ತು ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಭವಿಷ್ಯನಿಧಿ, ಉಪದಾನ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಧಾರಣ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು, ಅವನ ಪರಿಶ್ರಮಧನ, ನಿಬಂಧನೆಗಳು ಮತ್ತು ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸಿದ ಹೊರತು ಮತ್ತು ಆವರೆಗೆ ಹಾಗೆ ಮಾಡುವುದು ಮುಂದುವರಿಯತಕ್ಕದ್ದು.

(2) (ಕ) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ, ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸ ಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಮಡಿಕೇರಿಯ ಮಹಾತ್ಮಗಾಂಧಿ ಸಾರ್ವಜನಿಕ ಗ್ರಂಥಾಲಯವನ್ನು, ಕೊಡಗು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿಸಬಹುದು.

(ಖ) ಅಂಥ ವರ್ಗಾವಣೆಯು ಆಗುವಂಥ ದಿವಸದಿಂದ ಸದರಿ ಗ್ರಂಥಾಲಯಕ್ಕೆ ಸಂಬಂಧಿಸಿದ ಎಲ್ಲಾ ಆಸ್ತಿಗಳು ಮತ್ತು ಹೊಣೆಗಳು ಕೊಡಗು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿತವಾಗತಕ್ಕುದು ಮತ್ತು ಅದರಲ್ಲಿ ನಿಹಿತವಾಗತಕ್ಕದ್ದು.

(ಗ) ಅಂಥ ವರ್ಗಾವಣೆಯು ನಡೆಯುವಂಥ ದಿವಸದಿಂದ, ಜಾರಿಗೆ ಬರುವಂತೆ ಸದರಿ ಸಾರ್ವಜನಿಕ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ಸರ್ಕಾರದ ನಿಯೋಜಿತನಾದ ಪ್ರತಿಯೊಬ್ಬ ವ್ಯಕ್ತಿಯು, ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಯ ಸದಸ್ಯನೆಂದು ರಾಜ್ಯ ಸರ್ಕಾರದ ಅಡಿಯಲ್ಲಿ ಅವನ ಪದವನ್ನು ಆ ವರ್ಗಾವಣೆಯು ನಡೆಯದೇ ಇದ್ದಿದ್ದರೆ ಅವನು ಹೊಂದಿರುತ್ತಿದ್ದ ಅದೇ ಅಧಿಕಾರಾವಧಿ, ಅದೇ ಪರಿಶ್ರಮ ಧನವನ್ನು ಹೊಂದಿ ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಭವಿಷ್ಯ ನಿಧಿ, ಉಪದಾನ ಮತ್ತು ಇತರ ವಿಷಯಗಳ ಬಗ್ಗೆ ಅವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳೊಂದಿಗೆ ಧಾರಣ ಮಾಡತಕ್ಕುದು ಮತ್ತು ರಾಜ್ಯ ಸರ್ಕಾರವು ಅವನ ಪರಿಶ್ರಮಧನ, ನಿಬಂಧನೆಗಳು ಹಾಗೂ ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸಿದ ಹೊರತು ಮತ್ತು ಅಲ್ಲಿಯವರೆಗೆ ಅವನು ಹಾಗೆ ಮಾಡುವುದು ಮುಂದುವರಿಯತಕ್ಕದ್ದು.

(3) (ಕ) 47ನೇ ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ (ಇನ್ನು ಮುಂದೆ ಈ ಉಪ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದಿವಸವೆಂದು ಉಲ್ಲೇಖಿತವಾಗಿದೆ) ಮಂಗಳೂರಿನ ಕಾರ್ನಾಡ್ ಸದಾಶಿವರಾವ್ ಜಿಲ್ಲಾ ಕೇಂದ್ರ ಗ್ರಂಥಾಲಯದ ಸಮಗ್ರ ವ್ಯವಸ್ಥಾಪನೆ ಮತ್ತು ನಿಯಂತ್ರಣವು ಮಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ವರ್ಗಾಯಿತವಾಗತಕ್ಕದ್ದು.

(ಖ) ನಿರ್ದಿಷ್ಟಪಡಿಸಿದ ದಿವಸದಿಂದ, ಸದರಿ ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಸಂಬಂಧಿಸಿದ ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಆಸ್ತಿಗಳು ಮತ್ತು ಹೊಣೆಗಳು ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಪ್ರಮಾಣದಲ್ಲಿ ಮತ್ತು ಅಂಥ ರೀತಿಯಲ್ಲಿ ಮಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳಲ್ಲಿ ನಿಹಿತವಾಗತಕ್ಕದ್ದು.

(ಗ) ನಿರ್ದಿಷ್ಟಪಡಿಸಿದ ದಿವಸದಿಂದ ಸದರಿ ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ಸಂಬಂಧಿಸಿದಂತೆ ದಕ್ಷಿಣ ಕನ್ನಡ ಗ್ರಂಥಾಲಯ ಪ್ರಾಧಿಕಾರದಿಂದ ಸಂಪೂರ್ಣವಾಗಿ ಅಥವಾ ಮುಖ್ಯವಾಗಿ ಸದರಿ ಪ್ರಾಧಿಕಾರದಿಂದ ನಿಯೋಜಿತನಾಗಿದ್ದ ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಪ್ರತಿಯೊಬ್ಬ ನಿಯೋಜಿತನು, ರಾಜ್ಯ ಸರ್ಕಾರದ ನಿಯೋಜಿತನಾಗತಕ್ಕದ್ದು. ಕರ್ನಾಟಕ ರಾಜ್ಯ ಗ್ರಂಥಾಲಯ ಸೇವೆಯ ಸದಸ್ಯನೆಂದು ರಾಜ್ಯ ಸರ್ಕಾರದ ಅಧೀನದಲ್ಲಿ ಅವನ ಪದವನ್ನು, ದಕ್ಷಿಣ ಕನ್ನಡ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ನಿಯೋಜಿತನೆಂದು ಅವನು ಹೊಂದಿರುತ್ತಿದ್ದಂಥದೇ ಆದ ಅದೇ ಅವಧಿ, ಅದೇ ಪರಿಶ್ರಮಧನವನ್ನು ಹೊಂದಿ ಅವೇ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ಮತ್ತು ಇತರ ವಿಷಯಗಳ ಬಗ್ಗೆ ಅವೇ ಹಕ್ಕು, ವಿಶೇಷಾಧಿಕಾರಿಗಳನ್ನು ಧಾರಣ ಮಾಡತಕ್ಕದ್ದು ಮತ್ತು ರಾಜ್ಯ ಸರ್ಕಾರವು ಅವನ ಪರಿಶ್ರಮಧನ, ನಿಬಂಧನೆಗಳು ಮತ್ತು ಷರತ್ತುಗಳನ್ನು ಕ್ರಮಬದ್ಧವಾಗಿ ಬದಲಾಯಿಸಿದ ಹೊರತು ಮತ್ತು ಅಲ್ಲಿಯವರೆಗೆ ಅವನು ಹಾಗೆ ಮಾಡುವುದು ಮುಂದುವರಿಯತಕ್ಕುದು.

**51. ಕರ್ನಾಟಕ ರಾಜ್ಯಕ್ಕೆ ಅದನ್ನು ಅನ್ವಯಿಸುವಲ್ಲಿ ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1987ರ ತಿದ್ದುಪಡಿ.–** ಮುದ್ರಣಾಲಯ ಮತ್ತು ಪುಸ್ತಕಗಳ ನೋಂದಣಿ ಅಧಿನಿಯಮ, 1867 ಇದು (ಕೇಂದ್ರ ಅಧಿನಿಯಮ 1867ರ 25) ಕರ್ನಾಟಕ ರಾಜ್ಯಕ್ಕೆ ಅದು ಅನ್ವಯವಾಗುವಂತೆ ಈ ಕೆಳಕಂಡಂತೆ ತಿದ್ದುಪಡಿಯಾಗತಕ್ಕದ್ದು:–

(i) 9ನೇ ಪ್ರಕರಣದ ಮೊದಲನೇ ಪ್ಯಾರಾದಲ್ಲಿ (ಕ) ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಕ) ಯಾವುದೇ ಸಂದರ್ಭದಲ್ಲಿ, ಮುದ್ರಣಾಲಯದಿಂದ ಅಂಥ ಯಾವುದೇ ಪುಸ್ತಕವನ್ನು ಮೊದಲು ಕೊಟ್ಟಂಥ ದಿವಸದ" ತರುವಾಯ, ಒಂದು ಕ್ಯಾಲೆಂಡರ್ ತಿಂಗಳೊಳಗೆ, ಅಂಥ ಮೂರು ಪ್ರತಿಗಳನ್ನು ಮತ್ತು;

(ii) 9ನೇ ಪ್ರಕರಣದ ಕೊನೆಯ ಪ್ಯಾರಾದಲ್ಲಿ (i)ನೇ ಖಂಡಕ್ಕೆ ಬದಲಾಗಿ ಈ ಕೆಳಕಂಡ ಖಂಡವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(i) ಯಾವ ಪುಸ್ತಕದ ಯಾವುದೇ ಎರಡನೇ ಅಥವಾ ತರುವಾಯದ ಆವೃತ್ತಿಯಲ್ಲಿ, ಆ ಪುಸ್ತಕಕ್ಕೆ ಸೇರಿದ ಲೆಟರ್ ಪ್ರೆಸ್‌ನಲ್ಲಾಗಲಿ ಅಥವಾ ನಕ್ಷೆಗಳಲ್ಲಾಗಲಿ, ಬ್ಲಾಕ್ ಪ್ರಿಂಟುಗಳಲ್ಲಾಗಲಿ ಅಥವಾ ಇತರ ಕೆತ್ತನೆಗಳಲ್ಲಾಗಲಿ, ಯಾವುವೇ ಸೇರ್ಪಡೆಗಳನ್ನು ಅಥವಾ ಬದಲಾವಣೆಗಳನ್ನು ಮಾಡಿಲ್ಲವೋ, ಆ ಯಾವುದೇ ಪುಸ್ತಕದ ಎರಡನೇ ಅಥವಾ ತರುವಾಯದ ಆವೃತ್ತಿ ಮತ್ತು ಯಾವ ಪುಸ್ತಕದ ಮೊದಲ ಅಥವಾ ಅದರ ಕೆಲವು ಹಿಂದಿನ ಆವೃತ್ತಿಯ ಮೂರು ಪ್ರತಿಗಳನ್ನು ಈ ಅಧಿನಿಯಮದ ಮೇರೆಗೆ ವಶಾವಣೆ ಮಾಡಲಾಗಿದೆಯೋ ಆ ಪುಸ್ತಕದ ಮೊದಲನೇ ಅಥವಾ ಕೆಲವು ಹಿಂದಿನ ಆವೃತ್ತಿಯ ಮೂರು ಪ್ರತಿಗಳು ಅಥವಾ";

(iii ) 11ನೇ ಪ್ರಕರಣದಲ್ಲಿ ಮೊದಲನೆಯ ವಾಕ್ಯಕ್ಕೆ ಬದಲಾಗಿ ಈ ಕೆಳಕಂಡ ವಾಕ್ಯವನ್ನು ಪ್ರತಿಯೋಜಿಸತಕ್ಕುದು, ಎಂದರೆ:–

"ಈ ಅಧಿನಿಯಮದ 9ನೇ ಪ್ರಕರಣದ ಮೊದಲ ಪ್ಯಾರಾದ (ಫ) ಖಂಡದ ಅನುಸರಣೆಯಲ್ಲಿ ವಶಾವಣೆ ಮಾಡಿದ ಮೂರು ಪ್ರತಿಗಳ ಪೈಕಿ ಒಂದು ಪ್ರತಿಯನ್ನು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 ಇದರಲ್ಲಿ ಉಲ್ಲೇಖಿಸಿದ ಬೆಂಗಳೂರಿನ ರಾಜ್ಯ ಕೇಂದ್ರ ಗ್ರಂಥಾಲಯಕ್ಕೆ ಕಳುಹಿಸತಕ್ಕದ್ದು ಮತ್ತು ಉಳಿದ ಎರಡು ಪ್ರತಿಗಳನ್ನು ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ರೀತಿಯಲ್ಲಿ ವಿಲೆ ಮಾಡತಕ್ಕದ್ದು".

**52. ನಿರಸನ ಮತ್ತು ಉಳಿಸುವಿಕೆಗಳು.–** (1) ಮದರಾಸು ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1948 (1948ರ ಮದರಾಸು ಅಧಿನಿಯಮ ಸಂಖ್ಯೆ XXIV) ಮತ್ತು ಹೈದರಾಬಾದು ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1955 (1955ರ ಹೈದರಾಬಾದು ಅಧಿನಿಯಮ ಸಂಖ್ಯೆ III) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವಿದ್ದಾಗ್ಯೂ–

(ಕ) ಮದರಾಸು ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1948ರ ಮೇರೆಗೆ ರಚಿಸಿದ ಸ್ಥಳೀಯ ಗ್ರಂಥಾಲಯಗಳ ಪ್ರಾಧಿಕಾರಗಳ ಮತ್ತು ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಪದಧಾರಣ ಮಾಡಿದ ಸದಸ್ಯರು, ಈ ಅಧಿನಿಯಮದ ಮೇರೆಗೆ ರಚಿತವಾದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸದಸ್ಯರೆಂಬುದಾಗಿ ಭಾವಿಸತಕ್ಕದ್ದು ಮತ್ತು ಅಂಥ ಪ್ರಾರಂಭದಲ್ಲಿ ಅವರು ಯಾವ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೋ ಆ ಕ್ರಮಾನುಗತ ಪ್ರದೇಶಗಳಲ್ಲಿ, ಅವರ ಪ್ರಸ್ತುತ ಅವಧಿಯು ಮುಕ್ತಾಯವಾಗುವವರೆಗೆ ಅಥವಾ ಈ ಅಧಿನಿಯಮದ ಮೇರೆಗೆ ಹೊಸ ಪ್ರಾಧಿಕಾರಗಳನ್ನು ರಚಿಸುವವರೆಗೆ ಇವುಗಳಲ್ಲಿ ಯಾವುದು ನಂತರವೋ ಅಲ್ಲಿಯವರೆಗೆ ಅಂಥ ಪ್ರಾಧಿಕಾರಗಳಿಗೆ ಪ್ರದಾನ ಮಾಡಿದ ಎಲ್ಲ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು;

(ಖ) ಸದರಿ ಅಧಿನಿಯಮಗಳ ಮೇರೆಗೆ ಮತ್ತು ಈ ಅಧಿನಿಯಮದ ಪ್ರಾರಂಭದಲ್ಲಿ ಜಾರಿಯಲ್ಲಿದ್ದ ಅಧಿನಿಯಮಗಳ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು (ಮಾಡಿದ ಯಾವುದೇ ನೇಮಕಾತಿ ಅಥವಾ ಪ್ರತ್ಯಾಯೋಜನೆ, ವಿಧಿಸಿದ ಫೀಜು ಅಥವಾ ಉಪಕರ, ಹೊರಡಿಸಿದ ಅಧಿಸೂಚನೆ, ಆದೇಶ, ಲಿಖಿತ ಅಥವಾ ನಿರ್ದೇಶನ, ರಚಿಸಿದ ನಿಯಮ, ವಿನಿಯಮ, ನಮೂನೆ ಅಥವಾ ಯೋಜನೆಯನ್ನು ಒಳಗೊಂಡು) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಮಾಡಲಾಗಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು ಮತ್ತು ಅವುಗಳು ಅಧಿನಿಯಮದ ಮೇರೆಗೆ ಮಾಡಲಾದ ಯಾವುದೇ ಕಾರ್ಯದ ಅಥವಾ ಕೈಗೊಳ್ಳಲಾದ ಯಾವುದೇ ಕ್ರಮ ಮೂಲಕ ಅವುಗಳನ್ನು ರದ್ದುಮಾಡುವವರೆಗೆ ಅಥವಾ ಮಾರ್ಪಾಟು ಮಾಡುವವರೆಗೆ ತದನುಸಾರವಾಗಿ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು.

# ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮಗಳು, 1966

## ಅಧ್ಯಾಯ–I

## ಪ್ರಾರಂಭಿಕ

**ನಿಯಮ:**

1. ಹೆಸರು
2. ಪರಿಭಾಷೆಗಳು

## ಅಧ್ಯಾಯ–II

## ಗ್ರಂಥಾಲಯ ಪ್ರಾಧಿಕಾರಗಳು ಮತ್ತು ಶಾಖಾ ಗ್ರಂಥಾಲಯ ಸಮಿತಿಗಳಿಗೆ ಚುನಾವಣೆ

3. ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಚುನಾವಣೆ
4. ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಗಳನ್ನು ಪೂರ್ಣಗೊಳಿಸಬೇಕಾದಂಥ ಅವಧಿ
5. ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಆಯ್ಕೆ
6. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಆಯ್ಕೆ
7. ಯಾವ ಅವಧಿಯೊಳಗೆ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಗಳನ್ನು ಪೂರ್ಣಗೊಳಿಸಬೇಕಾಗಿದೆಯೋ ಆ ಅವಧಿ
8. ಶಾಖಾ ಗ್ರಂಥಾಲಯ ಸಮಿತಿಗೆ ಚುನಾವಣೆ

## ಅಧ್ಯಾಯ–III

## ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು

9. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಳ ಬಗ್ಗೆ ನೋಟೀಸು
10. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಯಲ್ಲಿ ವ್ಯವಹಾರವನ್ನು ನಡೆಸುವುದಕ್ಕಾಗಿನ ಪ್ರಕ್ರಿಯೆ
11. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು ಮತ್ತು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ
12. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷನ ಚುನಾವಣೆ

## ಅಧ್ಯಾಯ–IV

## ರಾಜ್ಯ ಗ್ರಂಥಪಾಲ

13. ರಾಜ್ಯ ಗ್ರಂಥಪಾಲನ ಅರ್ಹತೆಗಳು

## ಅಧ್ಯಾಯ–V

## ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು

14. ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ತಯಾರಿಕೆ

15. ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ತಯಾರಿಕೆ

16. ಗ್ರಂಥಾಲಯ ಅಭಿವೃದ್ಧಿ ಯೋಜನೆಗಳ ಮುಖ್ಯ ವೈಶಿಷ್ಟ್ಯಗಳನ್ನು ಪ್ರಕಟಿಸುವ ರೀತಿ

**ಅಧ್ಯಾಯ–VI**

**ಗ್ರಂಥಾಲಯಗಳ ನಿಧಿಗಳ ನಿರ್ವಹಣೆ**

17. ರಾಜ್ಯ ಗ್ರಂಥಾಲಯ ನಿಧಿಯ ನಿರ್ವಹಣೆ

18. ನಗರ ಗ್ರಂಥಾಲಯ ನಿಧಿಯ ನಿರ್ವಹಣೆ

19. ಜಿಲ್ಲಾ ಗ್ರಂಥಾಲಯ ನಿಧಿಯ ನಿರ್ವಹಣೆ

20. ಜಿಲ್ಲಾ ಗ್ರಂಥಾಲಯ ನಿಧಿಗೆ ಸರ್ಕಾರದ ಅನುದಾನಗಳನ್ನು ಜಮೆ ಮಾಡುವ ರೀತಿ

**ಅಧ್ಯಾಯ–VII**

**ಲೆಕ್ಕ ಪತ್ರಗಳು, ಲೆಕ್ಕಪರಿಶೋಧನೆ ಮತ್ತು ವಾರ್ಷಿಕ ವರದಿ**

21. ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರುವುದು

22. ಲೆಕ್ಕ ಪರಿಶೋಧನೆ, ನಾಮಂಜೂರಾತಿ ಮತ್ತು ಅಧಿಭಾರ

23. ವಾರ್ಷಿಕ ವರದಿಯಲ್ಲಿ ಸೇರಿಸಬೇಕಾದ ಮಾಹಿತಿ ಮತ್ತು ವಿವರಗಳು

**ಅಧ್ಯಾಯ–VIII**

**ನೆರವು ಪಡೆದ ಗ್ರಂಥಾಲಯಗಳು**

24. ನೆರವು ಪಡೆದ ಗ್ರಂಥಾಲಯಗಳು ಪೂರೈಸಬೇಕಾದ ಷರತ್ತುಗಳು

**ಅಧ್ಯಾಯ–IX**

**ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು**

25. ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು

**ಅಧ್ಯಾಯ–X**

**ಗ್ರಂಥಾಲಯಗಳ ಪ್ರಾಧಿಕಾರದಿಂದ ಸಮಿತಿಯ ರಚನೆ**

26. ರಾಜ್ಯ ಗ್ರಂಥಾಲಯ ಪ್ರಾಧಿಕಾರದಿಂದ ಸಮಿತಿಗಳ ರಚನೆ

27. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳಿಂದ ಸಮಿತಿಗಳ ರಚನೆ

28. ಚುನಾವಣೆಯ ಫಲಿತಾಂಶದ ಘೋಷಣೆ

29. ಮತಗಳ ಸಿಂಧುತ್ವ

## ಅಧ್ಯಾಯ–XI

## ಗ್ರಂಥಾಲಯ ಪ್ರಾಧಿಕಾರಿಗಳು ಮಾಡಿಕೊಳ್ಳಬೇಕಾದ ಕರಾರುಗಳ ಬಗ್ಗೆ ಪರಿಬಂಧಗಳು

30. ಗ್ರಂಥಾಲಯ ಪ್ರಾಧಿಕಾರಿಗಳು ಮಾಡಿಕೊಳ್ಳಬೇಕಾದ ಕರಾರುಗಳ ಬಗ್ಗೆ ಪರಿಬಂಧಗಳು

## ಅಧ್ಯಾಯ–XII

## ಉಪವಿಧಿಗಳ ಪ್ರಕಟಣೆ

31. ಉಪವಿಧಿಗಳನ್ನು ಪ್ರಕಟಿಸುವ ರೀತಿ

## ಅಧ್ಯಾಯ –XIII

## ರಾಜ್ಯ ಗ್ರಂಥಪಾಲನ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸುವುದಕ್ಕಾಗಿನ ಅವಧಿ

32. ಅಪೀಲನ್ನು ಸಲ್ಲಿಸುವುದಕ್ಕಾಗಿ ಅವಧಿ

33. ನಿರಸನ

**ಅನುಬಂಧ I ರಿಂದ III**

## ಶಿಕ್ಷಣ ಸಚಿವಾಲಯ

## ಅಧಿಸೂಚನೆ

**ಬೆಂಗಳೂರು, ದಿನಾಂಕ 5ನೇ ಡಿಸೆಂಬರ್ 1966**

**ಜಿ.ಎಸ್.ಆರ್. 1257.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965ರ (ಕರ್ನಾಟಕ ಅಧಿನಿಯಮ 1965ರ 10) 41ನೇ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಈ ಮೂಲಕ ಈ ಕೆಳಕಂಡ ನಿಯಮಗಳನ್ನು ರಚಿಸುತ್ತದೆ, ಅದರ ಕರಡನ್ನು ಸದರಿ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, 1966ನೇ ಅಕ್ಟೋಬರ್ 27ನೇ ದಿನಾಂಕದ ಕರ್ನಾಟಕ ರಾಜಪತ್ರದ–IV 2ಸಿ(1)ನೇ ಭಾಗದಲ್ಲಿ ಜಿ.ಎಸ್.ಆರ್. ಸಂಖ್ಯೆ 1195 ಎಂದು 1966ರ ಅಕ್ಟೋಬರ್ 20ನೇ ದಿನಾಂಕದ ಅಧಿಸೂಚನೆ ಸಂಖ್ಯೆ: ಇ.ಡಿ. 26 ಎಸ್.ಎಲ್.ಎಸ್. 66ರಲ್ಲಿ ಪ್ರಕಟಿಸಲಾಗಿದೆ, ಎಂದರೆ:–

# ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮಗಳು, 1966

## ಅಧ್ಯಾಯ–I

## ಪ್ರಾರಂಭಿಕ

**1. ಹೆಸರು.–** ಈ ನಿಯಮಗಳನ್ನು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ನಿಯಮಗಳು, 1966 ಎಂದು ಕರೆಯತಕ್ಕದ್ದು.

**2. ಪರಿಭಾಷೆಗಳು.–** ಈ ನಿಯಮಗಳಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) **'ಅಧಿನಿಯಮ'** ಎಂದರೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10);

(ಖ) **'ಅನುಬಂಧ'** ಎಂದರೆ ಈ ನಿಯಮಗಳಿಗೆ ಲಗತ್ತಿಸಲಾದ ಅನುಬಂಧ;

(ಗ) **'ಪ್ರಕರಣ'** ಎಂದರೆ ಈ ಅಧಿನಿಯಮದ ಪ್ರಕರಣ.

## ಅಧ್ಯಾಯ–II

## ಗ್ರಂಥಾಲಯ ಪ್ರಾಧಿಕಾರಗಳು ಮತ್ತು ಶಾಖಾ ಗ್ರಂಥಾಲಯ ಸಮಿತಿಗಳಿಗೆ ಚುನಾವಣೆ

**3. ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಚುನಾವಣೆ.–** (1) ಸಂದರ್ಭಾನುಸಾರ 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಖ) ಖಂಡ ಅಥವಾ (ಗ) ಖಂಡದ ಮೇರೆಗೆ ನಡೆಸಬೇಕಾದ ಕರ್ನಾಟಕ ವಿಧಾನ ಸಭೆಯಿಂದ ನಾಲ್ಕು ವ್ಯಕ್ತಿಗಳ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ಇಬ್ಬರು ವ್ಯಕ್ತಿಗಳ ಚುನಾವಣೆಯು, ಏಕವರ್ಗಾವಣೀಯ ಮತದ ಮೂಲಕ ಪ್ರಮಾಣಾನುಸಾರ ಪ್ರಾತಿನಿಧ್ಯದ ತತ್ವಕ್ಕನುಸಾರವಾಗಿ ಇರತಕ್ಕದ್ದು.

(2) 3ನೇ ಪ್ರಕರಣದ (2)ನೇ ಉಪ–ಪ್ರಕರಣದ (ಘ) ಖಂಡದ ಮೇರೆಗೆ ರಾಜ್ಯದಲ್ಲಿನ ಪ್ರತಿಯೊಂದು ವಿಶ್ವವಿದ್ಯಾನಿಲಯದ ಸಿಂಡಿಕೇಟಿನಿಂದ ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(3) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಜ) ಖಂಡದ ಮೇರೆಗೆ ಕರ್ನಾಟಕ ಗ್ರಂಥಾಲಯ ಸಂಘದ ಕಾರ್ಯನಿರ್ವಾಹಕ ಸಮಿತಿಯು ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು, ಆ ಉದ್ದೇಶಕ್ಕಾಗಿ ಕರೆಯಲಾದ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ಅದರ ಸದಸ್ಯರಿಂದ ಅಂಥ ಸಭೆಯಲ್ಲಿ ಹಾಜರಿರುವ

ಮತ್ತು ಮತ ಚಲಾಯಿಸುವ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(4) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಚ) ಖಂಡದ ಮೇರೆಗೆ ಬೆಂಗಳೂರು ನಗರದ ನಗರ ಗ್ರಂಥಾಲಯ ಪ್ರಾಧಿಕಾರವು ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು, ಆ ಉದ್ದೇಶಕ್ಕಾಗಿ ಕರೆಯಲಾದ ಸದರಿ ಪ್ರಾಧಿಕಾರದ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(5) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಛ) ಖಂಡದ ಮೇರೆಗೆ ನಗರ ಗ್ರಂಥಾಲಯ ಪ್ರಾಧಿಕಾರವು ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು, ಆ ಉದ್ದೇಶಕ್ಕಾಗಿ ಕರೆಯಲಾದ ಅಂಥ ಪ್ರಾಧಿಕಾರದ ಸಭೆಯಲ್ಲಿ, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(6) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಜ) ಖಂಡದ ಮೇರೆಗೆ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು, ಆ ಉದ್ದೇಶಕ್ಕಾಗಿ ಕರೆಯಲಾದ ಅಂಥ ಪ್ರಾಧಿಕಾರದ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

**4. ರಾಜ್ಯ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಗಳನ್ನು ಪೂರ್ಣಗೊಳಿಸಬೇಕಾದಂಥ ಅವಧಿ.–** 3ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ನಿಕಾಯದಿಂದ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯನನ್ನಾಗಿ ಒಬ್ಬ ವ್ಯಕ್ತಿಯನ್ನು,–

(ಕ) ಸದಸ್ಯನ ಪದಾವಧಿಯು ಮುಕ್ತಾಯವಾದ ಪರಿಣಾಮವಾಗಿ, ಅಂಥ ಅವಧಿಯು ಮುಕ್ತಾಯವಾದ ದಿನಾಂಕಕ್ಕೆ ಮುಂಚೆ ಎರಡು ತಿಂಗಳು ಮೀರದಂತೆ; ಅಥವಾ

(ಖ) ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ ಪ್ರಕರಣದಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಅಂಥ ಖಾಲಿ ಸ್ಥಾನವು ಸಂಭವಿಸಿದ ತರುವಾಯ ಕೂಡಲೇ ಆಯ್ಕೆ ಮಾಡಬೇಕಾಗಿರುವಲ್ಲಿ, ರಾಜ್ಯ ಗ್ರಂಥಪಾಲನು, ಚುನಾಯಿಸಬೇಕಾದ ವ್ಯಕ್ತಿಯು,–

(i) ಕರ್ನಾಟಕ ವಿಧಾನಸಭೆಯ ಸದಸ್ಯರಿಂದ ಚುನಾಯಿಸಬೇಕಾಗಿರುವಲ್ಲಿ, ಆ ಸಭೆಯ ಕಾರ್ಯದರ್ಶಿಗೆ;

(ii) ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಿಂದ ಚುನಾಯಿಸಬೇಕಾಗಿರುವಲ್ಲಿ, ಆ ಪರಿಷತ್ತಿನ ಕಾರ್ಯದರ್ಶಿಗೆ;

(iii) ರಾಜ್ಯದಲ್ಲಿನ ಪ್ರತಿಯೊಂದು ವಿಶ್ವವಿದ್ಯಾನಿಲಯದ ಸಿಂಡಿಕೇಟಿನ ಸದಸ್ಯರಿಂದ ಚುನಾಯಿಸ ಬೇಕಾಗಿರುವಲ್ಲಿ, ಅಂಥ ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರನಿಗೆ;

(iv) ಕರ್ನಾಟಕ ಗ್ರಂಥಾಲಯ ಸಂಘದ ಸದಸ್ಯರಿಂದ ಚುನಾಯಿಸಬೇಕಾಗಿರುವಲ್ಲಿ, ಅಂಥ ಸಂಘದ ಕಾರ್ಯದರ್ಶಿಗೆ;

(v) 3ನೇ ಪ್ರಕರಣದ (2)ನೇ ಉಪಪ್ರಕರಣದ (ಚ), (ಛ) ಮತ್ತು (ಜ) ಖಂಡಗಳಲ್ಲಿ ಉಲ್ಲೇಖಿಸಲಾದ ಯಾವುದೇ ಗ್ರಂಥಾಲಯ ಪ್ರಾಧಿಕಾರದ ಸದಸ್ಯರಿಂದ ಚುನಾಯಿಸಬೇಕಾಗಿರುವಲ್ಲಿ, ಆ ಸಮುಚಿತ ಗ್ರಂಥಾಲಯ ಪ್ರಾಧಿಕಾರದ ಕಾರ್ಯದರ್ಶಿಗೆ

– ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯರ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ಮತ್ತು ಚುನಾವಣೆಯು ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಇರುವಲ್ಲಿ ಅಂಥ

ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳನ್ನು ಮೀರದಂತೆ ವ್ಯಕ್ತಿಗಳನ್ನು ಚುನಾಯಿಸಲು ತಿಳಿಸತಕ್ಕದ್ದು.

**5. ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಆಯ್ಕೆ.–** (1) 17ನೇ ಪ್ರಕರಣದ (1)ನೇ ಉಪ ಪ್ರಕರಣದ (ಗ) ಖಂಡದ ಮೇರೆಗೆ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾಯಿಸಬೇಕಾದ ಇಬ್ಬರು ವ್ಯಕ್ತಿಗಳನ್ನು, ಪೌರ ನಿಗಮ, ಮುನ್ಸಿಪಲ್ ಕೌನ್ಸಿಲ್ ಅಥವಾ ನಗರದ ಇತರ ಪೌರ ನಿಕಾಯದ ಸಭೆಯಲ್ಲಿ ಅಂಥ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಸಂದರ್ಭಾನುಸಾರ ಅಂಥ ನಿಗಮ, ಕೌನ್ಸಿಲ್ಲಿನ ಅಥವಾ ನಿಕಾಯದ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(2) 17ನೇ ಪ್ರಕರಣದ (1)ನೇ ಉಪ ಪ್ರಕರಣದ (ಚ) ಖಂಡದ ಮೇರೆಗೆ ಕರ್ನಾಟಕ ಗ್ರಂಥಾಲಯ ಸಂಘದ ನಗರ ಶಾಖೆಯ ಪರಿಷತ್ತು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿಯನ್ನು, ಆ ಉದ್ದೇಶಕ್ಕಾಗಿ ಕರೆಯಲಾದ ಅಂಥ ಶಾಖಾ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಸಾದಾ ಬಹುಮತದ ಮೂಲಕ ಆಯ್ಕೆ ಮಾಡತಕ್ಕದ್ದು.

**6. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರ ಆಯ್ಕೆ.–** (1) 18ನೇ ಪ್ರಕರಣದ (1)ನೇ ಉಪ ಪ್ರಕರಣದ (ಗ) ಖಂಡದ ಮೇರೆಗೆ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾಯಿಸಬೇಕಾದ ಇಬ್ಬರು ವ್ಯಕ್ತಿಗಳನ್ನು, ಜಿಲ್ಲೆಯ ಜಿಲ್ಲಾ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿರುವ ಮತ ಚಲಾಯಿಸುವ ಅಂಥ ಪರಿಷತ್ತಿನ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕುದು.

(2) 18ನೇ ಪ್ರಕರಣದ (1)ನೇ ಉಪಪ್ರಕರಣದ (ಘ) ಖಂಡದ ಮೇರೆಗೆ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾಯಿಸಬೇಕಾದ ವ್ಯಕ್ತಿಯನ್ನು ಜಿಲ್ಲೆಯಲ್ಲಿನ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರ ನಿಕಾಯವು, ಸಂದರ್ಭಾನುಸಾರ, ಅಂಥ ಪ್ರತಿಯೊಂದು ಕೌನ್ಸಿಲ್ ಅಥವಾ ನಿಕಾಯದ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಅಂಥ ಕೌನ್ಸಿಲ್ ಅಥವಾ ನಿಕಾಯದ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

(3) 18ನೇ ಪ್ರಕರಣದ (1)ನೇ ಉಪ ಪ್ರಕರಣದ (ಖ) ಖಂಡದ ಮೇರೆಗೆ ಕರ್ನಾಟಕ ಗ್ರಂಥಾಲಯ ಸಂಘದ ಜಿಲ್ಲಾ ಶಾಖೆಯ ಪರಿಷತ್ತು ನಾಮನಿರ್ದೇಶನ ಮಾಡಬೇಕಾದ ಒಬ್ಬ ವ್ಯಕ್ತಿಯನ್ನು ಆ ಉದ್ದೇಶಕ್ಕಾಗಿ ಕರೆಯಲಾದ ಅಂಥ ಶಾಖಾ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯಲ್ಲಿ ಅಂಥ ಶಾಖಾ ಸಂಘದ ಸದಸ್ಯರಿಂದ ಅಂಥ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಕಾರ್ಯನಿರ್ವಾಹಕ ಸಮಿತಿಯ ಸದಸ್ಯರ ಸಾದಾ ಬಹುಮತದ ಮೂಲಕ ಆಯ್ಕೆ ಮಾಡತಕ್ಕದ್ದು.

**7. ಯಾವ ಅವಧಿಯೊಳಗೆ ನಗರ ಗ್ರಂಥಾಲಯ ಪ್ರಾಧಿಕಾರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಚುನಾವಣೆಯನ್ನು ಪೂರ್ಣಗೊಳಿಸಬೇಕಾಗಿದೆಯೋ ಆ ಅವಧಿ.–** (1) 17ನೇ ಪ್ರಕರಣದ (1)ನೇ ಉಪ ಪ್ರಕರಣದ (ಗ) ಖಂಡದಲ್ಲಿ ಉಲ್ಲೇಖಿಸಲಾದ ನಿಕಾಯವು ಗ್ರಂಥಾಲಯ ಪ್ರಾಧಿಕಾರದ ಸದಸ್ಯನನ್ನಾಗಿ ವ್ಯಕ್ತಿಯನ್ನು,–

(ಕ) ಸದಸ್ಯನ ಪದಾವಧಿಯು ಮುಕ್ತಾಯವಾದ ಕಾರಣದಿಂದಾಗಿ, ಅಂಥ ಅವಧಿಯು ಮುಕ್ತಾಯವಾದ ದಿನಾಂಕಕ್ಕೆ ಮುಂಚೆ ಎರಡು ತಿಂಗಳುಗಳನ್ನು ಮೀರದಂತೆ; ಅಥವಾ

(ಖ) ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ 19ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಅಂಥ ಖಾಲಿ ಸ್ಥಾನವು ಸಂಭವಿಸಿದ ನಿಕಟೋತ್ತರದಲ್ಲಿ, ನಗರದ ಮುಖ್ಯ ಗ್ರಂಥಪಾಲನು, ಸಂದರ್ಭಾನುಸಾರ, ಪೌರ ನಿಗಮ ಅಥವಾ ಮುನ್ಸಿಪಲ್ ಕಮಿಷನರ್‌ನಿಗೆ ಅಥವಾ ನಗರದ ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರ ನಿಕಾಯದ ಮುಖ್ಯಾಧಿಕಾರಿಗೆ ಅಂಥ ನಗರ ಗ್ರಂಥಾಲಯ ಪ್ರಾಧಿಕಾರದ ಸದಸ್ಯರ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ವ್ಯಕ್ತಿಗಳನ್ನು ಚುನಾಯಿಸಲು

ಮತ್ತು ಚುನಾವಣೆಯು ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಇರುವಲ್ಲಿ, ಅಂಥ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳನ್ನು ಮೀರದಂತೆ ಚುನಾಯಿಸಲು ತಿಳಿಸತಕ್ಕದ್ದು.

(2) 18ನೇ ಪ್ರಕರಣದ (1)ನೇ ಉಪ ಪ್ರಕರಣದ (ಜ) ಮತ್ತು (ಫ) ಖಂಡದಲ್ಲಿ ಉಲ್ಲೇಖಿಸಿದ ಯಾವುದೇ ನಿಕಾಯವು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಸದಸ್ಯನೆಂದು ವ್ಯಕ್ತಿಯನ್ನು,–

(ಕ) ಸದಸ್ಯನ ಪದಾವಧಿಯು ಮುಕ್ತಾಯವಾದ ಪರಿಣಾಮವಾಗಿ ಚುನಾಯಿಸಬೇಕಾಗಿರುವಲ್ಲಿ ಅಂಥ ಅವಧಿಯು ಮುಕ್ತಾಯದ ದಿನಾಂಕಕ್ಕೆ ಮುಂಚೆ ಎರಡು ತಿಂಗಳುಗಳನ್ನು ಮೀರದಂತೆ; ಅಥವಾ

(ಖ) ಚುನಾವಣೆಯ ಮೂಲಕ ಭರ್ತಿ ಮಾಡಬೇಕಾದ 18ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ, ಚುನಾಯಿಸಬೇಕಾಗಿರುವಲ್ಲಿ ಅಂಥ ಖಾಲಿ ಸ್ಥಾನವು ಸಂಭವಿಸಿದ ನಿಕಟೋತ್ತರದಲ್ಲಿ ಜಿಲ್ಲೆಯ ಮುಖ್ಯ ಗ್ರಂಥಪಾಲನು ಆ ವ್ಯಕ್ತಿಯನ್ನು,–

(i) ಜಿಲ್ಲಾ ಅಭಿವೃದ್ಧಿ ಪರಿಷತ್ತಿನ ಸದಸ್ಯರಿಂದ ವ್ಯಕ್ತಿಯನ್ನು ಚುನಾಯಿಸಬೇಕಾಗಿರುವಲ್ಲಿ, ಅಂಥ ಪರಿಷತ್ತಿನ ಕಾರ್ಯದರ್ಶಿಗೆ;

(ii) ಮುನ್ಸಿಪಲ್ ಕೌನ್ಸಿಲ್ ಅಥವಾ ಜಿಲ್ಲೆಯಲ್ಲಿನ ಇತರ ಪೌರ ನಿಕಾಯದ ಸದಸ್ಯರಿಂದ ವ್ಯಕ್ತಿಯನ್ನು ಚುನಾಯಿಸಬೇಕಾಗಿರುವಲ್ಲಿ, ಸಂದರ್ಭಾನುಸಾರ, ಅಂಥ ಪ್ರತಿಯೊಂದು ಮುನ್ಸಿಪಲ್ ಕೌನ್ಸಿಲಿನ ಮುಖ್ಯಾಧಿಕಾರಿಗೆ ಅಥವಾ ಪೌರ ನಿಕಾಯದ ಅಧ್ಯಕ್ಷನಿಗೆ

– ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಸದಸ್ಯರ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚೆ ವ್ಯಕ್ತಿಗಳನ್ನು ಚುನಾಯಿಸಲು, ಮತ್ತು ಯಾವುದೇ ಖಾಲಿ ಸ್ಥಾನವನ್ನು ಭರ್ತಿ ಮಾಡುವುದಕ್ಕಾಗಿ ಇರುವಲ್ಲಿ, ಅಂಥ ಸೂಚನೆಯನ್ನು ಸ್ವೀಕರಿಸಿದ ದಿನಾಂಕದಿಂದ ಒಂದು ತಿಂಗಳನ್ನು ಮೀರದಂತೆ ವ್ಯಕ್ತಿಗಳನ್ನು ಚುನಾಯಿಸಲು ತಿಳಿಸತಕ್ಕದ್ದು.

**8. ಶಾಖಾ ಗ್ರಂಥಾಲಯ ಸಮಿತಿಗೆ ಚುನಾವಣೆ.–** 29ನೇ ಪ್ರಕರಣದ (2)ನೇ ಉಪ ಪ್ರಕರಣದ (ಖ) ಖಂಡದ ಮೇರೆಗೆ ಶಾಖಾ ಗ್ರಂಥಾಲಯ ಸಮಿತಿಗೆ ಚುನಾಯಿಸಬೇಕಾದ ಒಬ್ಬ ವ್ಯಕ್ತಿಯನ್ನು, ಮುನ್ಸಿಪಲ್ ಕೌನ್ಸಿಲಿನ ಅಥವಾ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮುನ್ಸಿಪಲ್ ಕೌನ್ಸಿಲ್ ಅಥವಾ ಇತರ ಪೌರನಿಕಾಯ ಅಥವಾ ಪಂಚಾಯಿತಿಯ ಸಭೆಯಲ್ಲಿ, ಅಂಥ ಸಭೆಯಲ್ಲಿ ಹಾಜರಿದ್ದು ಮತ ಚಲಾಯಿಸುವ ಸಂದರ್ಭಾನುಸಾರ ಅಂಥ ಕೌನ್ಸಿಲ್, ನಿಕಾಯ ಅಥವಾ ಪಂಚಾಯಿತಿಯ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು

## ಅಧ್ಯಾಯ–III

## ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು

**9. ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಳ ಬಗ್ಗೆ ನೋಟೀಸು.–** (1) ಕಾರ್ಯದರ್ಶಿಯು, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಪ್ರತಿಯೊಂದು ಸಭೆಯ ಬಗ್ಗೆ ಸದಸ್ಯರಿಗೆ, ಪೂರ್ಣ ಹತ್ತು ದಿವಸಗಳ ನೋಟೀಸನ್ನು ಕೊಡತಕ್ಕದ್ದು ಮತ್ತು ಆ ನೋಟೀಸಿನೊಂದಿಗೆ ಸಭೆಯಲ್ಲಿ ನಡೆಸಬೇಕಾದ ವ್ಯವಹಾರವನ್ನು ಒಳಗೊಂಡ ಕಾರ್ಯಸೂಚಿ ಪತ್ರವನ್ನು ಕಳುಹಿಸತಕ್ಕದ್ದು. ಅಧ್ಯಕ್ಷನು ಕಾರ್ಯಸೂಚಿಯಲ್ಲಿ ಒಳಗೊಂಡಿರದ ವ್ಯವಹಾರದ ಯಾವುದೇ ಜರೂರು ಬಾಬನ್ನು ಸಭೆಯ ಮುಂದೆ ಇಡಬಹುದು.

(2) ಅಧ್ಯಕ್ಷನು, ವಿಶೇಷ ಸಭೆಯನ್ನು, ಸಭೆಯಲ್ಲಿ ಚರ್ಚಿಸಬೇಕಾದ ಜರೂರು ಮಹತ್ವವುಳ್ಳ ವಿಷಯಗಳನ್ನು ಬರಹದಲ್ಲಿ ವಿಶೇಷವಾಗಿ ಸೂಚಿಸಬೇಕೆಂಬ ಮತ್ತು ಅಂಥ ಕೋರಿಕೆಯು, ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಮೂರನೇ ಒಂದು ಭಾಗಕ್ಕಿಂತ ಕಡಿಮೆ ಇಲ್ಲದ ಸದಸ್ಯರಿಂದ ಸಮರ್ಥವಾಗಿರಬೇಕೆಂಬ ಷರತ್ತಿಗೊಳಪಟ್ಟು, ಈ ಬಗ್ಗೆ ಬರಹದಲ್ಲಿನ ಕೋರಿಕೆಯನ್ನು ಸ್ವೀಕರಿಸಿದ ತರುವಾಯ ಹದಿನೈದು ದಿವಸಗಳಿಗೆ ಹೆಚ್ಚಿಲ್ಲದ ದಿನಾಂಕಕ್ಕೆ ಕರೆಯತಕ್ಕದ್ದು.

**10. ರಾಜ್ಯ ಗ್ರಂಥಾಲಯ ಪ್ರಾಧಿಕಾರ ಸಭೆಯಲ್ಲಿ ವ್ಯವಹಾರವನ್ನು ನಡೆಸುವುದಕ್ಕಾಗಿನ ಪ್ರಕ್ರಿಯೆ.–** (1) ಯಾವುದೇ ಸಭೆಯಲ್ಲಿ ಕೋರಂ ಇಲ್ಲದಿದ್ದರೆ, ಅಧ್ಯಕ್ಷನು ಸಭೆಯನ್ನು ಆ ಸಭೆಯ ತರುವಾಯದ ದಿನಾಂಕಕ್ಕೆ ಮುಂದೂಡತಕ್ಕದ್ದು. ಕಾರ್ಯದರ್ಶಿಯು, ಆ ಮುಂದೂಡಿದ ಸಭೆಯ ದಿನಾಂಕ ಮತ್ತು ವೇಳೆಯನ್ನು ಸೂಚಿಸುವ ಪೂರ್ಣ ಐದು ದಿವಸಗಳ ಹೊಸ ನೋಟೀಸನ್ನು ಕೊಡತಕ್ಕದ್ದು ಮತ್ತು ಮೂಲ ಸಭೆಯಲ್ಲಿ ಕೋರಂ ಇದ್ದಿದ್ದರೆ ಅದರ ಮುಂದೆ ತರಬೇಕಾಗಿದ್ದಂಥ ವ್ಯವಹಾರವನ್ನು ಮುಂದೂಡಿದ ಸಭೆಯ ಮುಂದೆ ತರತಕ್ಕದ್ದು ಮತ್ತು ಅದನ್ನು ಕೋರಂ ಇದ್ದರೆ, ಅಂಥ ಸಭೆಯಲ್ಲಿ ವಿಲೆ ಮಾಡಬಹುದು.

(2) ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಯಾವುದೇ ಸಭೆಯಲ್ಲಿನ ಎಲ್ಲಾ ಪ್ರಶ್ನೆಗಳನ್ನು, ಹಾಜರಿರುವ ಮತ್ತು ಮತ ಚಲಾಯಿಸಿದ ಸದಸ್ಯರ ಬಹುಮತದ ಮೂಲಕ ತೀರ್ಮಾನಿಸತಕ್ಕದ್ದು ಮತ್ತು ಸಮಾನ ಮತಗಳ ಸಂದರ್ಭದಲ್ಲಿ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

(3) ಮತವು ಕೈಎತ್ತುವುದರ ಮೂಲಕ ಇರತಕ್ಕದ್ದು. ಆದರೆ, ರಾಜ್ಯ ಗ್ರಂಥಾಲಯ ಪ್ರಾಧಿಕಾರವು ಯಾವುದೇ ಪ್ರಶ್ನೆಯನ್ನು ಮತಪತ್ರದ ಮೂಲಕ ತೀರ್ಮಾನಿಸತಕ್ಕದ್ದೆಂದು ನಿರ್ಣಯಿಸಬಹುದು.

(4) ಮತದಾನವನ್ನು ಮತ ಪತ್ರದ ಮೂಲಕ ಕೊಡಬೇಕೆಂದು ತಗಾದೆ ಮಾಡಿದಾಗ ಹೊರತು, ಅಂಥ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು, ಪ್ರಸ್ತಾವವನ್ನು ಅಂಗೀಕರಿಸಲಾಗಿದೆ ಅಥವಾ ಅದು ಬಿದ್ದು ಹೋಗಿದೆ ಎಂದು ಮಾಡಿದ ಘೋಷಣೆಯು, ಸಂದರ್ಭಾನುಸಾರ ಅಂಥ ಪ್ರಸ್ತಾವವನ್ನು ಅಂಗೀಕರಿಸಿರುವುದಕ್ಕಾಗಿನ ಅಥವಾ ಅಂಗೀಕರಿಸಿಲ್ಲದಿರುವುದರ ಬಗ್ಗೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು.

(5) ಮತದಾನವು ಮತ ಪತ್ರದ ಮೂಲಕ ಇರುವಾಗ, ಮತದಾನ ಮಾಡಲು ಇಚ್ಛಿಸುವ ಹಾಜರಿರುವ ಎಲ್ಲಾ ಸದಸ್ಯರ ಮತಗಳನ್ನು ಆ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯ ನಿರ್ದೇಶನದ ಮೇರೆಗೆ ತೆಗೆದುಕೊಳ್ಳತಕ್ಕದ್ದು ಮತ್ತು ಮತದಾನದ ಫಲಿತಾಂಶವನ್ನು, ಅಂಥ ಸಭೆಯಲ್ಲಿ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ತೀರ್ಮಾನವಾಗಿರುವುದಾಗಿ ಭಾವಿಸತಕ್ಕದ್ದು.

(6) ಕಾರ್ಯದರ್ಶಿಯ ಅಧ್ಯಕ್ಷನ ನಿರ್ದೇಶನಗಳ ಮೇರೆಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಭೆಗಳ ವ್ಯವಹರಣೆಗಳು ಮತ್ತು ತೀರ್ಮಾನಗಳ ದಾಖಲೆಯನ್ನು ಇಟ್ಟುಕೊಂಡು ಬರತಕ್ಕದ್ದು.

**11. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳು ಮತ್ತು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆ.–** (1) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸಭೆಯಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಗೈರು ಹಾಜರಿಯಲ್ಲಿ ಆ ಸಭೆಯಲ್ಲಿ ಅಧ್ಯಕ್ಷತೆ ವಹಿಸಲು ಹಾಜರಿರುವ ಸದಸ್ಯರು ಅಂಥ ಸಭೆಗೆ ಅವರ ಪೈಕಿ ಒಬ್ಬರನ್ನು ಆಯ್ಕೆ ಮಾಡತಕ್ಕದ್ದು.

(2) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸದಸ್ಯರ ಒಟ್ಟು ಸಂಖ್ಯೆಯ ಬಹುಮತವು ಅಂಥ ಪ್ರಾಧಿಕಾರದ ಸಭೆಗಾಗಿನ ಕೋರಂ ಆಗಿರತಕ್ಕದ್ದು.

(3) 9ನೇ ಮತ್ತು 10ನೇ ನಿಯಮಗಳ ಉಪಬಂಧಗಳು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳ ಸಭೆಗಳನ್ನು ಕರೆಯುವುದಕ್ಕಾಗಿ ಮತ್ತು ಅಂಥ ಸಭೆಗಳಲ್ಲಿ ಅನುಸರಿಸಬೇಕಾದ ಪ್ರಕ್ರಿಯೆಗಾಗಿ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯಿಸತಕ್ಕದ್ದು.

**12. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷನ ಚುನಾವಣೆ.–** ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಉಪಾಧ್ಯಕ್ಷನನ್ನು ಅಂಥ ಪ್ರಾಧಿಕಾರದ ಸಭೆಯಲ್ಲಿ, ಅದರ ಸದಸ್ಯರಿಂದ ಅಂಥ ಸಭೆಯಲ್ಲಿ ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಸಾದಾ ಬಹುಮತದ ಮೂಲಕ ಚುನಾಯಿಸತಕ್ಕದ್ದು.

## ಅಧ್ಯಾಯ–IV

## ರಾಜ್ಯ ಗ್ರಂಥಪಾಲ

**13. ರಾಜ್ಯ ಗ್ರಂಥಪಾಲನ ಅರ್ಹತೆಗಳು.–** 14ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಗ್ರಂಥಪಾಲನೆಂದು ನೇಮಕ ಮಾಡಬೇಕಾದ ವ್ಯಕ್ತಿಯು, (1) ಮನ್ನಣೆ ಪಡೆದ ವಿಶ್ವವಿದ್ಯಾನಿಲಯದ ಸ್ನಾತಕ ಪದವಿ (2) ಒಂದು ಶೈಕ್ಷಣಿಕ ವರ್ಷದ ವ್ಯಾಸಂಗ ಕ್ರಮದ ತರುವಾಯ ಪಡೆದುಕೊಂಡ ಮನ್ನಣೆ ಪಡೆದ ವಿಶ್ವವಿದ್ಯಾನಿಲಯದ ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೋಮಾ ಅಥವಾ ಪದವಿ–ಸ್ನಾತಕೋತ್ತರ ಪದವಿಗೆ ಆದ್ಯತೆ ಮತ್ತು (3) ಮನ್ನಣೆ ಪಡೆದ ಗ್ರಂಥಾಲಯದಲ್ಲಿ ಕನಿಷ್ಠ ಪಕ್ಷ ಹತ್ತು ವರ್ಷಗಳಷ್ಟು ಕೆಲಸದ ಅನುಭವ ಮತ್ತು ಐದು ವರ್ಷಗಳ ಜವಾಬ್ದಾರಿಯುತ ಹುದ್ದೆಯಲ್ಲಿ ಗ್ರಂಥಪಾಲನಾಗಿ ಅನುಭವ–ವಯಸ್ಸು 40 ವರ್ಷಗಳಿಗೆ ಕಡಿಮೆ ಇರಬಾರದು–ಈ ಕನಿಷ್ಠ ಅರ್ಹತೆಗಳನ್ನು ಹೊಂದಿರತಕ್ಕದ್ದು.

## ಅಧ್ಯಾಯ–V

## ಸ್ಥಳೀಯ ಗ್ರಂಥಾಲಯ ಅಭಿವೃದ್ಧಿ ಯೋಜನೆಗಳು

**14. ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ತಯಾರಿಕೆ.–** (1) ನಗರ ಗ್ರಂಥಾಲಯ ಪ್ರಾಧಿಕಾರವು, ಅದರ ಅಧಿಕಾರ ವ್ಯಾಪ್ತಿಯಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಗ್ರಂಥಾಲಯ ಸೇವೆಯನ್ನು ವಿಸ್ತರಿಸುವುದಕ್ಕಾಗಿ 27ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಅದು ತಯಾರಿಸಬೇಕಾದ ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆಯು, ಅನುಬಂಧ–Iರಲ್ಲಿ ಒಳಗೊಂಡ ನಮೂನೆಯಲ್ಲಿರುವಂತೆ ಇರತಕ್ಕುದು ಮತ್ತು ಅದನ್ನು ಈ ಕೆಳಕಂಡ ರೀತಿಯಲ್ಲಿ ತಯಾರಿಸತಕ್ಕದ್ದು, ಎಂದರೆ:–

(ಕ) ನಗರದ ಸ್ಥಳೀಯ ನಿಕಾಯವು ಇಟ್ಟುಕೊಂಡು ಬರುವ ಸಾರ್ವಜನಿಕ ಗ್ರಂಥಾಲಯಗಳು;

(ಖ) ಇತರ ಸಹಕಾರಿ ಏಜೆನ್ಸಿಗಳು ಇಟ್ಟುಕೊಂಡು ಬರುವ ಸಾರ್ವಜನಿಕರಿಗೆ ಮುಕ್ತವಾಗಿರುವ ಇತರ ಗ್ರಂಥಾಲಯಗಳು;

(ಗ) ನಗರದ ಸ್ಥಳೀಯ ನಿಕಾಯವು ಇಟ್ಟುಕೊಂಡು ಬರುವ ಶಾಲಾ ಗ್ರಂಥಾಲಯಗಳು ;

(ಘ) ಇತರ ನಿಗಮಿತ ಏಜೆನ್ಸಿಗಳು ಇಟ್ಟುಕೊಂಡು ಬರುವ ಶಾಲಾ ಗ್ರಂಥಾಲಯಗಳು; ಮತ್ತು

(ಙ) ಆಸ್ಪತ್ರೆ ಗ್ರಂಥಾಲಯಗಳು.

(2) (1)ನೇ ಉಪ ಪ್ರಕರಣದ ಮೇರೆಗೆ ತಯಾರಿಸಬೇಕಾದ ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆಯು, ಅನುಬಂಧ–1ರಲ್ಲಿರುವಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

**15. ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ತಯಾರಿಕೆ.–** (1) ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ಅದರ ಅಧಿಕಾರ ವ್ಯಾಪ್ತಿಯಲ್ಲಿ ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಗ್ರಂಥಾಲಯ ಸೇವೆಯನ್ನು ವಿಸ್ತರಿಸುವುದಕ್ಕಾಗಿ 27ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಅದು ತಯಾರಿಸಬೇಕಾದ ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯು, ಅನುಬಂಧ–IIರಲ್ಲಿ ಒಳಗೊಂಡ ನಮೂನೆಯಲ್ಲಿರುವಂತೆ ಇರತಕ್ಕದ್ದು ಮತ್ತು ಅದನ್ನು ಈ ಕೆಳಕಂಡ ರೀತಿಯಲ್ಲಿ ತಯಾರಿಸತಕ್ಕದ್ದು, ಎಂದರೆ:–

(ಕ) ಯೋಜನೆಯ ಪೂರ್ಣ ರೂಪರೇಖೆ;

(ಖ) ಪಟ್ಟಣ ಉಪಯೋಜನೆ; ಮತ್ತು

(ಗ) ಗ್ರಾಮ ಉಪಯೋಜನೆ,

(2) (1)ನೇ ಉಪನಿಯಮದ ಮೇರೆಗೆ ತಯಾರಿಸಬೇಕಾದ ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯು, 11ನೇ ಅನುಬಂಧದಲ್ಲಿರುವಂಥ ವಿವರಗಳನ್ನು ಒಳಗೊಂಡಿರತಕ್ಕದ್ದು.

**16. ಗ್ರಂಥಾಲಯ ಅಭಿವೃದ್ಧಿ ಯೋಜನೆಗಳ ಮುಖ್ಯ ವೈಶಿಷ್ಟ್ಯಗಳನ್ನು ಪ್ರಕಟಿಸುವ ರೀತಿ.–** 27ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ತಯಾರಿಸಲಾದ ಪ್ರತಿಯೊಂದು ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆ ಮತ್ತು ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ಮುಖ್ಯ ವೈಶಿಷ್ಟ್ಯಗಳನ್ನು, 27ನೇ ಪ್ರಕರಣದ (2)ನೇ ಉಪ ಪ್ರಕರಣದ ಮೂಲಕ ಅಗತ್ಯಪಡಿಸಿದ ನೋಟೀಸಿನೊಡನೆ ಈ ಕೆಳಕಂಡ ರೀತಿಯಲ್ಲಿ ಪ್ರಕಟಿಸತಕ್ಕದ್ದು, ಎಂದರೆ:–

(1) ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ;

(2) ಸ್ಥಳೀಯ ಪತ್ರಿಕೆಗಳಲ್ಲಿ ಪರಿಚಲಿಸುವ ಮೂಲಕ; ಮತ್ತು

(3) ಮುಖ್ಯ ಗ್ರಂಥಪಾಲರಿಗೆ ಯಾವ ದಿನಾಂಕದೊಳಗಾಗಿ ಆಕ್ಷೇಪಣೆಗಳನ್ನು ಕಳುಹಿಸಬೇಕಾಗಿದೆಯೋ, ಆ ದಿನಾಂಕವನ್ನು ನೋಟೀಸಿನಲ್ಲಿ ಆಕ್ಷೇಪಣೆಗಳನ್ನು ಕಳುಹಿಸುವುದಕ್ಕಾಗಿ ಅವಕಾಶ ಮಾಡಿಕೊಡಬೇಕಾದ ಅವಧಿಯು ರಾಜಪತ್ರದಲ್ಲಿ ಪ್ರಕಟಣೆಯ ವಾಸ್ತವಿಕ ದಿನಾಂಕದ ತರುವಾಯ ಯುಕ್ತ ಅವಧಿಯದಾಗಿದೆಯೆ ಎಂಬುದನ್ನು ಪರ್ಯಾಲೋಚಿಸಿ ನಿರ್ದಿಷ್ಟಪಡಿಸತಕ್ಕದ್ದು.

## ಅಧ್ಯಾಯ–VI

## ಗ್ರಂಥಾಲಯಗಳ ನಿಧಿಗಳ ನಿರ್ವಹಣೆ

**17. ರಾಜ್ಯ ಗ್ರಂಥಾಲಯ ನಿಧಿಯ ನಿರ್ವಹಣೆ.–** (1) ರಾಜ್ಯ ಗ್ರಂಥಪಾಲನು ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯಲ್ಲಿ ರಾಜ್ಯ ಗ್ರಂಥಾಲಯ ನಿಧಿಗೆ ಸಂಬಂಧಪಟ್ಟ ಒಂದು ಖಾತೆಯನ್ನು ತೆರೆಯತಕ್ಕದ್ದು.

(2) 33ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಮೊತ್ತಗಳು ಮತ್ತು ರಾಜ್ಯ ಗ್ರಂಥಾಲಯ ಪ್ರಾಧಿಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಕ್ಲೇಮು ಮಾಡಲಾದ ಇತರ ಎಲ್ಲಾ ಮೊತ್ತಗಳನ್ನು ಸದರಿ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಸದರಿ ನಿಧಿಗೆ ಜಮೆ ಮಾಡಿದ ಮತ್ತು ಅದರಿಂದ ಸಂದಾಯ ಮಾಡಿದ ಎಲ್ಲಾ ಹಣಗಳ ಲೆಕ್ಕವನ್ನು ರಾಜ್ಯ ಗ್ರಂಥಪಾಲನು ಇಟ್ಟುಕೊಂಡು ಬರತಕ್ಕದ್ದು.

(3) ರಾಜ್ಯ ಗ್ರಂಥಾಲಯ ನಿಧಿಯಿಂದ ರಾಜ್ಯ ಗ್ರಂಥಪಾಲನು ಮೊಬಲಗುಗಳನ್ನು ಅವನು ತಾನು ಸಹಿ ಮಾಡಿದ ಚೆಕ್ಕುಗಳನ್ನು ಕೊಡುವ ಮೂಲಕ ಪಡೆಯಬಹುದು.

**18. ನಗರ ಗ್ರಂಥಾಲಯ ನಿಧಿಯ ನಿರ್ವಹಣೆ.–** (1) ಪ್ರತಿಯೊಂದು ನಗರ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು, ನಗರ ಗ್ರಂಥಾಲಯ ನಿಧಿಗೆ ಸಂಬಂಧಪಟ್ಟ ಒಂದು ಖಾತೆಯನ್ನು ಜಿಲ್ಲಾ ಖಜಾನೆ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಥವಾ ಇತರ ಯಾವುದೇ ಅನುಸೂಚಿತ ಬ್ಯಾಂಕಿನಲ್ಲಿ ತೆರೆಯತಕ್ಕದ್ದು. ಬೆಂಗಳೂರು ನಗರ ಗ್ರಂಥಾಲಯ ನಿಧಿಗಳ ಸಂದರ್ಭದಲ್ಲಿ ರಾಜ್ಯ ಹುಜೂರ್ ಖಜಾನೆಯಲ್ಲಿ ಖಾತೆಯನ್ನು ತೆರೆಯತಕ್ಕದ್ದು.

(2) 32ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಮೊತ್ತಗಳು ಮತ್ತು ನಗರ ಗ್ರಂಥಾಲಯ ಪ್ರಾಧಿಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಕ್ಲೇಮು ಮಾಡಬಹುದಾದ ಇತರ ಎಲ್ಲಾ ಮೊತ್ತಗಳನ್ನು ಸದರಿ ನಿಧಿಗೆ ಜಮೆ ಮಾಡತಕ್ಕದ್ದು ಮತ್ತು ಸದರಿ ನಿಧಿಗೆ ಜಮೆ ಮಾಡಿದ ಮತ್ತು ಅದರಿಂದ ಸಂದಾಯ ಮಾಡಿದ ಎಲ್ಲಾ ಹಣಗಳ ಲೆಕ್ಕವನ್ನು ಅಂಥ ನಗರ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು ಇಟ್ಟುಕೊಂಡು ಬರತಕ್ಕದ್ದು.

(3) ನಗರ ಗ್ರಂಥಾಲಯ ನಿಧಿಯಿಂದ ಮೊಬಲಗನ್ನು ನಗರ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು ಅವನು ರುಜು ಮಾಡಿದ ಚೆಕ್ಕುಗಳನ್ನು ಕೊಡುವ ಮೂಲಕ ಪಡೆಯಬಹುದು.

**19. ಜಿಲ್ಲಾ ಗ್ರಂಥಾಲಯ ನಿಧಿಯ ನಿರ್ವಹಣೆ.–** (1) ಪ್ರತಿಯೊಂದು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು, ಜಿಲ್ಲಾ ಗ್ರಂಥಾಲಯ ನಿಧಿಗೆ ಸಂಬಂಧಪಟ್ಟ ಖಾತೆಯನ್ನು ಜಿಲ್ಲಾ ಖಜಾನೆಯಲ್ಲಿ ಅಥವಾ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ತೆರೆಯತಕ್ಕದ್ದು.

(2) 32ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಮೊತ್ತಗಳು ಮತ್ತು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ಅಥವಾ ಅದರ ಪರವಾಗಿ ಸ್ವೀಕರಿಸಿದ ಅಥವಾ ಕ್ಲೇಮು ಮಾಡಬಹುದಾದ ಎಲ್ಲಾ ಇತರ ಮೊತ್ತಗಳನ್ನು ಸದರಿ ನಿಧಿಗೆ ಜಮೆ ಮಾಡತಕ್ಕದ್ದು. ಸದರಿ ನಿಧಿಗೆ ಜಮೆ ಮಾಡಿದ ಮತ್ತು ಅದರಿಂದ ಸಂದಾಯ ಮಾಡಿದ ಎಲ್ಲಾ ಹಣಗಳ ಲೆಕ್ಕವನ್ನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು ಇಟ್ಟುಕೊಂಡು ಬರತಕ್ಕದ್ದು.

(3) ಜಿಲ್ಲಾ ಗ್ರಂಥಾಲಯ ನಿಧಿಯಿಂದ ಮೊಬಲಗುಗಳನ್ನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನು, ಅವನು ರುಜು ಮಾಡಿ ಚೆಕ್ಕುಗಳನ್ನು ಕೊಡುವ ಮೂಲಕ ಪಡೆಯಬಹುದು.

**20. ಜಿಲ್ಲಾ ಗ್ರಂಥಾಲಯ ನಿಧಿಗೆ ಸರ್ಕಾರದ ಅನುದಾನಗಳನ್ನು ಜಮೆ ಮಾಡುವ ರೀತಿ.–** 31ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಕೊಟ್ಟ ವಾರ್ಷಿಕ ಅನುದಾನದ ಮೊಬಲಗನ್ನು ತೋರಿಸುವ ಸರ್ಕಾರದ ಆದೇಶಗಳನ್ನು ಜಿಲ್ಲಾ ಗ್ರಂಥಾಲಯ ಪ್ರಾಧಿಕಾರವು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ, ಜಿಲ್ಲೆಯ ಮುಖ್ಯ ಗ್ರಂಥಪಾಲರು, ಬಾಕಿಯಾದ ಮೊಬಲಗಿನ ಸಂದಾಯಕ್ಕಾಗಿ ಬಿಲ್ಲನ್ನು, ಸಂದಾಯವನ್ನು ಅಧಿಕೃತಗೊಳಿಸುವುದಕ್ಕಾಗಿ ಅನುಕ್ರಮವಾಗಿ ಜೂನ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ಪ್ರತಿ ವರ್ಷ ಎರಡು ಬಾರಿ ರಾಜ್ಯ ಸರ್ಕಾರದ ಸಮುಚಿತ ಅಧಿಕಾರಿಗೆ ಸಲ್ಲಿಸತಕ್ಕದ್ದು ಮತ್ತು ಹಾಗೆ ಅಧಿಕೃತಗೊಳಿಸಿದ ಮೊತ್ತವನ್ನು ಜಿಲ್ಲಾ ಗ್ರಂಥಾಲಯ ನಿಧಿಗೆ ಜಮೆ ಮಾಡತಕ್ಕದ್ದು.

## ಅಧ್ಯಾಯ– VII

## ಲೆಕ್ಕ ಪತ್ರಗಳು, ಲೆಕ್ಕ ಪರಿಶೋಧನೆ ಮತ್ತು ವಾರ್ಷಿಕ ವರದಿ

**21. ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರುವುದು.–** ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕನು ಹೊರಡಿಸಿದಂಥ ಸೂಚನೆಗಳಿಗನುಸಾರವಾಗಿ ಆದಾಯ ಮತ್ತು ವೆಚ್ಚದ ಮತ್ತು ಜಮೆಗಳು ಮತ್ತು ವೆಚ್ಚಗಳ ಲೆಕ್ಕವನ್ನು ಇಟ್ಟುಕೊಂಡು ಬರತಕ್ಕದ್ದು.

**22. ಲೆಕ್ಕ ಪರಿಶೋಧನೆ, ನಾಮಂಜೂರಾತಿ ಮತ್ತು ಅಧಿಭಾರ.–** (1) ರಾಜ್ಯ ಗ್ರಂಥಾಲಯ ನಿಧಿಯ ಮತ್ತು ನಗರ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗಳ ಲೆಕ್ಕ ಪತ್ರಗಳನ್ನು ರಾಜ್ಯ ಸರ್ಕಾರದ ರಾಜ್ಯ ಲೆಕ್ಕಪತ್ರ ಇಲಾಖೆಯ ನಿಯಂತ್ರಕನು ನೇಮಕ ಮಾಡಿದ ಲೆಕ್ಕ ಪರಿಶೋಧಕರು ಪರಿಶೋಧನೆ ಮಾಡತಕ್ಕದ್ದು.

(2) (ಕ) ರಾಜ್ಯ ಗ್ರಂಥಪಾಲನು, ರಾಜ್ಯ ಗ್ರಂಥಾಲಯ ನಿಧಿಗಳಿಗೆ ಸಂಬಂಧಿಸಿದ ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧಕರಿಗೆ ಒಪ್ಪಿಸತಕ್ಕದ್ದು; ಮತ್ತು

(ಖ) ಮುಖ್ಯ ಗ್ರಂಥಪಾಲಕರು, ನಗರ ಮತ್ತು ಜಿಲ್ಲಾ ಗ್ರಂಥಾಲಯ ನಿಧಿಗಳಿಗೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಕರಿಗೆ ಒಪ್ಪಿಸತಕ್ಕದ್ದು;

(3) ಲೆಕ್ಕ ಪರಿಶೋಧಕರು–

(i) ಅವರು ಪರೀಕ್ಷೆಗಾಗಿ ಅವಶ್ಯವೆಂದು ಪರ್ಯಾಲೋಚಿಸುವಂಥ ಯಾವುದೇ ಪುಸ್ತಕ, ಪತ್ರ, ಕರಾರು, ಲೆಕ್ಕ, ವೋಚರ್, ರಸೀತಿ ಅಥವಾ ಇತರ ದಸ್ತಾವೇಜನ್ನು ಪರಿಶೀಲಿಸುವುದಕ್ಕಾಗಿ ಹಾಜರುಪಡಿಸಲು ಬರಹದಲ್ಲಿ ಅಗತ್ಯಪಡಿಸಬಹುದು;

(ii) ಅಂಥ ಯಾವುದೇ ದಸ್ತಾವೇಜಿನ ಅಭಿರಕ್ಷೆ ಅಥವಾ ನಿಯಂತ್ರಣವನ್ನು ಹೊಂದಿರುವ ಅಥವಾ ಅದಕ್ಕೆ ಜವಾಬ್ದಾರನಾದ ವ್ಯಕ್ತಿಯನ್ನು ಅವರ ಮುಂದೆ ಖುದ್ದಾಗಿ ಹಾಜರಾಗಲು ಬರಹದಲ್ಲಿ ಅಗತ್ಯಪಡಿಸಬಹುದು; ಮತ್ತು

(iii) ಹಾಗೆ ಹಾಜರಾಗುವ ಯಾವನೇ ವ್ಯಕ್ತಿಯನ್ನು, ಅಂಥ ದಸ್ತಾವೇಜಿಗೆ ಸಂಬಂಧಿಸಿದಂತೆ ಘೋಷಣೆಯನ್ನು ಮಾಡಲು ಮತ್ತು ಅದಕ್ಕೆ ರುಜು ಮಾಡಲು ಅಥವಾ ಯಾವುದೇ ಪ್ರಶ್ನೆಗೆ ಉತ್ತರ ಕೊಡಲು ಅಥವಾ ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ವಿವರ ಪತ್ರವನ್ನು ತಯಾರಿಸಲು ಮತ್ತು ಒದಗಿಸಲು ಅಗತ್ಯಪಡಿಸಬಹುದು.

(4) ಲೆಕ್ಕ ಪರಿಶೋಧಕರು–

(i) ರಾಜ್ಯ ಗ್ರಂಥಾಲಯ ಪ್ರಾಧಿಕಾರಿಗೆ ರಾಜ್ಯ ಗ್ರಂಥಾಲಯ ನಿಧಿಗೆ ಸಂಬಂಧಿಸಿದಂತೆ ಮತ್ತು ಸ್ಥಳೀಯ ಗ್ರಂಥಾಲಯದ ಪ್ರಾಧಿಕಾರಕ್ಕೆ ಸ್ಥಳೀಯ ಗ್ರಂಥಾಲಯದ ನಿಧಿಗೆ ಸಂಬಂಧಿಸಿದಂತೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ, ಬಾಕಿಯಾದ ಹಣಗಳ ವೆಚ್ಚ ಅಥವಾ ವಸೂಲಿಯಲ್ಲಿ ಅಥವಾ ಲೆಕ್ಕ ಪತ್ರಗಳಲ್ಲಿ ಅವರು ಕಾಣಬಹುದಾದಂಥ ಯಾವುದೇ ಮುಖ್ಯ ಅನುಚಿತತೆ ಅಥವಾ ಕ್ರಮ ದೋಷವನ್ನು ವರದಿ ಮಾಡತಕ್ಕದ್ದು;

(ii) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ ಅವರ ಲೆಕ್ಕ ಪರಿಶೋಧನೆಯ ಪ್ರಗತಿಗೆ ಸಂಬಂಧಿಸಿರುವ ಅದು ಅಗತ್ಯವೆಂದು ಭಾವಿಸಬಹುದಾದಂಥ ಮಾಹಿತಿಯನ್ನು ಒದಗಿಸತಕ್ಕದ್ದು;

(iii) ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ ನಷ್ಟ ಅಥವಾ ಪೋಲಿಗಾಗಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಜವಾಬ್ದಾರರಾದ ವ್ಯಕ್ತಿಗಳ ಹೆಸರುಗಳೊಂದಿಗೆ ನಿರ್ಲಕ್ಷ್ಯ ಅಥವಾ ದುರ್ನಡತೆಯಿಂದುಂಟಾದ ಸದರಿ ಪ್ರಾಧಿಕಾರಗಳ ಒಡೆತನದಲ್ಲಿರುವ ಅಥವಾ ಅವುಗಳಲ್ಲಿ ನಿಹಿತವಾಗಿರುವ ಹಣ ಅಥವಾ ಇತರ ಸ್ವತ್ತಿನ ಯಾವುದೇ ಅಂಥ ನಷ್ಟ ಅಥವಾ ಪೋಲನ್ನು ವರದಿ ಮಾಡತಕ್ಕದ್ದು; ಮತ್ತು

(iv) ಅನುಕ್ರಮವಾಗಿ ರಾಜ್ಯ ಗ್ರಂಥಾಲಯ ನಿಧಿ ಮತ್ತು ಸ್ಥಳೀಯ ಗ್ರಂಥಾಲಯ ನಿಧಿಯ ಬಗ್ಗೆ ರಾಜ್ಯ ಗ್ರಂಥಾಲಯ ಪ್ರಾಧಿಕಾರ ಮತ್ತು ನಗರ ಅಥವಾ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಕ್ಕೆ ಲೆಕ್ಕ ಪರಿಶೋಧನೆಯ ಅಂತಿಮ ವಿವರ ಪತ್ರವನ್ನು ಸಂಬಂಧಪಟ್ಟ ರಾಜ್ಯ ಗ್ರಂಥಪಾಲನಿಗೆ ಅದರ ಒಂದು ಪ್ರತಿಯನ್ನು ಹಣಕಾಸು ವರ್ಷವು ಮುಕ್ತಾಯವಾದಂದಿನಿಂದ ಮೂರು ತಿಂಗಳುಗಳ ಅವಧಿಯೊಳಗೆ ಅಥವಾ ಕಾಲಕಾಲಕ್ಕೆ ಸರ್ಕಾರವು ಅಧಿಸೂಚಿಸಬಹುದಾದಂಥ ಇತರ ಅವಧಿಯೊಳಗೆ ಒಪ್ಪಿಸತಕ್ಕದ್ದು.

(5) (i) ರಾಜ್ಯ ಗ್ರಂಥಪಾಲನು, ತಕ್ಷಣವೇ ರಾಜ್ಯ ಗ್ರಂಥಾಲಯ ನಿಧಿಯ ಲೆಕ್ಕ ಪತ್ರಗಳ ಲೆಕ್ಕ ಪರಿಶೋಧಕರು ತೋರಿಸಬಹುದಾದ ಯಾವುವೇ ನ್ಯೂನತೆಗಳು ಅಥವಾ ಕ್ರಮದೋಷಗಳನ್ನು ಪರಿಹರಿಸತಕ್ಕದ್ದು ಮತ್ತು ಅದನ್ನು ಸರ್ಕಾರಕ್ಕೆ ವರದಿ ಮಾಡತಕ್ಕದ್ದು;

(ii) ಸಂಬಂಧಪಟ್ಟ ಮುಖ್ಯ ಗ್ರಂಥಪಾಲನು, ತಕ್ಷಣವೇ, ಲೆಕ್ಕ ಪರಿಶೋಧಕರು ತೋರಿಸಬಹುದಾದ ಯಾವುವೇ ನ್ಯೂನತೆಗಳು ಅಥವಾ ಅಕ್ರಮಗಳನ್ನು ಪರಿಹರಿಸತಕ್ಕುದು ಮತ್ತು ಅದನ್ನು ರಾಜ್ಯ ಗ್ರಂಥಪಾಲನಿಗೆ ಮತ್ತು ಸರ್ಕಾರಕ್ಕೆ ವರದಿ ಮಾಡತಕ್ಕದ್ದು; ಮತ್ತು

(iii) ರಾಜ್ಯ ಗ್ರಂಥಪಾಲನು, 5(ii)ನೇ ಉಪ ನಿಯಮದಲ್ಲಿ, ಉಲ್ಲೇಖಿಸಲಾದ ವರದಿಗಳನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಲೆಕ್ಕ ಪರಿಶೋಧನೆಯಲ್ಲಿ ಕ್ರಮ ದೋಷಗಳು ಮತ್ತು ವಿಶೇಷ ವೈಶಿಷ್ಟ್ಯಗಳು ಯಾವುವನ್ನಾದರೂ ಗಮನಿಸಿದ್ದರೆ, ಅವುಗಳನ್ನು ವಿಶೇಷವಾಗಿ ಉಲ್ಲೇಖಿಸಿ ವರದಿಗಳ ಕ್ರೋಢೀಕೃತ ಪುನರವಲೋಕನವನ್ನು ಅದರ ಮಾಹಿತಿಗಾಗಿ ಸರ್ಕಾರಕ್ಕೆ ಒಪ್ಪಿಸತಕ್ಕದ್ದು.

(6) ಲೆಕ್ಕ ಪರಿಶೋಧಕರು, ಕಾನೂನಿಗೆ ತದ್ವಿರುದ್ಧವಾದ ಪ್ರತಿಯೊಂದು ಬಾಬನ್ನು, ಮಂಜೂರು ಮಾಡಬಹುದು ಮತ್ತು ಕಾನೂನು ಬಾಹಿರ ಸಂದಾಯವನ್ನು ಮಾಡುವ ಅಥವಾ ಅದನ್ನು ಮಾಡಲು

ಅಧಿಕೃತಗೊಳಿಸುವ ವ್ಯಕ್ತಿಯ ಮೇಲೆ ಅದನ್ನು ಅಧಿಭಾರ ಹೊರಿಸಬಹುದು ಮತ್ತು ಆ ವ್ಯಕ್ತಿಯ ನಿರ್ಲಕ್ಷ್ಯತೆ ಅಥವಾ ದುರ್ನಡತೆಯಿಂದಾಗಿ ವಹಿಸಿದ ಯಾವುದೇ ಕೊರತೆಯ ಮೊಬಲಗು, ಲಾಭದಾಯಕವಲ್ಲದ ವೆಚ್ಚದ ನಷ್ಟಕ್ಕಾಗಿ ಅಥವಾ ಆ ವ್ಯಕ್ತಿಯು ಲೆಕ್ಕಕ್ಕೆ ತರಬೇಕಾಗಿದ್ದಂಥ ಆದರೆ ತರದೆ ಇರುವ ಯಾವುದೇ ಮೊತ್ತಕ್ಕಾಗಿ ಜವಾಬ್ದಾರನಾದ ಯಾವನೇ ವ್ಯಕ್ತಿಗೆ ಅದನ್ನು ವಿಧಿಸಬಹುದು ಮತ್ತು ಅಂಥ ಪ್ರತಿಯೊಂದು ಪ್ರಕರಣದಲ್ಲಿ ಅಂಥ ವ್ಯಕ್ತಿಗಳಿಂದ ಬಾಕಿಯಾದ ಮೊಬಲಗನ್ನು ಪ್ರಮಾಣೀಕರಿಸತಕ್ಕದ್ದು.

(7) ಲೆಕ್ಕ ಪರಿಶೋಧಕರು, ಪ್ರತಿಯೊಂದು ನಾಮಂಜೂರಾತಿ, ಅಧಿಭಾರ ಹೊರಿಸುವುದು ಅಥವಾ ವಿಧಿಸುವುದಕ್ಕೆ ಸಂಬಂಧಿಸಿದಂತೆ ಅವರ ತೀರ್ಮಾನಕ್ಕಾಗಿನ ಕಾರಣವನ್ನು ಬರಹದಲ್ಲಿ ತಿಳಿಸತಕ್ಕದ್ದು.

(8) ಈ ಅಧಿನಿಯಮದ ಮೇರೆಗೆ ಲೆಕ್ಕಪರಿಶೋಧಕರು ಯಾವನೇ ವ್ಯಕ್ತಿಯಿಂದ ಬಾಕಿಯಿರುವುದಾಗಿ ಪ್ರಮಾಣೀಕರಿಸಿದ ಪ್ರತಿಯೊಂದು ಮೊತ್ತವನ್ನು ಅಂಥ ವ್ಯಕ್ತಿಯು ಸಂದರ್ಭಾನುಸಾರ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಕಾರ್ಯದರ್ಶಿಯು, ಲೆಕ್ಕ ಪರಿಶೋಧಕರ ತೀರ್ಮಾನವನ್ನು ಅಂಥ ವ್ಯಕ್ತಿಗೆ ತಿಳಿಸಿದ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗೆ, ಅವನು ಆ ತೀರ್ಮಾನದ ವಿರುದ್ಧ ಸರ್ಕಾರಕ್ಕೆ ಆ ಅವಧಿಯೊಳಗೆ ಅಪೀಲನ್ನು ಮಾಡಿಕೊಂಡಿದ್ದ ಹೊರತು, ಸಂದಾಯ ಮಾಡತಕ್ಕದ್ದು ಮತ್ತು ಅಂಥ ಮೊತ್ತವನ್ನು ಹಾಗೆ ಸಂದಾಯ ಮಾಡದಿದ್ದರೆ ಅಥವಾ ಅಪೀಲನ್ನು ಮಾಡಿಕೊಂಡ ಮೇಲೆ ಸರ್ಕಾರವು ಬಾಕಿಯಿರುವುದಾಗಿ ಘೋಷಿಸಿದಂಥ ಮೊತ್ತವನ್ನು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ವಸೂಲು ಮಾಡತಕ್ಕದ್ದು.

**23. ವಾರ್ಷಿಕ ವರದಿಯಲ್ಲಿ ಸೇರಿಸಬೇಕಾದ ಮಾಹಿತಿ ಮತ್ತು ವಿವರಗಳು.–** (1) ಆ ವರ್ಷದಲ್ಲಿ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಮಾಡಿರುವ ಪ್ರಗತಿಗೆ ಸಂಬಂಧಪಟ್ಟ 40ನೇ ಪ್ರಕರಣದ (1)ನೇ ಉಪ ಪ್ರಕರಣದ ಮೇರೆಗೆ ರಾಜ್ಯ ಗ್ರಂಥಪಾಲನು, ತಯಾರಿಸಬೇಕಾದ ವಾರ್ಷಿಕ ವರದಿಯು ಈ ಕೆಳಕಂಡ ಮಾಹಿತಿ ಮತ್ತು ವಿವರಗಳನ್ನು ಒದಗಿಸತಕ್ಕದ್ದು, ಎಂದರೆ:–

**ವಾರ್ಷಿಕ ವರದಿ**

**1. ಸಿಬ್ಬಂದಿ.–**

(ಕ) ವೃತ್ತೀಯ ಸಿಬ್ಬಂದಿ

(ಖ) ಅರೆ ವೃತ್ತೀಯ ಸಿಬ್ಬಂದಿ

(ಗ) IVನೇ ದರ್ಜೆ ಸಿಬ್ಬಂದಿ

2. ಹಣಕಾಸು.–

(ಕ) ಆದಾಯ.–

(i) ಅನುದಾನಗಳು

(ii) ದೇಣಿಗೆಗಳು

(ಖ) ವೆಚ್ಚಗಳು.–

(i) ಆವರ್ತಕ

(ii) ಅನಾವರ್ತಕ

3. ಬಜೆಟ್

4. ಕಟ್ಟಡ

5. ಪುಸ್ತಕಗಳ ಸಂಗ್ರಹಣೆ -------- ವರ್ಷದ ಪ್ರಾರಂಭದಲ್ಲಿ ಇದ್ದಂತೆ -------- ರೂಪಾಯಿಗಳ ಖರ್ಚಿನಲ್ಲಿ ಆ ವರ್ಷದಲ್ಲಿ ಸೇರಿಸಲಾದ ಪುಸ್ತಕಗಳ ಸಂಗ್ರಹಣೆ.

6. ಅಂಕಿ ಅಂಶಗಳು,–

(ಕ) ಆ ವರ್ಷದ ಪ್ರಾರಂಭದಲ್ಲಿ ಇದ್ದಂತೆ ಸದಸ್ಯರು.

(ಖ) ವರದಿಗೆ ಸಂಬಂಧಿಸಿದ ಆ ವರ್ಷದಲ್ಲಿ ಪಟ್ಟಿಗೆ ಸೇರಿಸಲಾದಂತೆ ಸದಸ್ಯರು.

7. ಪರಿಚಲನೆ.–

(ಕ) ಮನೆಗೆ ತೆಗೆದುಕೊಂಡು ಹೋಗಲು ಕೊಟ್ಟ ಪುಸ್ತಕಗಳು.

(ಖ) ಗ್ರಂಥಾಲಯದ ಆವರಣದ ಒಳಗೆ ನೋಡಿದ ಪುಸ್ತಕಗಳು.

8. ------------- ರೂಪಾಯಿಗಳ ಖರ್ಚಿನಲ್ಲಿ ಚಂದಾ ಮೂಲಕ ತರಿಸಿಕೊಂಡ ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕಗಳು.

9. ಬೈಂಡಿಂಗ್.

10. ದಾಸ್ತಾನು ತೆಗೆದುಕೊಳ್ಳುವುದು.

11. ಸಾಮಾನ್ಯ.

12. ಸೂಚನೆಗಳು.

(2) ಆ ವರ್ಷದಲ್ಲಿ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಚಟುವಟಿಕೆಗಳಿಗೆ ಸಂಬಂಧಪಟ್ಟಂತೆ 40ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ರಾಜ್ಯ ಗ್ರಂಥಪಾಲನು ತಯಾರಿಸಬೇಕಾದ ವಾರ್ಷಿಕ ವರದಿಯು ಈ ಕೆಳಕಂಡ ಮಾಹಿತಿ ಮತ್ತು ವಿವರಗಳನ್ನು ಒಳಗೊಂಡಿರತಕ್ಕದ್ದು.–

1. ಸಿಬ್ಬಂದಿ.–

(ಕ) ವೃತ್ತಿಯ ಸಿಬ್ಬಂದಿ.

(ಖ) ಅರೆ ವೃತ್ತಿಯ ಸಿಬ್ಬಂದಿ.

(ಗ) IV ನೇ ದರ್ಜೆ ಸಿಬ್ಬಂದಿ.

2. ಹಣಕಾಸು.–

(ಕ) ಆದಾಯ.

(i) ಅನುದಾನಗಳು.

(ii) ದೇಣಿಗೆಗಳು.

(ಖ) ವೆಚ್ಚ.–

(i) ಆವರ್ತಕ.

(ii) ಅನಾವರ್ತಕ.

3. ಬಜೆಟ್.

4. ಕಟ್ಟಡ.

5. ಪುಸ್ತಕಗಳ ಸಂಗ್ರಹಣೆ --------- ವರ್ಷದ ಪ್ರಾರಂಭದಲ್ಲಿ ಇದ್ದಂತೆ --------- ರೂಪಾಯಿಗಳ ಖರ್ಚಿನಲ್ಲಿ ಆ ವರ್ಷದಲ್ಲಿ ಸೇರಿಸಲಾದ ಪುಸ್ತಕಗಳ ಸಂಗ್ರಹಣೆ.

6. ಅಂಕಿ ಅಂಶಗಳು.

(ಕ) ಆ ವರ್ಷದ ಪ್ರಾರಂಭದಲ್ಲಿದ್ದಂಥ ಸದಸ್ಯರು.

(ಖ) ವರದಿಗೆ ಸಂಬಂಧಿಸಿದ ವರ್ಷದಲ್ಲಿ ಪಟ್ಟಿಯಲ್ಲಿ ಸೇರಿಸಿಕೊಂಡಂತೆ ಸದಸ್ಯರು.

7. ಪರಿಚಲನೆ.–

(ಕ) ಮನೆಗೆ ತೆಗೆದುಕೊಂಡು ಹೋಗಲು ಕೊಟ್ಟ ಪುಸ್ತಕಗಳು.

(ಖ) ಗ್ರಂಥಾಲಯದ ಆವರಣದಲ್ಲಿ ನೋಡಲು ಕೊಟ್ಟ ಪುಸ್ತಕಗಳು.

8. ---------------- ರೂಪಾಯಿಗಳ ಖರ್ಚಿನಲ್ಲಿ ಚಂದಾ ಮೂಲಕ ತರಿಸಿಕೊಂಡ ವೃತ್ತ ಪತ್ರಿಕೆಗಳು ಮತ್ತು ನಿಯತಕಾಲಿಕಗಳು.

9. ಬೈಂಡಿಂಗ್.

10. ದಾಸ್ತಾನು ತೆಗೆದುಕೊಳ್ಳುವುದು.

11. ಸಾಮಾನ್ಯ.

12. ಸೂಚನೆಗಳು.

## ಅಧ್ಯಾಯ – VIII

## ನೆರವು ಪಡೆದ ಗ್ರಂಥಾಲಯಗಳು

**24. ನೆರವು ಪಡೆದ ಗ್ರಂಥಾಲಯಗಳು ಪೂರೈಸಬೇಕಾದ ಷರತ್ತುಗಳು.–** ಯಾವುದೇ ಗ್ರಂಥಾಲಯವು, ಅದು ಅನುಬಂಧ–IIIರಲ್ಲಿ ವಿಧಿಸಲಾಗಿರುವ ಅರ್ಹತಾ ಷರತ್ತುಗಳನ್ನು ಪೂರೈಸಿದ ಮತ್ತು ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯು ಗ್ರಂಥಾಲಯವನ್ನು ಇಟ್ಟುಕೊಂಡು ಬರುವುದಕ್ಕೆ ಸಂಬಂಧಪಟ್ಟಂಥ ವಿಧಿಸಬಹುದಾದಂಥ ಕನಿಷ್ಟ ಗುಣಮಟ್ಟಗಳನ್ನು ಇಟ್ಟುಕೊಂಡು ಬಂದಿದ್ದ ಹೊರತು ನೆರವು ಪಡೆಯಲು ಅರ್ಹವಾಗಿರತಕ್ಕದ್ದಲ್ಲ.

## ಅಧ್ಯಾಯ–IX

## ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು

**25. ಗ್ರಂಥಾಲಯಗಳ ಮತ್ತು ಗ್ರಂಥಪಾಲರ ರಾಜ್ಯ ರಿಜಿಸ್ಟರುಗಳನ್ನು ಇಟ್ಟುಕೊಂಡು ಬರುವುದು.–** (1) ರಾಜ್ಯ ಗ್ರಂಥಪಾಲನು ರಾಜ್ಯದಲ್ಲಿನ ಎಲ್ಲ ಸಾರ್ವಜನಿಕ ಗ್ರಂಥಾಲಯಗಳ ಒಂದು ರಿಜಿಸ್ಟರನ್ನು ಮತ್ತು ಅಂತಹ ಸಾರ್ವಜನಿಕ ಗ್ರಂಥಾಲಯಗಳ ಗ್ರಂಥಪಾಲರ ಒಂದು ರಿಜಿಸ್ಟರನ್ನು ಸಹ ಇಟ್ಟುಕೊಂಡು ಬರತಕ್ಕದ್ದು.

(2) ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಿಗಳು ಅವರ ಅಧಿಕಾರ ವ್ಯಾಪ್ತಿಯೊಳಗೆ ಇರುವ ಎಲ್ಲ ಸಾರ್ವಜನಿಕ ಗ್ರಂಥಾಲಯಗಳ ಒಂದು ರಿಜಿಸ್ಟರನ್ನು ಮತ್ತು ಅಂತಹ ಗ್ರಂಥಾಲಯಗಳ ಗ್ರಂಥಪಾಲರ ಒಂದು ರಿಜಿಸ್ಟರನ್ನು ಸಹ ಇಟ್ಟುಕೊಂಡು ಬರತಕ್ಕದ್ದು.

(3) ಪ್ರತಿಯೊಂದು ಸಾರ್ವಜನಿಕ ಗ್ರಂಥಾಲಯದ ಕಾರ್ಯದರ್ಶಿಯು, ಅಂತಹ ಗ್ರಂಥಾಲಯವು ಯಾರ ಅಧಿಕಾರ ವ್ಯಾಪ್ತಿಯಲ್ಲಿ ಇರುವುದೋ ಆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ, ಆ ಗ್ರಂಥಾಲಯದ ಹೆಸರನ್ನು ಮತ್ತು ಅಂತಹ ಗ್ರಂಥಾಲಯದ ಆಡಳಿತ ಮಂಡಲಿಯ ಸದಸ್ಯರ ಹೆಸರುಗಳು ಮತ್ತು ವಿಳಾಸಗಳನ್ನು, ಅಂತಹ ಗ್ರಂಥಾಲಯದ ಗ್ರಂಥಪಾಲನ ಹೆಸರು ಮತ್ತು ಅರ್ಹತೆಯನ್ನು ತೋರಿಸುವ ಒಂದು ವಿವರ ಪತ್ರವನ್ನು ಕಳುಹಿಸಿ ಕೊಡತಕ್ಕದ್ದು ಮತ್ತು ಅಂಥ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಮುಖ್ಯ ಗ್ರಂಥಪಾಲನಿಗೆ ಆಡಳಿತ ಮಂಡಲಿಯ ಸಿಬ್ಬಂದಿಯಲ್ಲಿನ ಅಥವಾ ಗ್ರಂಥಪಾಲನ ಬದಲಾವಣೆಯನ್ನು ಅವರ ವಿಳಾಸದೊಂದಿಗೆ ಸಹ ವರದಿ ಮಾಡತಕ್ಕದ್ದು.

## ಅಧ್ಯಾಯ–X

## ಗ್ರಂಥಾಲಯಗಳ ಪ್ರಾಧಿಕಾರಗಳಿಂದ ಸಮಿತಿಯ ರಚನೆ

**26. ರಾಜ್ಯ ಗ್ರಂಥಾಲಯ ಪ್ರಾಧಿಕಾರದಿಂದ ಸಮಿತಿಗಳ ರಚನೆ.–** ರಾಜ್ಯ ಗ್ರಂಥಾಲಯ ಪ್ರಾಧಿಕಾರವು, ಈ ಬಗ್ಗೆ ಅಂಗೀಕರಿಸಿದ ಒಂದು ನಿರ್ಣಯದ ಮೂಲಕ, ಅದರ ಸದಸ್ಯರಿಂದ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಅದಕ್ಕೆ ಸಹಾಯ ಮಾಡುವ ಉದ್ದೇಶಗಳಿಗಾಗಿ ಅದು ಸೂಕ್ತವೆಂದು ಯೋಚಿಸುವಂಥ ಸಂಖ್ಯೆಯ ಸದಸ್ಯರನ್ನೊಳಗೊಂಡ ಅಂಥ ಸಂಖ್ಯೆಯ ಸಮಿತಿಗಳನ್ನು ರಚಿಸಬಹುದು.

**27. ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಗಳಿಂದ ಸಮಿತಿಗಳ ರಚನೆ.–** (1) ಪ್ರತಿಯೊಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಕಾರ್ಯನಿರ್ವಾಹಕ ಸಮಿತಿ ಮತ್ತು ಹಣಕಾಸು ಸಮಿತಿ ಮತ್ತು ಸದಸ್ಯರಿಂದ ಚುನಾವಣೆಯ ಮೂಲಕ ರಚಿಸಬೇಕಾಗಿರುವಂಥ ಸ್ಥಳೀಯ ಪ್ರಾಧಿಕಾರದ ಅಂತಹ ಇತರ ಸಮಿತಿಗಳಿಗೆ ಸದಸ್ಯರ ಚುನಾವಣೆಯನ್ನು ಅಂತಹ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸಭೆಯಲ್ಲಿ ನಡೆಸತಕ್ಕದ್ದು.

(2) ಅಂತಹ ಸಮಿತಿಗಳಿಗೆ ಚುನಾವಣೆಯ ದಿನಾಂಕಕ್ಕೆ ಮುಂಚೆ ಪೂರ್ಣ ಐದು ದಿವಸಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಪ್ರಾಧಿಕಾರದ ಸದಸ್ಯರಿಗೆ ಕೊಡತಕ್ಕದ್ದು.

(3) ಚುನಾವಣೆಗಾಗಿ ನಿಲ್ಲಲು ಉದ್ದೇಶಿಸಿರುವ ವ್ಯಕ್ತಿಗಳ ಹೆಸರುಗಳನ್ನು ಸ್ವತಃ ಅಭ್ಯರ್ಥಿಯನ್ನು ಹೊರತುಪಡಿಸಿ ಪ್ರಾಧಿಕಾರದ ಸದಸ್ಯನು ಆ ಸಭೆಯಲ್ಲಿ ಕ್ರಮಬದ್ಧವಾಗಿ ಸೂಚಿಸತಕ್ಕುದು ಮತ್ತು ಸೂಚಕನನ್ನು ಹೊರತುಪಡಿಸಿ ಯಾವನೇ ಇತರ ಸದಸ್ಯನು ಅವನನ್ನು ಅನುಮೋದಿಸತಕ್ಕದ್ದು.

(4) ಸೂಚಿಸಲಾಗಿರುವ ಮತ್ತು ಅನುಮೋದಿಸಲಾಗಿರುವ ಅಭ್ಯರ್ಥಿಯು ಅವನ ಅಭ್ಯರ್ಥಿಕೆಯನ್ನು ಆ ಸಭೆಯಲ್ಲಿ ಆ ಬಗ್ಗೆ ಹೇಳಿಕೆಯನ್ನು ಕೊಡುವ ಮೂಲಕ ವಾಪಸ್ಸು ತೆಗೆದುಕೊಳ್ಳಬಹುದು. ಸೂಚಿಸಲಾಗಿರುವ ಮತ್ತು ಅನುಮೋದಿಸಲಾಗಿರುವ ಮತ್ತು ಅವರ ಅಭ್ಯರ್ಥಿಕೆಯನ್ನು ವಾಪಸ್ಸು ಪಡೆಯದೇ ಇರುವ ಎಲ್ಲ ಅಭ್ಯರ್ಥಿಗಳ ಹೆಸರುಗಳನ್ನು ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಓದಿ ಹೇಳತಕ್ಕದ್ದು.

(5) ಹಾಗೆ ಓದಿ ಹೇಳಲಾದ ಅಭ್ಯರ್ಥಿಗಳ ಹೆಸರುಗಳ ಸಂಖ್ಯೆಯು ಚುನಾಯಿಸಬೇಕಾದ ವ್ಯಕ್ತಿಗಳ ಸಂಖ್ಯೆಗೆ ಸಮನಾಗಿದ್ದರೆ ಅಧ್ಯಕ್ಷತೆ ವಹಿಸುವ ವ್ಯಕ್ತಿಯು ಎಲ್ಲ ಅಂತಹ ಅಭ್ಯರ್ಥಿಗಳನ್ನು ಕ್ರಮಬದ್ಧವಾಗಿ ಚುನಾಯಿಸಲಾಗಿದೆ ಎಂದು ಘೋಷಿಸತಕ್ಕದ್ದು.

(6) ಅಂತಹ ಅಭ್ಯರ್ಥಿಗಳ ಸಂಖ್ಯೆಯು ಚುನಾಯಿತರಾಗಬೇಕಾಗಿರುವ ವ್ಯಕ್ತಿಗಳ ಸಂಖ್ಯೆಗಿಂತ ಕಡಿಮೆಯಿದ್ದರೆ ಅಧ್ಯಕ್ಷತೆ ವಹಿಸುವ ವ್ಯಕ್ತಿಯು, ಎಲ್ಲ ಅಂತಹ ಅಭ್ಯರ್ಥಿಗಳನ್ನು ಕ್ರಮಬದ್ಧವಾಗಿ ಚುನಾಯಿಸಲಾಗಿದೆ ಎಂದು ಘೋಷಿಸತಕ್ಕದ್ದು ಮತ್ತು ಹೊಸ ನಾಮಪತ್ರಗಳನ್ನು ಕರೆಯತಕ್ಕುದು ಅಥವಾ ಉಳಿದಿರುವ ಖಾಲಿ ಸ್ಥಾನಗಳನ್ನು ಭರ್ತಿ ಮಾಡಲು ಪ್ರಾಧಿಕಾರದ ಮುಂದಿನ ಸಭೆಗೆ ಚುನಾವಣೆಯನ್ನು ಮುಂದೂಡತಕ್ಕದ್ದು.

(7) ಅಭ್ಯರ್ಥಿಗಳ ಸಂಖ್ಯೆಯು ಚುನಾವಣೆಯಾಗಬೇಕಾಗಿರುವ ವ್ಯಕ್ತಿಗಳ ಸಂಖ್ಯೆಯನ್ನು ಮೀರಿದರೆ, ಸಭೆಯಲ್ಲಿ ಹಾಜರಿರುವ ಸದಸ್ಯರ ಮತಗಳನ್ನು ಮತಪತ್ರದ ಮೂಲಕ ತೆಗೆದುಕೊಳ್ಳತಕ್ಕದ್ದು.

(8) ಮತ ಚಲಾಯಿಸಲು ಇಚ್ಛಿಸುವ ಪ್ರತಿಯೊಬ್ಬ ಸದಸ್ಯನಿಗೆ ಒಂದು ಮತ ನೀಡುವ ಪತ್ರವನ್ನು ಒದಗಿಸತಕ್ಕದ್ದು, ಅದರ ಮೇಲೆ ಎಲ್ಲ ವ್ಯಕ್ತಿಗಳ ಹೆಸರುಗಳನ್ನು ಈ ಕೆಳಕಂಡ ರೀತಿಯಲ್ಲಿ ಅಕ್ಷರಾನುಕ್ರಮವಾಗಿ ಬೆರಳಚ್ಚು ಮಾಡಿರಬೇಕು ಅಥವಾ ಮುದ್ರಿಸಿರತಕ್ಕದ್ದು ಅಥವಾ ಸೈಕ್ಲೋಸ್ಟೈಲ್ ಮಾಡಿರತಕ್ಕದ್ದು, ಎಂದರೆ:–

| | **ಹೆಸರು** | **ಮತ** |
|---|---|---|
| 1) | ------------------ | ---------------- |
| 2) | ------------------ | ---------------- |
| 3) | ------------------ | ---------------- |

ಆ ತರುವಾಯ ಪ್ರತಿಯೊಬ್ಬ ಸದಸ್ಯನು, ಆ ಉದ್ದೇಶಕ್ಕಾಗಿ ಪ್ರತ್ಯೇಕವಾಗಿಟ್ಟಿರುವ ಸ್ಥಳಕ್ಕೆ ಹೋಗತಕ್ಕುದು ಮತ್ತು ಅವನು ಮತ ನೀಡಲು ಇಚ್ಛಿಸುವ ಅಭ್ಯರ್ಥಿಯ ಹೆಸರು ಅಥವಾ ಅಭ್ಯರ್ಥಿಗಳ ಹೆಸರುಗಳ ಮೇಲೆ ಕತ್ತರಿ ಗುರುತನ್ನು ಹಾಕತಕ್ಕದ್ದು. ಆ ತರುವಾಯ ಅವನು ಮತಪತ್ರವನ್ನು ಅವನ ಮತವನ್ನು ಮರೆ ಮಾಡುವ ಹಾಗೆ ಮಾಡಿಸತಕ್ಕದ್ದು ಮತ್ತು ಅದನ್ನು ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿರುವ ವ್ಯಕ್ತಿಗೆ ಕಾಣಿಸುವ ರೀತಿಯಲ್ಲಿ ಇಡಲಾದ ಮತಪೆಟ್ಟಿಗೆಯಲ್ಲಿ ಹಾಕತಕ್ಕದ್ದು. ಆ ಮತ ಪೆಟ್ಟಿಗೆಯನ್ನು ಅದರಲ್ಲಿ ಮತಪತ್ರವನ್ನು ಹಾಕುವ ಹಾಗೆ ಆದರೆ ಆ ಪೆಟ್ಟಿಗೆಯನ್ನು ತೆಗೆಯದೆ ಅದರಿಂದ ಅದನ್ನು ಹೊರಕ್ಕೆ ತೆಗೆಯಲಾಗದ ಹಾಗೆ ರಚಿಸಿರತಕ್ಕದ್ದು. ಆ ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸುವ ವ್ಯಕ್ತಿಯು ಆ ಪೆಟ್ಟಿಗೆಯನ್ನು ಆ ತರುವಾಯ ಇಬ್ಬರು ಸದಸ್ಯರ (ಅಭ್ಯರ್ಥಿಗಳನ್ನು ಹೊರತುಪಡಿಸಿ) ಸಮಕ್ಷಮದಲ್ಲಿ ತೆಗೆಯತಕ್ಕುದು ಮತ್ತು ಮತಗಳನ್ನು ಎಣಿಸತಕ್ಕದ್ದು. ಆ ಇಬ್ಬರು ಸದಸ್ಯರನ್ನು ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಮತ ಗಣಕರೆಂದು ನಾಮನಿರ್ದೇಶನ ಮಾಡತಕ್ಕದ್ದು.

**28. ಚುನಾವಣೆಯ ಫಲಿತಾಂಶದ ಘೋಷಣೆ.–** ಅತ್ಯಂತ ಹೆಚ್ಚಿನ ಸಂಖ್ಯೆಯ ಮತಗಳನ್ನು ಪಡೆಯುವ ಅಭ್ಯರ್ಥಿಯನ್ನು ಅಥವಾ ಒಂದಕ್ಕಿಂತ ಹೆಚ್ಚು ಖಾಲಿ ಸ್ಥಾನಗಳಿದ್ದರೆ, ಭರ್ತಿ ಮಾಡಬೇಕಾಗಿರುವ ಖಾಲಿ ಸ್ಥಾನಗಳಿಗೆ ತಕ್ಕಂತೆ ಅತ್ಯಧಿಕ ಮತಗಳನ್ನು ಎಷ್ಟು ಅಭ್ಯರ್ಥಿಗಳು ಪಡೆದಿರುವರೋ, ಅಷ್ಟು ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿರುವುದಾಗಿ ಘೋಷಿಸತಕ್ಕದ್ದು. ಯಾರೇ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳ ನಡುವೆ ಸಮಾನ ಮತಗಳು ಬಂದಿದ್ದರೆ ಮತ್ತು ಅಂಥ ಅಭ್ಯರ್ಥಿಗಳಲ್ಲಿ ಯಾವನೇ ಒಬ್ಬ ಅಥವಾ ಹೆಚ್ಚು ಅಭ್ಯರ್ಥಿಗಳಿಗೆ ಒಂದು ಮತವನ್ನು ಸೇರಿಸುವುದರಿಂದ ಅವನು ಅಥವಾ ಅವರು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿತರಾಗಲು ಹಕ್ಕುಳ್ಳವರನ್ನಾಗಿಸಿದರೆ ಆ ಸಭೆಯಲ್ಲಿ ಅಧ್ಯಕ್ಷತೆ ವಹಿಸಿರುವ ವ್ಯಕ್ತಿಯು ಸದಸ್ಯರ ಸಮಕ್ಷಮದಲ್ಲಿ ಚೀಟಿ ಎತ್ತುವ ಮೂಲಕ ಅಂಥ ಅಭ್ಯರ್ಥಿಗಳಲ್ಲಿ ಒಬ್ಬ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳಿಗೆ ಅಂಥ ಹೆಚ್ಚಿನ ಮತವನ್ನು ಕೊಟ್ಟಿರುವುದಾಗಿ ಭಾವಿಸತಕ್ಕಂಥವನ ಬಗ್ಗೆ ತೀರ್ಮಾನಿಸತಕ್ಕದ್ದು.

**29. ಮತಗಳ ಸಿಂಧುತ್ವ.–** ಮತ ಚಲಾಯಿಸುವ ಯಾವನೇ ಸದಸ್ಯನ ರುಜು ಅಥವಾ ಬರಹವನ್ನು ಒಳಗೊಂಡಿರುವಂಥ ಅಥವಾ ಅದರ ಮೇಲೆ ಭರ್ತಿ ಮಾಡಬೇಕಾಗಿರುವ ಖಾಲಿ ಸ್ಥಾನಗಳು ಇರುವುದಕ್ಕಿಂತ ಹೆಚ್ಚು ಅಭ್ಯರ್ಥಿಗಳ ಮುಂದೆ ಗುರುತನ್ನು ಹಾಕಲಾಗಿರುವಂಥ ಯಾವುದೇ ಮತಪತ್ರವು ಅಸಿಂಧುವಾಗಿರತಕ್ಕುದು.

## ಅಧ್ಯಾಯ–IX

## ಗ್ರಂಥಾಲಯ ಪ್ರಾಧಿಕಾರಿಗಳು ಮಾಡಿಕೊಳ್ಳಬೇಕಾದ ಕರಾರುಗಳ ಬಗ್ಗೆ ಪರಿಬಂಧಗಳು

**30. ಗ್ರಂಥಾಲಯ ಪ್ರಾಧಿಕಾರಿಗಳು ಮಾಡಿಕೊಳ್ಳಬೇಕಾದ ಕರಾರುಗಳ ಬಗ್ಗೆ ಪರಿಬಂಧಗಳು.–** (1) ಯಾವುದೇ ಗ್ರಂಥಾಲಯ ಪ್ರಾಧಿಕಾರದಿಂದ ಅದರ ಮೌಲ್ಯ ಏನೇ ಆಗಿರಬಹುದಾಗಿದ್ದರೂ, ಯಾವುದೇ ಸ್ಥಿರ ಸ್ವತ್ತಿನ ಉಚಿತ ಕೊಡುಗೆ, ನಿಗದಿತ ಕನಿಷ್ಠ ಬೆಲೆಗಾಗಿನ ಯಾವುದೇ ಕೊಡುಗೆ ಮತ್ತು ಐದು ವರ್ಷಗಳನ್ನು ಮೀರುವ

ಅವಧಿಗಾಗಿನ ಯಾವುದೇ ಗೇಣಿ ಮತ್ತು ಸ್ಥಿರ ಸ್ವತ್ತಿನ ಯಾವುದೇ ಮಾರಾಟ ಅಥವಾ ಇತರ ವರ್ಗಾವಣೆಯು ಸರ್ಕಾರದ ಪೂರ್ವ ಮಂಜೂರಾತಿಯನ್ನು ಪಡೆದಿದ್ದ ಹೊರತು ಸಿಂಧುವಾಗತಕ್ಕದ್ದಲ್ಲ.

(2) (ಕ) ಒಂದು ವರ್ಷ ಮೀರುವ ಅವಧಿಗಾಗಿನ ಗೇಣಿ ಅಥವಾ ಯಾವುದೇ ಸ್ಥಿರ ಸ್ವತ್ತಿನ ಮಾರಾಟ ಅಥವಾ ಇತರ ವರ್ಗಾವಣೆ ಅಥವಾ ಖರೀದಿಗಾಗಿನ ಕರಾರಿನ;

(ಖ) ಬಜೆಟ್ ಮಂಜೂರಾತಿಯ ಮೂಲಕ ಒಳಗೊಂಡಿರದ ವೆಚ್ಚವನ್ನು ಒಳಗೊಳ್ಳುವಂಥ ಪ್ರತಿಯೊಂದು ಕರಾರಿನ; ಮತ್ತು

(ಗ) ಯಾವ ಕರಾರಿನ ನೆರವೇರಿಕೆಯನ್ನು ಕರಾರಿನ ದಿನಾಂಕದಂದು ಚಾಲ್ತಿಯಲ್ಲಿರುವ ಸರ್ಕಾರಿ ವರ್ಷದೊಳಗೆ ಪೂರ್ಣಗೊಳಿಸಲಾಗುವುದಿಲ್ಲವೋ ಆ ಪ್ರತಿಯೊಂದು ಕರಾರಿನ ಸಂದರ್ಭದಲ್ಲಿ ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿದ ನಿರ್ಣಯದ ಮೂಲಕ ಗ್ರಂಥಾಲಯ ಪ್ರಾಧಿಕಾರದ ಮಂಜೂರಾತಿಯು ಅಗತ್ಯವಾಗಿರತಕ್ಕದ್ದು.

(3) ಪ್ರಾಧಿಕಾರಕ್ಕೆ ಸೇರಿದ ಚರ ಸ್ವತ್ತಿನ ಖರೀದಿಗಾಗಿನ ಯಾವುದೇ ಸ್ಥಿರ ಸ್ವತ್ತಿನ ಮಾರಾಟಕ್ಕಾಗಿನ ಕರಾರಿನ ಸಂದರ್ಭದಲ್ಲಿ, ಖರೀದಿಯಿಂದ ಉಂಟಾಗಬಹುದಾದಂಥ ವೆಚ್ಚವು ಅಥವಾ ಯಾವುದೇ ಗ್ರಂಥಾಲಯ ಪ್ರಾಧಿಕಾರದ ಲೆಕ್ಕಪತ್ರಗಳಲ್ಲಿ ಅಂದಾಜು ಮಾಡಿದಂತೆ ಮಾರಾಟ ಮಾಡಬೇಕಾಗಿರುವ ಸ್ವತ್ತಿನ ಮೌಲ್ಯವು ಒಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಸಂದರ್ಭದಲ್ಲಿ ನೂರು ರೂಪಾಯಿಗಳನ್ನು ಮತ್ತು ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಸಂದರ್ಭದಲ್ಲಿ ಇನ್ನೂರ ಐವತ್ತು ರೂಪಾಯಿಗಳನ್ನು ಮೀರಿದರೆ, ಸಮುತ ಗ್ರಂಥಾಲಯ ಪ್ರಾಧಿಕಾರದ ಮಂಜೂರಾತಿಯು ಅಗತ್ಯವಿರತಕ್ಕದ್ದು.

(4) ಇನ್ನೂರ ಐವತ್ತು ರೂಪಾಯಿಗಳನ್ನು ಮೀರುವ ವೆಚ್ಚವನ್ನು ಒಳಗೊಳ್ಳುವ ಸಾಮಗ್ರಿಗಳು ಅಥವಾ ಸರಕುಗಳ ಸರಬರಾಜಿಗಾಗಿನ ಅಥವಾ ಯಾವುದೇ ಕೆಲಸವನ್ನು ಮಾಡುವುದಕ್ಕಾಗಿನ ಯಾವುದೇ ಕರಾರನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ಅಂಥ ಕರಾರನ್ನು ಮಾಡಿಕೊಳ್ಳಲು ಇಚ್ಛಿಸುವ ವ್ಯಕ್ತಿಗಳಿಂದ, ಸಮುಚಿತ ಗ್ರಂಥಾಲಯ ಪ್ರಾಧಿಕಾರವು ಕಾಲ ಕಾಲಕ್ಕೆ ನಿರ್ಧರಿಸಲಾದಂಥ ರೀತಿಯಲ್ಲಿ ಟೆಂಡರುಗಳನ್ನು ಕರೆಯತಕ್ಕದ್ದು ಮತ್ತು ಅಂದಾಜು ಮಾಡಿದ ಮೌಲ್ಯವು ಐದು ನೂರು ರೂಪಾಯಿಗಳನ್ನು ಮೀರಿದಾಗ ಯಾವುದೇ ಅಂಥ ಕರಾರನ್ನು ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಕ್ರಮಬದ್ಧವಾಗಿ ಅಧಿಕೃತಗೊಳಿಸಿದ ಅಧಿಕಾರಿಯ ಪೂರ್ವಾನುಮೋದನೆಯಿಲ್ಲದೆ ಮಾಡಿಕೊಳ್ಳತಕ್ಕದ್ದಲ್ಲ.

## ಅಧ್ಯಾಯ– XII

## ಉಪವಿಧಿಗಳ ಪ್ರಕಟಣೆ

**31. ಉಪವಿಧಿಗಳನ್ನು ಪ್ರಕಟಿಸುವ ರೀತಿ.–** 42ನೇ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಉಪವಿಧಿಯನ್ನು ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಜೊತೆಗೆ,–

(i) ಸಂದರ್ಭಾನುಸಾರ ರಾಜ್ಯದಾದ್ಯಂತ, ನಗರದಲ್ಲಿ ಅಥವಾ ಜಿಲ್ಲೆಯಲ್ಲಿ ಪ್ರಸಾರವಾಗುವ ಕನ್ನಡ ದಿನಪತ್ರಿಕೆಯ ಎರಡು ಸಂಚಿಕೆಗಳಲ್ಲಿ;

(ii) ಸಂದರ್ಭಾನುಸಾರ ರಾಜ್ಯ ಗ್ರಂಥಾಲಯ ಪ್ರಾಧಿಕಾರದ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಕಛೇರಿಯ ನೋಟೀಸು ಬೋರ್ಡಿನ ಮೇಲೆ ಉಪವಿಧಿಯ ಪ್ರತಿಗಳನ್ನು ಅಂಟಿಸುವುದರ ಮೂಲಕ ಸಂದರ್ಭಾನುಸಾರ ಕರ್ನಾಟಕ ರಾಜ್ಯ ಕೇಂದ್ರ ಗ್ರಂಥಾಲಯ ಮತ್ತು ನಗರ ಅಥವಾ ಜಿಲ್ಲೆಯಲ್ಲಿನ ಸಾರ್ವಜನಿಕ ಗ್ರಂಥಾಲಯಗಳ ನೋಟೀಸು ಬೋರ್ಡಿನ ಮೇಲೆ ಉಪವಿಧಿಗಳನ್ನು ಅಂಟಿಸುವುದರ ಮೂಲಕವೂ ಸಹ ಪ್ರಕಟಿಸತಕ್ಕದ್ದು.

## ಅಧ್ಯಾಯ–XIII

## ರಾಜ್ಯ ಗ್ರಂಥಪಾಲನ ತೀರ್ಮಾನದ ವಿರುದ್ಧ ಅಪೀಲನ್ನು ಸಲ್ಲಿಸುವುದಕ್ಕಾಗಿನ ಅವಧಿ

**32. ಅಪೀಲನ್ನು ಸಲ್ಲಿಸುವುದಕ್ಕಾಗಿ ಅವಧಿ.–** 44ನೇ ಪ್ರಕರಣದ (4)ನೇ ಉಪಪ್ರಕರಣದ ಮೇರೆಗೆ ರಾಜ್ಯ ಗ್ರಂಥಪಾಲನ ತೀರ್ಮಾನದ ವಿರುದ್ಧ ಕರ್ನಾಟಕ ರಾಜಸ್ವ ಅಪೀಲು ನ್ಯಾಯಾಧೀಕರಣಕ್ಕೆ ಅಪೀಲನ್ನು, ಅಂಥ ತೀರ್ಮಾನದ ದಿನಾಂಕದಿಂದ ತೊಂಭತ್ತು ದಿವಸದೊಳಗೆ ಸಲ್ಲಿಸತಕ್ಕದ್ದು.

**33. ನಿರಸನ.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳು (ಗ್ರಂಥಾಲಯ ಪ್ರಾಧಿಕಾರಗಳ ರಚನೆ) ನಿಯಮಗಳು, 1966 ಇವುಗಳನ್ನು, ಈ ನಿಯಮಗಳ ಪ್ರಾರಂಭವಾದ ದಿನಾಂಕಕ್ಕೆ ಮುಂಚೆ ಸದರಿ ನಿಯಮಗಳ ಮೇರೆಗೆ ಮಾಡಿದ ಕಾರ್ಯಗಳಿಗೆ ಸಂಬಂಧಪಟ್ಟಂತೆ ಹೊರತುಪಡಿಸಿ ಈ ಮೂಲಕ ನಿರಸನಗೊಳಿಸಲಾಗಿದೆ;

ಪರಂತು, ಮಾಡಿದ ಯಾವುದೇ ಕಾರ್ಯ, ಕೈಗೊಂಡ ಯಾವುದೇ ಕ್ರಮವನ್ನು (ನಡೆಸಲಾದ ಚುನಾವಣೆಗಳನ್ನು ಒಳಗೊಂಡು) ಈ ನಿಯಮಗಳ ಸಂವಾದಿ ಉಪಬಂಧಗಳ ಮೇರೆಗೆ ಮಾಡಲಾಗಿರುವುದಾಗಿ ಅಥವಾ ಕೈಗೊಂಡಿರುವುದಾಗಿ ಭಾವಿಸತಕ್ಕದ್ದು.

### ಅನುಬಂಧ–1

### (14(1)ನೇ ನಿಯಮವನ್ನು ನೋಡಿ)

### ನಗರ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ನಮೂನೆ

ನಗರಕ್ಕಾಗಿನ ಅಭಿವೃದ್ಧಿ ಯೋಜನೆಯು ಹೊಸದಾಗಿ ಸ್ಥಾಪಿಸಬೇಕಾಗಿರುವ ಪ್ರತಿಯೊಂದು ಕೇಂದ್ರ ಮತ್ತು ಶಾಖಾ ಸಾರ್ವಜನಿಕ ಗ್ರಂಥಾಲಯಗಳು ಮತ್ತು ಶಾಲೆ ಮತ್ತು ಆಸ್ಪತ್ರೆ ಗ್ರಂಥಾಲಯದ ಬಗ್ಗೆ ಈ ಕೆಳಕಂಡ ಮತ್ತು ಇತರ ಸಂಬಂಧಪಟ್ಟ ಮಾಹಿತಿಯನ್ನು ಒದಗಿಸತಕ್ಕದ್ದು:

1. ಪ್ರಕರಣ 14(1)ನೇ ನಿಯಮದ ಮೇರೆಗೆ ಒದಗಿಸಿದ ಭೂಪಟವು ಕೇಂದ್ರ ಗ್ರಂಥಾಲಯವನ್ನು ಒಳಗೊಂಡು ಹೊಸದಾಗಿ ತೆರೆಯಬೇಕಾಗಿರುವ ಪ್ರತಿಯೊಂದು ಸಾರ್ವಜನಿಕ ಶಾಲಾ ಮತ್ತು ಆಸ್ಪತ್ರೆ ಗ್ರಂಥಾಲಯವನ್ನು ವಿಭಿನ್ನವಾದ ಚಿಹ್ನೆಯ ಮೂಲಕ ಸೂಚಿಸತಕ್ಕದ್ದು.

2. ಅದರಲ್ಲಿನ ವಿಭಾಗ ಮತ್ತು ಸ್ಥಳ;

3. ಸ್ಥಾಪನೆಯ ಬಗ್ಗೆ ಉದ್ದೇಶಿಸಲಾದ ವರ್ಷ;

4. ಅನಕ್ಷರತೆಯ ಬಗ್ಗೆ ಮಾಹಿತಿ; ಮತ್ತು

(1) ಅನಕ್ಷರಸ್ಥರಿಗೆ ಕೊಡಬೇಕೆಂದು ಉದ್ದೇಶಿಸಿದ ಗ್ರಂಥಾಲಯ ಸೇವೆಯ ಬಗ್ಗೆ;

(2) ಅನಕ್ಷರತೆಯನ್ನು ತೊಡೆದುಹಾಕುವುದಕ್ಕಾಗಿನ ಇತರ ಏಜೆನ್ಸಿಗಳು ಮತ್ತು ಗ್ರಂಥಾಲಯವು ವಹಿಸಲುದ್ದೇಶಿಸಿದ ಪಾತ್ರ.

5. ವಿಭಾಗದಲ್ಲಿನ ವಯಸ್ಕ ಶಿಕ್ಷಣ ಶಾಲೆಗಳ ಸಂಖ್ಯೆ ಮತ್ತು ಅವುಗಳೊಂದಿಗೆ ಗ್ರಂಥಾಲಯವು ಸಹಕರಿಸಲು ಉದ್ದೇಶಿಸುವಂಥ ರೀತಿ;

6. (1) ಕಟ್ಟಡಗಳು ಮತ್ತು ಜೋಡಣೆಗಳು;

(2) ಪೀಠೋಪಕರಣಗಳು ಮತ್ತು ಕಛೇರಿ ಸಲಕರಣೆಗಳು;

(3) ಓದುವ ಮತ್ತು ಅದಕ್ಕೆ ಸಂಬಂಧಪಟ್ಟ ಸಾಮಗ್ರಿಗಳು;

(4) ಪ್ರಾರಂಭಿಕ ಖರ್ಚಿನ ವೆಚ್ಚವನ್ನು ವಿಸ್ತರಿಸಲು ಉದ್ದೇಶಿಸಿದ ವರ್ಷಗಳ ಸಂಖ್ಯೆ;

(5) ಸರ್ಕಾರವು ಒದಗಿಸಬೇಕೆಂಬುದಾಗಿ ಕೋರಲಾಗಿರುವಂಥ ಮೊಬಲಗು;

(6) ಉಳಿದ ಮೊಬಲಗನ್ನು ಕೊಂಡುಕೊಳ್ಳಲು ಉದ್ದೇಶಿಸಿದಂಥ ಇತರ ಮೂಲಗಳು

– ಇವುಗಳ ಬಗೆಗಿನ ಅಂದಾಜು ಮಾಡಿದ ಪ್ರಾರಂಭಿಕ ವೆಚ್ಚ

7. (ಕ) ಹುದ್ದೆಗಳ ಸಂಖ್ಯೆ ಮತ್ತು ಸಂಬಳಗಳ ಶ್ರೇಣಿಯ ಬಗೆಗಿನ ವಿವರಗಳೊಂದಿಗೆ ಸಿಬ್ಬಂದಿ;

(ಖ) ಪೀಠೋಪಕರಣ ಮತ್ತು ಕಛೇರಿ ಉಪಕರಣಗಳು;

(ಗ) ಓದುವ ಮತ್ತು ಅದಕ್ಕೆ ಸಂಬಂಧಪಟ್ಟ ಸಾಮಗ್ರಿಗಳು;

(ಘ) ವಿಮಾ ವೆಚ್ಚಗಳು;

(ಙ) ಎತ್ತಲಾದ ಗ್ರಂಥಾಲಯ ಉಪಕರದಿಂದ ವಿನಿಯೋಗಿಸಬೇಕಾದ ಅಂದಾಜು ಮಾಡಿದ ಮೊಬಲಗು;

(ಚ) ಮೂಲಗಳ ಹೆಸರಿನೊಂದಿಗೆ ಇತರ ಮೂಲಗಳಿಂದ ಕೊಂಡುಕೊಳ್ಳಬಹುದಾದ ಅಂದಾಜು ಮಾಡಿದ ಮೊಬಲಗು;

(ಛ) ಸರ್ಕಾರವು ಒದಗಿಸಲು ಕೋರಲಾಗಿರುವಂಥ ಮೊಬಲಗು

– ಇವುಗಳ ಬಗ್ಗೆ ವರ್ಷಕ್ಕಾಗಿ ಅಂದಾಜು ಮಾಡಿದ ಅವರ್ತಕ ಖರ್ಚು.

**ಅಭಿವೃದ್ಧಿಯ ವೇಳಾಪಟ್ಟಿ**

ಒಂದು ನಗರದ ಅಭಿವೃದ್ಧಿ ಯೋಜನೆಯು, ಯಾವ ವರ್ಷಗಳಲ್ಲಿ ಪೂರ್ಣ ಗ್ರಂಥಾಲಯ ಸೇವೆಯನ್ನು ಸ್ಥಾಪಿಸಬಹುದೋ ಆ ವರ್ಷಗಳ ಅಂದಾಜು ಸಂಖ್ಯೆಯನ್ನು ತಿಳಿಸತಕ್ಕದ್ದು ಮತ್ತು ತಾತ್ಕಾಲಿಕ ವಾರ್ಷಿಕ ವೇಳಾಪಟ್ಟಿಯ ರೂಪದಲ್ಲಿ ಪ್ರಸ್ತಾವಗಳ ಸಾರಾಂಶವನ್ನು,–

1. ಕೇಂದ್ರ ಗ್ರಂಥಾಲಯದ ಸ್ಥಾಪನೆ;

2. 18 ವರ್ಷ ವಯಸ್ಸಿಗಿಂತ ಹೆಚ್ಚಿನ ಒಟ್ಟು ಜನಸಂಖ್ಯೆಗೆ ಮತ್ತು ಅಕ್ಷರಸ್ಥರ ಸಂಖ್ಯೆಗೆ ಪ್ರಮಾಣಾನುಸಾರವಾಗಿರುವ ಶಾಖಾ ಗ್ರಂಥಾಲಯಗಳ ಸಂಖ್ಯೆ;

3. ಶಾಲಾ ಗ್ರಂಥಾಲಯಗಳ ಸಂಖ್ಯೆ;

4. ಆಸ್ಪತ್ರೆ ಗ್ರಂಥಾಲಯಗಳ ಸಂಖ್ಯೆ;

5. ಅಗತ್ಯವಾದ ಸಿಬ್ಬಂದಿಯ ಸಂಖ್ಯಾಬಲ;
(1) ವೃತ್ತೀಯ;
(2) ಅರೆ ವೃತ್ತೀಯ;
(3) ಲಿಪಿಕ;
(4) ಅಕುಶಲ;

6. 10 ವರ್ಷ ವಯಸ್ಸಿಗಿಂತ ಹೆಚ್ಚಿನ ಒಟ್ಟು ಜನಸಂಖ್ಯೆ ಮತ್ತು ಅವರ ಪೈಕಿ ಅಕ್ಷರಸ್ಥರಿಗೆ ವೃತ್ತೀಯ ಮತ್ತು ಅರೆ ವೃತ್ತೀಯ ಸಿಬ್ಬಂದಿಯು ಇರುವ ಪ್ರಮಾಣ ಸಂಖ್ಯೆ:

7. (1) ಸರ್ಕಾರದಿಂದ;

(2) ನಗರದ ಸ್ಥಳೀಯ ನಿಕಾಯದಿಂದ: ಮತ್ತು

(3) ಇತರ ಮೂಲಗಳಿಂದ

– ಕಂಡುಕೊಳ್ಳಬೇಕಾದ ಮೊಬಲಗನ್ನು ಸೂಚಿಸಿ ಅಂದಾಜು ಬಂಡವಾಳ ವೆಚ್ಚದ ಕ್ರಮಿಕ ಒಟ್ಟು ಮೊಬಲಗು

8.(1) ಸರ್ಕಾರದಿಂದ;

(2) ನಗರದ ಸ್ಥಳೀಯ ನಿಕಾಯದಿಂದ;

(3) ಗ್ರಂಥಾಲಯ ಉಪಕರದ ಉತ್ಪತ್ತಿಗಳಿಂದ; ಮತ್ತು

(4) ಇತರ ಮೂಲಗಳಿಂದ

– ಕಂಡುಕೊಳ್ಳಬೇಕಾದ ಮೊಬಲಗನ್ನು ಸೂಚಿಸಿ ವಾರ್ಷಿಕ ವೆಚ್ಚದ ಅಂದಾಜು ವೆಚ್ಚ

ಇವುಗಳ ಬಗ್ಗೆ ಪ್ರತಿ ವರ್ಷಕ್ಕಾಗಿ ಕೊಟ್ಟು ಒದಗಿಸತಕ್ಕದ್ದು.

## ಅನುಬಂಧ–II

## (15(1)ನೇ ನಿಯಮವನ್ನು ನೋಡಿ)

## ಜಿಲ್ಲಾ ಗ್ರಂಥಾಲಯ ಅಭಿವೃದ್ಧಿ ಯೋಜನೆಯ ನಮೂನೆ

ಗ್ರಂಥಾಲಯಗಳನ್ನು ಸ್ಥಾಪಿಸುವುದಕ್ಕಾಗಿ ಮತ್ತು ಗ್ರಂಥಾಲಯ ಸೇವೆಯನ್ನು ವಿಸ್ತರಿಸುವುದಕ್ಕಾಗಿ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಅಭಿವೃದ್ಧಿ ಯೋಜನೆಯನ್ನು ಮೂರು ಭಾಗಗಳಲ್ಲಿ, ಸರಿ ಸುಮಾರಾಗಿ ಹೇಳಬೇಕಾದರೆ, ಈ ಕೆಳಕಂಡ ಆದ್ಯತೆಯ ಕ್ರಮದಲ್ಲಿ ಸಲ್ಲಿಸತಕ್ಕುದು:

1. ಯೋಜನೆಯ ಪೂರ್ಣ ರೂಪ ರೇಖೆ;
2. ಪಟ್ಟಣ ಉಪಯೋಜನೆ; ಮತ್ತು
3. ಗ್ರಾಮ ಉಪಯೋಜನೆ.

1. ಆ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ, ಜಿಲ್ಲಾ ಕೇಂದ್ರ ಗ್ರಂಥಾಲಯದೊಂದಿಗೆ ಪ್ರಾರಂಭಿಸುವುದು ವಿಹಿತವಾಗಬಹುದು; ಆ ತರುವಾಯ ಪಟ್ಟಣ ಉಪ ಯೋಜನೆಯನ್ನು ಕಾರ್ಯಗತಗೊಳಿಸಬಹುದು. ಮತ್ತು ಆ ತರುವಾಯ ಗ್ರಾಮ ಉಪಯೋಜನೆಯನ್ನು ಕಾರ್ಯಗತ ಗೊಳಿಸಬಹುದು.

(1) ಯೋಜನೆಯ ಪೂರ್ಣ ರೂಪುರೇಖೆ;

(2) ಈಗಿರುವ ಗ್ರಂಥಾಲಯ ಸೇವೆ.

2. ಜಿಲ್ಲಾ ಗ್ರಂಥಾಲಯ ಪ್ರಾಧಿಕಾರದ ಅಭಿವೃದ್ಧಿ ಯೋಜನೆಯು, ಈ ಕೆಳಕಂಡವುಗಳನ್ನು ಮತ್ತು ಯಾವುದೇ ಇತರ ಸುಸಂಗತ ಅಂಶಗಳನ್ನೊಳಗೊಳ್ಳುವ ಈಗಿರುವ ಗ್ರಂಥಾಲಯ ಸೇವೆಯ ಬಗ್ಗೆ ಮಾಹಿತಿಯನ್ನು ಒದಗಿಸತಕ್ಕದ್ದು;

(ಕ) ಅಸ್ತಿತ್ವದಲ್ಲಿರುವ;

1) ಜಿಲ್ಲಾ ಮಂಡಲಿಯು ನಿರ್ವಹಿಸುತ್ತಿರುವ ಸಾರ್ವಜನಿಕ ಗ್ರಂಥಾಲಯಗಳು ಯಾವುದಾದರೂ ಇದ್ದರೆ, ಅವು;

2) ಮುನ್ಸಿಪಲ್ ಕೌನ್ಸಿಲ್ ಅಥವಾ ಗ್ರಾಮ ಪಂಚಾಯತಿಗಳು, ನಿರ್ವಹಿಸುತ್ತಿರುವ ಸಾರ್ವಜನಿಕ ಗ್ರಂಥಾಲಯಗಳು;

3) ಸಾರ್ವಜನಿಕರಿಗೆ ಮುಕ್ತವಾಗಿರುವ ಮತ್ತು ಇತರ ನಿಗಮಿತ ಏಜೆನ್ಸಿಗಳು ನಿರ್ವಹಿಸುತ್ತಿರುವ ಇತರ ಗ್ರಂಥಾಲಯಗಳು;

4) ಜಿಲ್ಲಾ ಮಂಡಲಿಗಳು ನಿರ್ವಹಿಸುತ್ತಿರುವ ಶಾಲಾ ಗ್ರಂಥಾಲಯಗಳು, ಯಾವುವಾದರೂ ಇದ್ದರೆ, ಅವು;

5) ಮುನ್ಸಿಪಲ್ ಕೌನ್ಸಿಲುಗಳು ಅಥವಾ ಗ್ರಾಮ ಪಂಚಾಯಿತಿಗಳು ನಿರ್ವಹಿಸುತ್ತಿರುವ ಶಾಲಾ ಗ್ರಂಥಾಲಯಗಳು;

6) ಇತರ ನಿಗಮಿತ ಏಜೆನ್ಸಿಗಳು ನಿರ್ವಹಿಸುತ್ತಿರುವ ಶಾಲಾ ಗ್ರಂಥಾಲಯಗಳು;

7) ಆಸ್ಪತ್ರೆ ಗ್ರಂಥಾಲಯಗಳು; ಮತ್ತು

8) ಕಾರಾಗೃಹ ಗ್ರಂಥಾಲಯಗಳು

– ಇವು ಇರುವ ಸ್ಥಳವನ್ನು ವಿಭಿನ್ನ ಗುರುತುಗಳ ಮೂಲಕ ತೋರಿಸಿರುವಂಥ ಅನುಮೋದಿತ ಜಿಲ್ಲಾ ಪ್ರದೇಶದ ಭೂಪಟ.

ನಗರ ಗ್ರಂಥಾಲಯ ಯೋಜನೆಗಾಗಿ 2 ರಿಂದ 7ರ ವರೆಗೆ ಕೊಟ್ಟ ನಿಯಮಗಳ ಸಾದೃಶ್ಯದ ಮೇಲೆ 2(ಕ)ದಲ್ಲಿ ನಮೂದು ಮಾಡಿದ ಪ್ರತಿಯೊಂದು ಗ್ರಂಥಾಲಯದ ಬಗ್ಗೆ ವಿವರಗಳನ್ನು ತೋರಿಸುವ ಮಾಹಿತಿ.

**3. ಗ್ರಂಥಾಲಯವನ್ನು ವಹಿಸಿಕೊಳ್ಳುವುದು.–** (1) ಈ ನಿಯಮಗಳು, ನಗರ ಅಭಿವೃದ್ಧಿ ಯೋಜನೆಯ ಸಂವಾದಿ ನಿಯಮಗಳಿಗೆ ಸಾದೃಶ್ಯವಾಗಿದೆ.

(2) ಕಾರಾಗೃಹಗಳ ಸಂಖ್ಯೆ ಮತ್ತು ಪ್ರತಿ ದಿವಸಕ್ಕೆ ಕೈದಿಗಳ ಸರಾಸರಿ ಸಂಖ್ಯೆ

(3) ಸ್ಥಾಪಿಸಬೇಕಾದ ಹೊಸ ಗ್ರಂಥಾಲಯಗಳು

ಈ ನಿಯಮಗಳು, ಸೂಕ್ತವೆನಿಸಿದ ಕಡೆಗಳಲೆಲ್ಲಾ **"**ಕಾರಾಗೃಹ ಗ್ರಂಥಾಲಯಗಳು**"** ಎಂಬುದರ ಸೇರ್ಪಡೆಯೊಂದಿಗೆ ನಗರ ಅಭಿವೃದ್ಧಿ ಯೋಜನೆಗಾಗಿನ ಸಂವಾದಿ ನಿಯಮಗಳಿಗೆ ಸಾದೃಶ್ಯವಾಗಿವೆ.

(4) **ಅಭಿವೃದ್ಧಿ ವೇಳಾಪಟ್ಟಿ.–** ಈ ನಿಯಮಗಳು, ನಗರ ಅಭಿವೃದ್ಧಿ ಯೋಜನೆಗಾಗಿನ ಸಂವಾದಿ ನಿಯಮಗಳಿಗೆ ಸಾದೃಶ್ಯವಾಗಿವೆ; ಮತ್ತು ಅದರ ಜೊತೆಗೆ ಈ ಕೆಳಕಂಡವು,–

(ಕ) ಕಾರಾಗೃಹ ಗ್ರಂಥಾಲಯಗಳ ಸಂಖ್ಯೆ; ಮತ್ತು

(ಖ) ಗ್ರಂಥಾಲಯಗಳ ಸಂಖ್ಯೆ,

**4. ಪಟ್ಟಣ ಉಪ ಯೋಜನೆ.–** (ಕ) ಗ್ರಾಮೀಣ ಗ್ರಂಥಾಲಯ ಅಭಿವೃದ್ಧಿ ಯೋಜನೆಯು, ನಗರ ಗ್ರಂಥಾಲಯ ಯೋಜನೆಗಾಗಿ ಅಗತ್ಯಪಡಿಸಿದ ವಿವರಗಳನ್ನು ಕೊಟ್ಟು ಅನುಮೋದಿತ ಗ್ರಾಮೀಣ ಪ್ರದೇಶದಲ್ಲಿ ಸೇರಿಸಲಾದ ಎರಡು ಪಟ್ಟಣಗಳ ಪ್ರತಿಯೊಂದಕ್ಕೂ ಒಂದು ಉಪಯೋಜನೆಯನ್ನು ಒದಗಿಸತಕ್ಕದ್ದು; ಮತ್ತು

(1) ಒಂದು ಪಟ್ಟಣಕ್ಕೆ ಉಪಯೋಜನೆಯನ್ನು ರೂಪಿಸುವಾಗ, ಒಂದು ಪಟ್ಟಣ ಉಪಯೋಜನೆಯ ಮೇರೆಗೆ ನಿರ್ವಹಿಸಲಾಗುತ್ತಿರುವ ಒಂದು ಸಾರ್ವಜನಿಕ ಗ್ರಂಥಾಲಯವು ಒಂದು ಸ್ವತಂತ್ರ ಘಟಕವಾಗಿರುವುದು ನಿಂತು ಹೋಗುವುದೆಂದು ಮತ್ತು ಯಾವ ಜಿಲ್ಲೆಯಲ್ಲಿ ಅದು ಇರುವುದೋ ಆ ಜಿಲ್ಲೆಯಲ್ಲಿ ಅನುಮೋದಿತ ಗ್ರಾಮೀಣ ಪ್ರದೇಶಕ್ಕಾಗಿನ ಜಿಲ್ಲಾ ಕೇಂದ್ರ ಗ್ರಂಥಾಲಯವನ್ನು ಸ್ಥಾಪಿಸಿದ ಮೇಲೆ ಆದಷ್ಟು ಬೇಗ ಅದು ಗ್ರಾಮೀಣ ಶಾಖಾ ಗ್ರಂಥಾಲಯವಾಗುವುದೆಂಬುದನ್ನು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

**5. ಗ್ರಾಮ ಉಪಯೋಜನೆ.–** ಒಂದು ಗ್ರಾಮೀಣ ಉಪಯೋಜನೆಯನ್ನು, ಯಾವ ಪ್ರದೇಶಕ್ಕಾಗಿ ಜಿಲ್ಲಾ ಕೇಂದ್ರ ಗ್ರಂಥಾಲಯವನ್ನು ಸ್ಥಾಪಿಸಲಾಗಿದೆಯೋ ಆ ಪ್ರದೇಶದಲ್ಲಿನ ಗ್ರಾಮಗಳು ಮತ್ತು ಸಣ್ಣ ಹಳ್ಳಿಗಳಿಗಾಗಿ ಮಾತ್ರ ಸಲ್ಲಿಸಬಹುದು.

(1) ಗ್ರಾಮ ಉಪಯೋಜನೆಯು, ಈ ಕೆಳಕಂಡ ಮತ್ತು ಒಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಪ್ರದೇಶದೊಳಗೆ ಬರುವ ಗ್ರಾಮಗಳು ಮತ್ತು ಸಣ್ಣ ಹಳ್ಳಿಗಳಿಗೆ ಸಂಚಾರಿ ಗ್ರಂಥಾಲಯ ಸೇವೆಯನ್ನು ಕ್ರಮಿಕವಾಗಿ ವಿಸ್ತರಿಸುವ ಬಗ್ಗೆ ಯಾವುದೇ ಇತರ ಸುಸಂಗತ ಮಾಹಿತಿಯನ್ನು ಒದಗಿಸತಕ್ಕದ್ದು.

(ಕ) ಭೂಪ್ರದೇಶದ ಸ್ವರೂಪ, ಸಂಚಾರಿ ಗ್ರಂಥಾಲಯವು ಸಂಚರಿಸಬೇಕಾದ ರಸ್ತೆಗಳು ಮತ್ತು ಒಂದು ಸೇವಾ ಕೇಂದ್ರವನ್ನು ತೋರಿಸುವ ಪ್ರದೇಶದ ಒಂದು ಭೂಪಟ, ಸೇವಾ ಕೇಂದ್ರವನ್ನು ತಲುಪಲು ಆ ವಾಸಸ್ಥಳದ ಯಾವನೇ ನಿವಾಸಿಯು ಒಂದು ಕಿಲೋಮೀಟರಿಗಿಂತ ಹೆಚ್ಚು ನಡೆಯಬೇಕಾಗಿಲ್ಲ ಎಂಬಂತೆ ಪ್ರತಿ ವಾಸಸ್ಥಳಕ್ಕಾಗಿ ಒಂದು ಸೇವಾ ಕೇಂದ್ರದ ಗುರಿ ಮಾದರಿಯಾಗಿರತಕ್ಕದ್ದು;

(ಖ) ವಾರ್ಷಿಕ ಸೇರ್ಪಡೆ ಮತ್ತು ಸಂಚಿತ ಒಟ್ಟನ್ನು ತೋರಿಸುವ ವೇಳಾಪಟ್ಟಿಯೊಂದಿಗೆ ತರಬೇಕಾದ ಸಂಚಾರಿ ಗ್ರಂಥಾಲಯಗಳು ಅಥವಾ ಲೈಬ್ರಾಚೈನುಗಳ ಸಂಖ್ಯೆ ಹದಿನೈದು ದಿವಸಕ್ಕೊಮ್ಮೆ ಪ್ರತಿಯೊಂದು ಸೇವಾ ಕೇಂದ್ರದಲ್ಲಿ ಒಂದು ಲೈಬ್ರಾಚೈನು ಸಂದರ್ಶಿಸುವ ಹಾಗೆ 25,000 ಜನಸಂಖ್ಯೆಗಾಗಿ ಅಥವಾ 10 ಸೇವಾ ಕೇಂದ್ರಗಳಿಗಾಗಿ ಸರಿಸುಮಾರು ಒಂದು ಲೈಬ್ರಾಚೈನನ್ನು ಗುರಿಯಾಗಿಟ್ಟುಕೊಳ್ಳುವುದು ಮಾದರಿಯೆನಿಸುವು ದೆಂಬುದನ್ನು ತಿಳಿದಿರಬೇಕು;

(ಗ) ವಾರ್ಷಿಕ ಸೇರ್ಪಡೆ ಮತ್ತು ಸಂಚಿತ ಒಟ್ಟನ್ನು ತೋರಿಸುವ ವೇಳಾಪಟ್ಟಿಯೊಂದಿಗೆ ನೇಮಕ ಮಾಡಲುದ್ದೇಶಿಸಿದ ಸಂಚಾರಿ ಸಿಬ್ಬಂದಿಯ ಸಂಖ್ಯೆ;

(ಘ) ವಲಯದಲ್ಲಿ ಸಾಮಾಜಿಕ ಶಿಕ್ಷಣ ಕೇಂದ್ರಗಳ ಸಂಖ್ಯೆ ಮತ್ತು ಅವುಗಳೊಂದಿಗೆ ಗ್ರಂಥಾಲಯವು ಸಹಕರಿಸಲು ಉದ್ದೇಶಿಸುವಂಥ ರೀತಿ;

(ಙ) (1) ಗ್ರಂಥಾಲಯ ವಾಹನಗಳು ಮತ್ತು ಅವುಗಳ ಜೋಡಣೆಗಳು;

(2) ಗ್ರಾಮೀಣ ಕೇಂದ್ರ ಗ್ರಂಥಾಲಯ ಕಟ್ಟಡಕ್ಕೆ ಸೇರ್ಪಡೆ ಮಾಡಬೇಕಾದ ಗ್ಯಾರೇಜು ಮತ್ತು ಉಪಯೋಗಕ್ಕಾಗಿ ಸಜ್ಜುಗೊಳಿಸುವ ಸ್ಥಳ;

(3) ಪೀಠೋಪಕರಣ ಮತ್ತು ಕಛೇರಿ ಸಾಧನ ಸಾಮಗ್ರಿ;

(4) ಓದುವ ಮತ್ತು ಅದಕ್ಕೆ ಸಂಬಂಧಿಸಿದ ಸಾಮಗ್ರಿಗಳು;

(5) ಪ್ರಾರಂಭಿಕ ಖರ್ಚಿನ ವೆಚ್ಚವನ್ನು ಬಳಸಬಹುದಾದ ವರ್ಷಗಳ ಸಂಖ್ಯೆ;

(6) ಸರ್ಕಾರವು ಒದಗಿಸಬೇಕೆಂದು ಕೋರಲಾಗಿರುವಂಥ ಮೊಬಲಗು;

(7) ಉಳಿದ ಮೊಬಲಗನ್ನು ಕಂಡುಕೊಳ್ಳಲು ನಿರೀಕ್ಷಿಸಿದಂಥ ಸಂಪನ್ಮೂಲ;

–ಇವುಗಳಿಗಾಗಿನ ವಾರ್ಷಿಕ ಮೊಬಲಗು ಮತ್ತು ಸಂಚಿತ ಒಟ್ಟನ್ನು ತೋರಿಸುವ ವೇಳಾಪಟ್ಟಿಯೊಂದಿಗೆ ಅಂದಾಜು ಮಾಡಿದ ಪ್ರಾರಂಭಿಕ ಖರ್ಚು.

(1) ಹುದ್ದೆಗಳ ಸಂಖ್ಯೆ ಮತ್ತು ಸಂಬಳಗಳ ಶ್ರೇಣಿಗಳ ಬಗ್ಗೆ ವಿವರಗಳೊಡನೆ ಸಿಬ್ಬಂದಿ;

(2) ಪೀಠೋಪಕರಣ ಮತ್ತು ಕಛೇರಿ ಸಾಧನ ಸಾಮಗ್ರಿ;

(3) ಓದುವ ಮತ್ತು ಅದಕ್ಕೆ ಸಂಬಂಧಪಟ್ಟ ಸಾಮಗ್ರಿಗಳು;

(4) ವಿಮಾ ವೆಚ್ಚಗಳು;

(5) ಗ್ರಂಥಾಲಯ ಉಪಕರದಿಂದ ಕಂಡುಕೊಳ್ಳಬೇಕಾದ ಅಂದಾಜು ಮಾಡಿದ ಮೊಬಲಗು ಮೊತ್ತ;

(6) ಇತರ ಮೂಲಗಳ ಹೆಸರಿನೊಂದಿಗೆ ಇತರ ಮೂಲಗಳಿಂದ ಕಂಡುಕೊಳ್ಳಬೇಕಾದ ಅಂದಾಜು ಮಾಡಿದ ಮೊಬಲಗು; ಮತ್ತು

(7) ಸರ್ಕಾರವು ಒದಗಿಸಬೇಕೆಂದು ಕೋರಲಾಗಿರುವ ಮೊಬಲಗುಗಳು

– ಇವುಗಳ ಬಗ್ಗೆ ವಾರ್ಷಿಕ ಸೇರ್ಪಡೆಯನ್ನು ತೋರಿಸುವ ವೇಳಾ ಪಟ್ಟಿಯೊಂದಿಗೆ ಅಂದಾಜು ಮಾಡಿದ ಆವರ್ತಕ ಖರ್ಚು.

## ಅನುಬಂಧ– III

## (24ನೇ ನಿಯಮವನ್ನು ನೋಡಿ)

## ಸಹಾಯ ಅನುದಾನಕ್ಕಾಗಿ, ಅರ್ಹತೆ ಬಗ್ಗೆ ಷರತ್ತುಗಳಿಗೆ ಸಂಬಂಧಪಟ್ಟ ನಿಯಮಗಳು

**1. ಉಚಿತವಾಗಿ ಪುಸ್ತಕವನ್ನು ನೋಡುವುದು.–** (ಕ) ಪುಸ್ತಕಗಳನ್ನು ಚಂದಾದಾರರಿಗೆ ಎರವಲು ಕೊಡಬಹುದಾದರೂ, ಆವರಣದೊಳಗೆ ಪುಸ್ತಕವನ್ನು ನೋಡುವುದಕ್ಕಾಗಿ ಆ ಸ್ಥಳದ ಎಲ್ಲ ಜನರಿಗೆ ಗ್ರಂಥಾಲಯವನ್ನು ಮುಕ್ತವಾಗಿಡತಕ್ಕದ್ದು.

(ಖ) ಸಾರ್ವಜನಿಕರು ಉಪಯೋಗಿಸುವುದಕ್ಕಾಗಿ ಗ್ರಂಥಾಲಯವು ವಾರದಲ್ಲಿ 30 ಗಂಟೆಗಳಿಗೆ ಕಡಿಮೆಯಿಲ್ಲದಂತೆ ತೆರೆದಿಟ್ಟಿರತಕ್ಕದ್ದು;

(ಗ) ಗ್ರಂಥಾಲಯವು ರಾಜ್ಯ ಗ್ರಂಥಪಾಲನು ನಿಗದಿಪಡಿಸಬೇಕಾದ ಓದುಗರ ಕನಿಷ್ಠ ಸರಾಸರಿ ದೈನಿಕ ಹಾಜರಿಯನ್ನು ಹೊಂದಿರತಕ್ಕದ್ದು; ಮತ್ತು

(ಘ) ಗ್ರಂಥಾಲಯವು ಪುಸ್ತಕಗಳನ್ನು ಹೊಂದಿರತಕ್ಕದ್ದು ಮತ್ತು ವೃತ್ತಪತ್ರಿಕೆಗಳು ಮತ್ತು ನಿಯತಕಾಲಿಕಗಳನ್ನು ಮಾತ್ರ ಅಲ್ಲ.

**2. ಚಂದಾ ಅಥವಾ ನೋಂದಾಯಿತ ಎರವಲು ಪಡೆಯುವವರು.–** (ಕ) ಪುಸ್ತಕಗಳನ್ನು ಎರವಲು ಪಡೆಯುವುದಕ್ಕಾಗಿ ಗ್ರಂಥಾಲಯವು ಚಂದಾ ವಿಧಿಸುವ ಸಂದರ್ಭದಲ್ಲಿ, ಮನೆಯಲ್ಲಿ ಓದುವುದಕ್ಕಾಗಿ ಎರವಲು ಪಡೆಯುವವನು ಗ್ರಂಥಾಲಯಕ್ಕೆ ಚಂದಾದಾರನಾಗುವ ಬಗೆಗಿನ ಅರ್ಹತೆಯು ಸ್ಥಳೀಯವಾಗಿ ಸೂಕ್ಷ್ಮವಿಚಾರಣೆಗೆ ಒಳಪಟ್ಟಿರತಕ್ಕದ್ದು;

(ಖ) ಗ್ರಂಥಾಲಯವು, ರಾಜ್ಯ ಗ್ರಂಥಪಾಲನು ನಿಗದಿಪಡಿಸಬೇಕಾದ ಚಂದಾದಾರರು ಅಥವಾ ನೋಂದಾಯಿತ ಎರವಲು ಪಡೆಯುವವರ ಕನಿಷ್ಠ ಸಂಖ್ಯೆಯನ್ನು ಹೊಂದಿರತಕ್ಕದ್ದು.

**3. ಸೇವಾ ಕೇಂದ್ರ ಸೌಲಭ್ಯಗಳು.–** ಗ್ರಂಥಾಲಯವು, ಸಂದರ್ಭಾನುಸಾರ ಜಿಲ್ಲಾ ಅಥವಾ ನಗರ ಕೇಂದ್ರ ಗ್ರಂಥಾಲಯದ ಸೇವಾ ಕೇಂದ್ರವಾಗಿ ಕಾರ್ಯನಿರ್ವಹಿಸತಕ್ಕದ್ದು. ಹಾಗೆಂದರೆ ಅದರ ಸ್ಥಳೀಯ ನಿವಾಸಿಗಳಿಗೆ ಪರಿಚಲನೆಗಾಗಿ ಕೇಂದ್ರ ಗ್ರಂಥಾಲಯ ಅಥವಾ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಶಾಖಾ ಗ್ರಂಥಾಲಯವು ಎರವಲಾಗಿ ಕೊಟ್ಟ ಪುಸ್ತಕಗಳನ್ನು ಸ್ವೀಕರಿಸತಕ್ಕದ್ದು. ಅವುಗಳನ್ನು ನಿವಾಸಿಗಳಿಗೆ ಚಂದಾ ಪಡೆಯದೇ ಎರವಲು ಕೊಡತಕ್ಕದ್ದು. ಗ್ರಂಥಾಲಯ ತಗಾದೆ ಮಾಡಿದಾಗ ಸಂಬಂಧಪಟ್ಟ ಕೇಂದ್ರ ಅಥವಾ ಶಾಖಾ ಗ್ರಂಥಾಲಯಕ್ಕೆ ಪುಸ್ತಕಗಳನ್ನು ವಾಪಸ್ಸು ಕೊಡತಕ್ಕದ್ದು. ಅಂಥ ಪುಸ್ತಕ ಕೊಟ್ಟ ಬಗ್ಗೆ ಅಂಕಿಅಂಶಗಳನ್ನು ಒದಗಿಸತಕ್ಕದ್ದು ಮತ್ತು ಜನರಿಗೆ ಪುಸ್ತಕ ಸೇವೆಯನ್ನು ಸಲ್ಲಿಸುವಲ್ಲಿ ಯುಕ್ತವಾದ ಪ್ರತಿಯೊಂದು ರೀತಿಯಲ್ಲಿ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರಕ್ಕೆ ಸಹಾಯ ಮಾಡತಕ್ಕದ್ದು.

**4. ವ್ಯವಸ್ಥಾಪನೆ**

(ಕ) **ವ್ಯವಸ್ಥಾಪಕ ಸಮಿತಿ.–** ಗ್ರಂಥಾಲಯ ವ್ಯವಹಾರಗಳ ವ್ಯವಸ್ಥಾಪನೆಯು, ಒಂದು ಅನುಮೋದಿತ ನಿಗಮಿತ ನಿಕಾಯವು ಇಟ್ಟುಕೊಂಡು ಬಂದ ಮತ್ತು ವ್ಯವಸ್ಥಾಪನೆ ಮಾಡಿಕೊಂಡು ಬಂದ ಗ್ರಂಥಾಲಯವನ್ನು ಹೊರತುಪಡಿಸಿ ಚಂದಾದಾರರ ಸರ್ವಸದಸ್ಯರ ಸಭೆಯಲ್ಲಿ ನಿಯತಕಾಲಿಕವಾಗಿ ಚುನಾವಣೆ ಮಾಡಿದ ವ್ಯವಸ್ಥಾಪಕ ಸಮಿತಿಯಲ್ಲಿ ನಿಹಿತಗೊಳ್ಳತಕ್ಕದ್ದು.

(ಖ) **ರಚನೆ.–** ಸಂದರ್ಭಾನುಸಾರ ನೆರವು ಪಡೆದ ಗ್ರಂಥಾಲಯ ಅಥವಾ ಒಂದು ಅನುಮೋದಿತ ನಿಗಮಿತ ನಿಕಾಯದ ವಿವರಣ ಪತ್ರ ಮತ್ತು ಅಂಗರಚನೆ ಮತ್ತು ಉಪವಿಧಿಗಳ ಪ್ರತಿಯನ್ನು, ವರ್ಷದಲ್ಲಿ ಒಮ್ಮೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಪ್ರದೇಶದ ಅದರ ಗ್ರಂಥಪಾಲನಿಗೆ ಒಪ್ಪಿಸತಕ್ಕದ್ದು.

(ಗ) **ವ್ಯವಸ್ಥಾಪಕ ಸಮಿತಿಯ ಬಗ್ಗೆ ವರದಿ.–** ಸಂದರ್ಭಾನುಸಾರ ನೆರವು ಪಡೆದ, ಗ್ರಂಥಾಲಯದ ವ್ಯವಸ್ಥಾಪಕ ಸಮಿತಿಯ ಅಥವಾ ಅನುಮೋದಿತ ನಿಗಮಿತ ನಿಕಾಯದ ಕಾರ್ಯಾಂಗದ ಸದಸ್ಯರ ಹೆಸರುಗಳನ್ನು ಸಂದರ್ಭಾನುಸಾರ ನಿಯತಕಾಲಿಕ ಚುನಾವಣೆ ಅಥವಾ ನೇಮಕಾತಿಯಾದ ಒಂದು ತಿಂಗಳೊಳಗೆ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಪ್ರದೇಶದ ಅದರ ಗ್ರಂಥಪಾಲನಿಗೆ ಸಲ್ಲಿಸತಕ್ಕದ್ದು. ಯಾವುದೇ ಮಧ್ಯಕಾಲಿಕ ಬದಲಾವಣೆಯನ್ನು ಸದರಿ ಗ್ರಂಥಪಾಲನಿಗೆ, ಆ ಬದಲಾವಣೆಯು ಆದ ಒಂದು ತಿಂಗಳೊಳಗೆ ವರದಿ ಮಾಡತಕ್ಕದ್ದು.

**5. ಆಡಳಿತ.–**

(ಕ) **ವಾರ್ಷಿಕ ಚಂದ.–** ಚಂದಾದಾರರಿಂದ ಗ್ರಂಥಾಲಯದ ಕನಿಷ್ಠ ವಾರ್ಷಿಕ ಸ್ವೀಕೃತಿಯು 50–00 ರೂಪಾಯಿಗಳಾಗಿರತಕ್ಕುದು ಅಥವಾ ಅನುಮೋದಿತ ನಿಗಮಿತ ನಿಕಾಯವು ಗ್ರಂಥಾಲಯಕ್ಕೆ ಒದಗಿಸಿದ ಕನಿಷ್ಠ ವಾರ್ಷಿಕ ನಿಧಿಯು 500–00 ರೂಪಾಯಿಗಳಾಗಿರತಕ್ಕದ್ದು.

(ಖ) **ಲೆಕ್ಕಪತ್ರಗಳು ಮತ್ತು ದಾಖಲೆಗಳು.–** ರಾಜ್ಯ ಗ್ರಂಥಪಾಲನು ನಿಯಮಿಸಿದ ಲೆಕ್ಕಪತ್ರಗಳು, ದಾಖಲೆಗಳು ಮತ್ತು ಇತರ ಅಂಕಿ ಅಂಶಗಳನ್ನು ಗ್ರಂಥಾಲಯವು ಇಟ್ಟುಕೊಂಡು ಬರತಕ್ಕದ್ದು ಮತ್ತು ಅವು ರಾಜ್ಯ ಗ್ರಂಥಪಾಲನ ಅಥವಾ ಅವನು ನೇಮಕ ಮಾಡಿದ ಯಾವನೇ ಏಜೆಂಟನ ಪರಿಶೀಲನೆಗೆ ಒಳಪಟ್ಟಿರತಕ್ಕದ್ದು.

(ಗ) **ಲೆಕ್ಕಪರಿಶೋಧನೆ.–** ಗ್ರಂಥಾಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸ್ಥಳೀಯ ನಿಧಿ ಲೆಕ್ಕಪತ್ರಗಳ ಪರೀಕ್ಷಕನು ಲೆಕ್ಕ ಪರಿಶೋಧನೆಗಾಗಿ ಸಲ್ಲಿಸತಕ್ಕದ್ದು. ಅವನು, ಸಂದಾಯ ಮಾಡಿದ ಅನುದಾನವನ್ನು ಅದನ್ನು ಕೊಟ್ಟಿರುವಂಥ ಉದ್ದೇಶಕ್ಕಾಗಿ ಉಪಯೋಗಿಸಲಾಗಿದೆಯೆಂದು ಪ್ರಮಾಣೀಕರಿಸತಕ್ಕದ್ದು.

(ಘ) **ವಾರ್ಷಿಕ ಪರಿಶೀಲನೆ.–** ಗ್ರಂಥಾಲಯವು ಸಲ್ಲಿಸಿದ ಸೇವೆಯ ಗುಣಮಟ್ಟ ಮತ್ತು ಪ್ರಮಾಣವು, ಆ ಉದ್ದೇಶಕ್ಕಾಗಿ ರಾಜ್ಯ ಗ್ರಂಥಪಾಲನು ನೇಮಕ ಮಾಡಬಹುದಾದಂಥ ಏಜೆನ್ಸಿಯ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು. ವಿವಿಧ ಜಿಲ್ಲೆಗಳು ಮತ್ತು ವಿವಿಧ ನಗರಗಳಿಗಾಗಿ ವಿವಿಧ ಏಜೆನ್ಸಿಯನ್ನು ನೇಮಕ ಮಾಡಬಹುದು.

**6. ಅನುದಾನದ ಬಳಕೆ.–**

(ಕ) **ಪುಸ್ತಕಗಳು.–** ಗ್ರಂಥಾಲಯವು ಸ್ವೀಕರಿಸಿದ ಅನುದಾನದ ಶೇಕಡಾ 75ರಷ್ಟನ್ನು ಗ್ರಂಥಾಲಯಕ್ಕಾಗಿ ಹೊಸ ಪುಸ್ತಕಗಳನ್ನು ಖರೀದಿಸಲು ಉಪಯೋಗಿಸತಕ್ಕದ್ದು.

(ಖ) **ಪುಸ್ತಕಗಳನ್ನು ಹೊರತುಪಡಿಸಿ ಇತರೆ.–** ಗ್ರಂಥಾಲಯವು ಸ್ವೀಕರಿಸಿದ ಅನುದಾನದ ಉಳಿದ ಶೇಕಡಾ 25ರಷ್ಟನ್ನು ಅವಶ್ಯವಿದ್ದರೆ, ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಪೂರ್ವಾನುಮೋದನೆಯೊಂದಿಗೆ, ಗ್ರಂಥಾಲಯದ ಇತರ ಉದ್ದೇಶಗಳಿಗಾಗಿ ಉಪಯೋಗಿಸಬಹುದು.

(ಗ) **ವೋಚರುಗಳನ್ನು ಒಪ್ಪಿಸುವುದು.–** ಅನುದಾನದಿಂದ ಸಂದಾಯ ಮಾಡಿದ ಪ್ರತಿಯೊಂದು ಬಿಲ್ಲಿನ ಪ್ರತಿಯನ್ನು ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷ ಅಥವಾ ಅನುಮೋದಿತ ನಿಗಮಿತ ನಿಕಾಯದ ಕಾರ್ಯನಿರ್ವಾಹಕ ಅಧಿಕಾರಿಯು ಸಂದಾಯದ ಬಗ್ಗೆ ಅದರ ಮೇಲೆ ಬರೆದು ರುಜು ಮಾಡಿದ ಪ್ರಮಾಣ ಪತ್ರ ಮತ್ತು ಆ ಹಣವನ್ನು ಸ್ವೀಕರಿಸಿದ ಪಕ್ಷಕಾರನ ರಸೀದಿಯೊಂದಿಗೆ, ಪ್ರತಿಯೊಂದು ತಿಂಗಳಿನ ಕೊನೆಯಲ್ಲಿ ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯದ ಪ್ರಾಧಿಕಾರದ ರಾಜ್ಯ ಗ್ರಂಥಪಾಲನು, ನಿಯಮಿಸಿದ ನಮೂನೆಯಲ್ಲಿ ಅನುದಾನವನ್ನು ಉಪಯೋಗಿಸಿದ ಬಗ್ಗೆ ವಿವರ ಪತ್ರದೊಂದಿಗೆ ಕಳುಹಿಸತಕ್ಕದ್ದು.

(ಘ) **ಪ್ರತ್ಯಕ್ಷವಾಗಿ ಸರಿನೋಡುವುದು.–** ಪ್ರತಿಯೊಂದು ಗ್ರಂಥಾಲಯವು ಪುಸ್ತಕಗಳ ಮತ್ತು ಲೆಕ್ಕ ಪರಿಶೋಧನೆ ಮಾಡಬೇಕಾದ ಬಿಲ್ಲುಗಳಲ್ಲಿ ಒಳಗೊಂಡ ಇತರೆ ಸಾಮಗ್ರಿಗಳನ್ನು ಪ್ರತ್ಯಕ್ಷವಾಗಿ ಸರಿನೋಡುವಿಕೆಗಾಗಿ ಲೆಕ್ಕ ಪರಿಶೋಧಕ ಅಥವಾ ಆ ಉದ್ದೇಶಕ್ಕಾಗಿ ನೇಮಕ ಮಾಡಿದ ಯಾವನೇ ಇತರ ಏಜೆಂಟನಿಗೆ ಸೌಲಭ್ಯಗಳನ್ನು ಕೊಡತಕ್ಕದ್ದು.

(ಜ) ಲೆಕ್ಕ ಪರಿಶೋಧಕನಿಗೆ ಒಪ್ಪಿಸುವುದು.– (1) ಸಂಬಂಧಪಟ್ಟ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರದ ಗ್ರಂಥಪಾಲನು ಸ್ವೀಕರಿಸಿದ ಪ್ರಮಾಣೀಕೃತ ಬಿಲ್ಲುಗಳು ಮತ್ತು ಮಾಸಿಕ ವಿವರಪತ್ರಗಳು ಲೆಕ್ಕ ಪರಿಶೋಧನೆಗಾಗಿ ಮುಖ್ಯ ಆಧಾರವಾಗಿರತಕ್ಕದ್ದು.

(2) ಅದರದೇ ಆದ ಆದಾಯದ ಮೂಲಗಳಿಂದ ಬಂದ ಆದಾಯ ಮತ್ತು ವೆಚ್ಚಕ್ಕಾಗಿನ ಲೆಕ್ಕಪತ್ರಗಳನ್ನು ಸರ್ಕಾರವು ನಿಯಮಿಸಬಹುದಾದಂತಹ ಲೆಕ್ಕ ಪರಿಶೋಧನೆಗೆ ಪ್ರತಿ ವರ್ಷ ಗ್ರಂಥಾಲಯವು ಒಪ್ಪಿಸತಕ್ಕದ್ದು. ಈ ಲೆಕ್ಕ ಪರಿಶೋಧನೆಯ ವರದಿಯು ವಾರ್ಷಿಕ ಅನುದಾನವನ್ನು ನಿರ್ಧರಿಸುವುದಕ್ಕಾಗಿ ಆಧಾರವಾಗಿರತಕ್ಕದ್ದು.

(7) **ಅನುದಾನವು ತಪ್ಪಿ ಹೋಗುವುದು.–**

(ಕ) **ಉಪಯೋಗಿಸುವುದಕ್ಕಾಗಿನ ಕಾಲ.–** ಒಂದು ವರ್ಷಕ್ಕಾಗಿನ ಅನುದಾನವನ್ನು ಗ್ರಂಥಾಲಯವು ಆ ವರ್ಷವು ಮುಕ್ತಾಯವಾಗುವುದಕ್ಕೆ ಮುಂಚೆ ಉಪಯೋಗಿಸತಕ್ಕದ್ದು.

(ಖ) **ಉಪಯೋಗಿಸದೇ ಇರುವ ಮೊಬಲಗು.–** ಒಂದು ವರ್ಷಕ್ಕಾಗಿನ ಅನುದಾನದ ಯಾವುದೇ ಭಾಗವು ಆ ವರ್ಷದ ಅವಧಿಯಲ್ಲಿ ಗ್ರಂಥಾಲಯವು ಉಪಯೋಗಿಸಿಕೊಳ್ಳದೇ ಇರುವುದನ್ನು, ಮುಂದಿನ ವರ್ಷದಲ್ಲಿ ಗ್ರಂಥಾಲಯಕ್ಕೆ ಸಂದಾಯ ಮಾಡಬೇಕಾಗುವ ಅನುದಾನದಿಂದ ಕಳೆದುಕೊಳ್ಳತಕ್ಕದ್ದು.

(ಇ.ಡಿ. 26 ಎಸ್‌ಎಲ್‌ಎಸ್ 66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಶಿಕ್ಷಣ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 28ನೇ ಮಾರ್ಚ್ 1966**

**ಎಸ್.ಓ. 4074.–** ಕರ್ನಾಟಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ 10)ದ 1ನೇ ಪ್ರಕರಣದ (3)ನೇ ಉಪ ಪ್ರಕರಣವು ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, 1966ರ ಏಪ್ರಿಲ್ 1ನೇ ದಿನಾಂಕವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕಂಥ ದಿನಾಂಕವೆಂಬುದಾಗಿ ಈ ಮೂಲಕ ಗೊತ್ತುಪಡಿಸುತ್ತದೆ.

(ಸಂಖ್ಯೆ. ಇ.ಡಿ. 23 ಎಸ್.ಎಲ್.ಎಸ್. 66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮೇಲೆ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ವರ್ಮ,**
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಶಿಕ್ಷಣ ಸಚಿವಾಲಯ**

**ಅಧಿಸೂಚನೆ**

**ಬೆಂಗಳೂರು, ದಿನಾಂಕ 14ನೇ ಅಕ್ಟೋಬರ್ 1966**

**ಎಸ್.ಓ. 5559.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 3ನೇ ಪ್ರಕರಣದ (1)ನೇ, ಉಪ ಪ್ರಕರಣವು, ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಸದರಿ ಅಧಿನಿಯಮದ ಉದ್ದೇಶಗಳಿಗಾಗಿ ರಾಜ್ಯ ಗ್ರಂಥಾಲಯ ಪ್ರಾಧಿಕಾರವೆಂದು ಕರೆಯತಕ್ಕಂಥ ಪ್ರಾಧಿಕಾರವನ್ನು ಈ ಮೂಲಕ ರಚಿಸುತ್ತದೆ.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

## ಅಧಿಸೂಚನೆ

### ಬೆಂಗಳೂರು, ದಿನಾಂಕ 14ನೇ ಅಕ್ಟೋಬರ್ 1966

**ಎಸ್.ಓ. 5563–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 3ನೇ ಪ್ರಕರಣದ (2)ನೇ ಉಪ ಪ್ರಕರಣವು ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಅಧಿಸೂಚನೆ ಸಂಖ್ಯೆ ಇಡಿ 25 ಎಸ್ಎಲ್ಎಸ್ 65 ದಿನಾಂಕ 14ನೇ ಅಕ್ಟೋಬರ್ 1966 ಇದರಲ್ಲಿ ರಚಿಸಿದ ರಾಜ್ಯ ಗ್ರಂಥಾಲಯ ಪ್ರಾಧಿಕಾರವು ಈ ಕೆಳಕಂಡವರನ್ನು ಒಳಗೊಳ್ಳತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತದೆ:–

| 1 | 2 | 3 |
|---|---|---|
| 1 | ಶಿಕ್ಷಣದ ಪ್ರಭಾರದಲ್ಲಿರುವ ಮಂತ್ರಿ, ಕರ್ನಾಟಕ ಸರ್ಕಾರ | ಪದನಿಮಿತ್ತ ಅಧ್ಯಕ್ಷರು |
| 2 | ಶ್ರೀ ಬಿ.ಎಂ. ಪಾಟೀಲ್ ಬಿ.ಎಸ್.ಸಿ. (ಆನರ್ಸ್), ಎಂ.ಎಲ್.ಎ. ಪತ್ರೆ ರಸ್ತೆ, ಬಿಜಾಪುರ | ಸದಸ್ಯ |
| 3 | ಶ್ರೀ ವಿ. ಮಸಿಯಪ್ಪ, ಬಿ.ಎ., ಎಲ್.ಎಲ್.ಬಿ., ಎಂ.ಎಲ್.ಎ., ವಕೀಲರು, ಆಲೂರು, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ | –ಅದೇ– |
| 4 | ಶ್ರೀ ಸಿದ್ಧಯ್ಯ ಕಾಶಿಮಠ, ಎಂ.ಎಲ್.ಎ. ಶಿರಹಟ್ಟಿ ಅಂಚೆ, ಧಾರವಾಡ ಜಿಲ್ಲೆ | –ಅದೇ– |
| 5 | ಶ್ರೀ ಬಿ. ಬೈರಪ್ಪಾಜಿ, ಎಂ.ಎಲ್.ಎ. ಬ್ಯಾತನ ಹೊಸಹಳ್ಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ | –ಅದೇ– |
| 6 | ಶ್ರೀ ಎಸ್.ಸಿ. ಕುಬಸದ್, ಎಂ.ಎಲ್.ಸಿ, ಶಹಾಪುರ ಪೇಟೆ, ಗದಗ್ | –ಅದೇ– |
| 7 | ಶ್ರೀ ಜೆ.ಬಿ. ಮಲ್ಲಾರಾಧ್ಯ, ಎಂ.ಎ., ಎಂ.ಎಲ್.ಸಿ. 50, ಪಶ್ಚಿಮ ಕುಮಾರಪಾರ್ಕ್ ಬಡಾವಣೆ, ಬೆಂಗಳೂರು–20 | –ಅದೇ– |
| 8 | ಶ್ರೀ ಎಂ.ಎಂ. ಸುಗಂಧಿ, ಬಿ.ಎ., ಎಲ್.ಎಲ್.ಬಿ., ಸಿಂಡಿಕೇಟ್ ಸದಸ್ಯ, ಕರ್ನಾಟಕ ವಿಶ್ವವಿದ್ಯಾಲಯ | –ಅದೇ– |

| | | |
|---|---|---|
| 9 | ಶ್ರೀ ಕೆ.ಜಿ. ತಿಮ್ಮೇಗೌಡ, ಎಂ.ಎಲ್.ಎ. ಸಿಂಡಿಕೇಟ್ ಸದಸ್ಯ, ಮೈಸೂರು ವಿಶ್ವವಿದ್ಯಾಲಯ | ಸದಸ್ಯ |
| 10 | ಶ್ರೀ ಎಂ.ಇ. ಭರತರಾಜ್ ಸಿಂಗ್, ಸಿಂಡಿಕೇಟ್ ಸದಸ್ಯ, ಬೆಂಗಳೂರು ವಿಶ್ವವಿದ್ಯಾಲಯ | –ಅದೇ– |
| 11 | ಶ್ರೀ ಪಿ. ವೆಂಕಟಗಿರಿಯಪ್ಪ, ಎಂ.ಎಲ್.ಎ. ಸದಸ್ಯ, ರಿಜಂಟರ ಮಂಡಲಿ, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ | –ಅದೇ– |
| 12 | ಶ್ರೀ ಎಂ.ಆರ್. ನರಸಿಂಹ ಅಯ್ಯಂಗಾರ್, ಸದಸ್ಯ, ಮೈಸೂರು ಗ್ರಂಥಾಲಯ ಸಂಘ, ಬೆಂಗಳೂರು | –ಅದೇ– |
| 13 | ಶ್ರೀ ಅನಂತ ರಾಮನ್, ವಕೀಲ, ಬೆಂಗಳೂರು | –ಅದೇ– |
| 14 | ಡಾ॥ ವಿ.ವಿ. ತೆಗ್ಗಿನಮನಿ, ಕೇಶವಾಪುರ ರಸ್ತೆ, ಹುಬ್ಬಳ್ಳಿ–ಧಾರವಾಡ | –ಅದೇ– |
| 15 | ಡಾ॥ ಸಂಗಮೇಶ್ವರ ಸರ್ದಾರ್, ರಾಯಚೂರು | –ಅದೇ– |
| 16 | ಶ್ರೀ ಪಿ.ಎಸ್. ಭಟ್, ಕಾರವಾರ | –ಅದೇ– |
| 17 | ಡಾ॥ ಟಿ.ಎಸ್. ಮಲ್ಲಿಕಾರ್ಜುನಯ್ಯ, ತುಮಕೂರು | –ಅದೇ– |
| 18 | ಶ್ರೀ ಎಸ್. ಮುಕುಂದರಾವ್, ಎಂ.ಎಲ್.ಸಿ. ದಕ್ಷಿಣ ಕನ್ನಡ | –ಅದೇ– |
| 19 | ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ | –ಅದೇ– |
| 20 | ಕರ್ನಾಟಕ ಸಾರ್ವಜನಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು | –ಅದೇ– |
| 21 | ಶ್ರೀಮತಿ ಎಂ.ಆರ್. ಲಕ್ಷ್ಮಮ್ಮ, ಎಂ.ಎಲ್.ಸಿ | –ಅದೇ– |
| 22 | ಶ್ರೀ ಕೆ.ಎಸ್. ದೇಶಪಾಂಡೆ, ಮೈಸೂರು ವಿಶ್ವವಿದ್ಯಾಲಯ ಗ್ರಂಥಾಲಯ, ಮೈಸೂರು | –ಅದೇ– |
| 23 | ಶ್ರೀ ಎ.ಸಿ. ದೇವೇಗೌಡ, ಮಿಲ್ಲರ್ ರಸ್ತೆ, ಬೆಂಗಳೂರು | –ಅದೇ– |

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಶಿಕ್ಷಣ ಸಚಿವಾಲಯ**

**ಆದೇಶ**

**ಬೆಂಗಳೂರು, ದಿನಾಂಕ 5ನೇ ಡಿಸೆಂಬರ್ 1966**

**ಎಸ್.ಓ. 5644.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 6ನೇ ಪ್ರಕರಣದ (1)ನೇ, ಉಪ ಪ್ರಕರಣದ (ಕ) ಖಂಡದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1966ನೇ ನವೆಂಬರ್ 10ನೇ ದಿವಸದಿಂದ ಜಾರಿಗೆ ಬರುವಂತೆ ಮೈಸೂರು ನಗರಕ್ಕಾಗಿ ಒಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ಈ ಮೂಲಕ ರಚಿಸಿದೆ.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಬಿಜಿ) (1))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ,
ಶಿಕ್ಷಣ ಇಲಾಖೆ.

**ಆದೇಶ**

**ಬೆಂಗಳೂರು, ದಿನಾಂಕ 5ನೇ ನವೆಂಬರ್ 1966**

**ಎಸ್.ಓ. 5645.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 17ನೇ ಪ್ರಕರಣದ (1)ನೇ, ಉಪ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಆದೇಶ ಸಂಖ್ಯೆ: ಇಡಿ 25 ಎಸ್‌ಎಲ್‌ಎಸ್ 66 (ಎಂ.ವೈ) (1) ದಿನಾಂಕ 5ನೇ ನವೆಂಬರ್, 1966ರ ಮೂಲಕ ಆದೇಶದಲ್ಲಿ ರಚಿಸಿದ ಮೈಸೂರು ನಗರಕ್ಕಾಗಿ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರೆಂದು ಈ ಕೆಳಕಂಡವರನ್ನು ಈ ಮೂಲಕ ನಾಮನಿರ್ದೇಶಿಸುತ್ತದೆ.

17(1) (ಖ) ಪ್ರಕರಣದ ಮೇರೆಗೆ.–

1. ಪ್ರಾಂಶುಪಾಲ

   ಸೇಂಟ್ ತೆರಸಾರವರ ಮಹಿಳಾ ಕಾಲೇಜು, ಮೈಸೂರು

   17(1) (ಘ) ಪ್ರಕರಣದ ಮೇರೆಗೆ,–

1. ಶ್ರೀ ಬಿ.ಎನ್. ಕೆಂಗೇಗೌಡ, ನ್ಯಾಯವಾದಿ, ಮೈಸೂರು

   17 (1) (ಜ) ಪ್ರಕರಣದ ಮೇರೆಗೆ,–

1. ಮುಖ್ಯೋಪಾಧ್ಯಾಯರು, ಮಹಾಜನ್ ಪ್ರೌಢಶಾಲೆ, ಮೈಸೂರು

   17(1) (ಛ) ಪ್ರಕರಣದ ಮೇರೆಗೆ,–

1. ಸಹಾಯಕ ಶಿಕ್ಷಣ ಅಧಿಕಾರಿ, (ಕೇಂದ್ರ ಕಾರ್ಯಸ್ಥಾನ) ಮೈಸೂರು ನಗರ

   17(1) (ಜ) ಪ್ರಕರಣದ ಮೇರೆಗೆ,–

1. ಡಾ॥ ಎಂ. ಸಿದ್ಧಲಿಂಗಯ್ಯ, ಸರಸ್ವತಿಪುರಂ, ಮೈಸೂರು
2. ಪ್ರೊ.ಡಿ. ಜವರೇಗೌಡ, ಕನ್ನಡ ವಿಭಾಗದ ಮುಖ್ಯಸ್ಥರು, ಮಾನಸಗಂಗೋತ್ರಿ, ಮೈಸೂರು.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಎಂವೈ) (2))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ.

**ಆದೇಶ**

**ಬೆಂಗಳೂರು, ದಿನಾಂಕ 5ನೇ ನವೆಂಬರ್ 1966**

**ಎಸ್.ಓ. 1546.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 16ನೇ ಪ್ರಕರಣದ (1)ನೇ, ಉಪ ಪ್ರಕರಣದ (ಗ) ಖಂಡದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1966ನೇ ನವೆಂಬರ್ 10ನೇ ದಿವಸದಿಂದ ಜಾರಿಗೆ ಬರುವಂತೆ ಹುಬ್ಬಳ್ಳಿ–ಧಾರವಾಡ ನಗರಕ್ಕಾಗಿ ಒಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ಈ ಮೂಲಕ ರಚಿಸಿದೆ.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಎಚ್‌ಡಿ) (1))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ.

**ಆದೇಶ**

**ಬೆಂಗಳೂರು, ದಿನಾಂಕ 5ನೇ ನವೆಂಬರ್ 1966**

**ಎಸ್.ಓ. ನಂ. 1547.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 17ನೇ ಪ್ರಕರಣದ (1)ನೇ, ಉಪ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಆದೇಶ ಸಂಖ್ಯೆ: ಇಡಿ 25 ಎಸ್‌ಎಲ್‌ಎಸ್ 66 (ಹೆಚ್.ಡಿಡಿ (1) ದಿನಾಂಕ 5ನೇ ನವೆಂಬರ್, 1966 ಇದರಲ್ಲಿ ರಚಿಸಿದ ಹುಬ್ಬಳ್ಳಿ–ಧಾರವಾಡ ನಗರಕ್ಕಾಗಿನ ನಗರ ಗ್ರಂಥಾಲಯ ಪ್ರಾಧಿಕಾರಕ್ಕೆ ಸದಸ್ಯರಾಗಲು ಈ ಕೆಳಕಂಡವರನ್ನು ಈ ಮೂಲಕ ನಾಮನಿರ್ದೇಶಿಸುತ್ತದೆ.

17(1) (ಖ) ಪ್ರಕರಣದ ಮೇರೆಗೆ.–

1. ಪ್ರಾಂಶುಪಾಲರು, ಕಾಡ ಸಿದ್ಧೇಶ್ವರ ಕಲಾ ಕಾಲೇಜು, ಹುಬ್ಬಳ್ಳಿ–ಧಾರವಾಡ

17(1) (ಙ) ಪ್ರಕರಣದ ಮೇರೆಗೆ,–

1. ಶ್ರೀ ಜಿ.ಎಂ. ಮಿರ್ಜಿ, ನ್ಯಾಯವಾದಿ, ಅಧ್ಯಕ್ಷ, ಶ್ರೀ ಸರಸ್ವತಿ ವಿದ್ಯಾರಣ್ಯ ಉಚಿತ ಗ್ರಂಥಾಲಯ, ಹುಬ್ಬಳ್ಳಿ

17 (1) (ಙ) ಪ್ರಕರಣದ ಮೇರೆಗೆ,–

1. ಮುಖ್ಯೋಪಾಧ್ಯಾಯರು, ಬಾಸಲ್ ಮಿಶನ್ ಬಾಲಕಿಯರ ಪ್ರೌಢಶಾಲೆ, ಹುಬ್ಬಳ್ಳಿ–ಧಾರವಾಡ.

17(1) (ಛ) ಪ್ರಕರಣದ ಮೇರೆಗೆ,–

1. ಉಪ ಶಿಕ್ಷಣ ಪರಿಶೀಲಕ, ಹುಬ್ಬಳ್ಳಿ–ಧಾರವಾಡ

17(1) (ಜ) ಪ್ರಕರಣದ ಮೇರೆಗೆ

1. ಶ್ರೀ ಡಿ.ಹೆಚ್. ಮುನೀರ್, ನ್ಯಾಯವಾದಿ, ಬಂಡಿವಾಡ ಅಗಸಿ, ಹುಬ್ಬಳ್ಳಿ–ಧಾರವಾಡ

2. ಶ್ರೀಮತಿ ಗೀತಾ ಕುಲಕರ್ಣಿ, ಬಾಸಲ್ ಮಿಶನ್ ಪ್ರೌಢಶಾಲೆ ಸಮೀಪ ಬಾಲಕಿಯರ ಪ್ರೌಢಶಾಲೆಯ ಎದುರು, ಧಾರವಾಡ.

(ಸಂಖ್ಯೆ. ಇ.ಡಿ. 5 ಎಸ್.ಎಲ್.ಎಸ್. 66 (ಹೆಚ್.ಡಿ.) (2))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ.

**ಅಧಿಸೂಚನೆ**

**ಬೆಂಗಳೂರು, ದಿನಾಂಕ 5ನೇ ನವೆಂಬರ್ 1966**

**ಎಸ್.ಓ. 5648–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 17ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಆದೇಶ ಸಂಖ್ಯೆ ಇಡಿ 25 ಎಸ್ಎಲ್ಎಸ್ 66 (ಎಂ.ವೈ) (1) ದಿನಾಂಕ 5ನೇ ನವೆಂಬರ್ 1966 ಇದರಲ್ಲಿ ಮೈಸೂರು ನಗರಕ್ಕಾಗಿ ರಚಿಸಿದ ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದೆಂದು ಈ ಮೂಲಕ ನಿರ್ದೇಶಿಸಿದೆ:–

| | | |
|---|---|---|
| 1 | ಅಧ್ಯಕ್ಷರು, ನಗರ ಮುನ್ಸಿಪಲ್ ಕೌನ್ಸಿಲ್, ಮೈಸೂರು | ಪದನಿಮಿತ್ತ ಅಧ್ಯಕ್ಷರು |
| 2 | ಪ್ರಾಂಶುಪಾಲರು, ಸೇಂಟ್‌ತೆರಸಾರವರ ಮಹಿಳಾ ಕಾಲೇಜು, ಮೈಸೂರು | 17(1) (ಖ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತನಾದ ಉಪಾಧ್ಯಕ್ಷ (ಆದೇಶ ಸಂಖ್ಯೆ ಇ.ಡಿ. 25 ಎಸ್.ಎಲ್.ಎಸ್. 66 (ಎಂ.ವೈ) ದಿನಾಂಕ 5ನೇ ನವೆಂಬರ್ 1966) ಇದನ್ನು ನೋಡಿ |
| 3 | ಶ್ರೀ ಕೆ.ವಿ. ಅನಂತರಾಮಯ್ಯ, ನಂ. 209, ದೀವಾನರ ರಸ್ತೆ, ಮೈಸೂರು | 17(1) (ಗ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತರಾದವರು |
| 4 | ಶ್ರೀ ಜೆ.ಎಂ. ಕೊಟಿನೊ, ನಂ. 4541, ನರಸಿಂಹರಾಜ ಮೊಹಲ್ಲ, ಮೈಸೂರು | ಅದೇ |
| 5 | ಶ್ರೀ ಬಿ.ಎನ್. ಕೆಂಗೇಗೌಡ, ನ್ಯಾಯವಾದಿ, ಮೈಸೂರು | 17(1)(ಘ) ಪ್ರಕರಣದ ಮೇರೆಗೆ ನಾಮನಿರ್ದೇಶಿತರಾದವರು.<br>ಆದೇಶ ಸಂಖ್ಯೆ ಇಡಿ 25 ಎಸ್ಎಲ್ಎಸ್, 66 (ಎಂ.ವೈ) ದಿನಾಂಕ 5ನೇ ನವೆಂಬರ್ 1966 ಇದನ್ನು ನೋಡಿ |
| 6 | ಮುಖ್ಯೋಪಾಧ್ಯಾಯರು, ಮಹಾಜನ ಪ್ರೌಢಶಾಲೆ, ಮೈಸೂರು | 17(1) (ಙ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತರಾದವರು<br>(ಆದೇಶ ಸಂಖ್ಯೆ: ಇಡಿ 25 ಎಸ್ಎಲ್ಎಸ್ 66 (ಎಂ.ವೈ) 5ನೇ ನವೆಂಬರ್ 1966 ಇದನ್ನು ನೋಡಿ) |
| 7 | ಶ್ರೀ ಡಿ. ಲಿಂಗಯ್ಯ, ಮುನಿಸಿಪಲ್ ಕೌನ್ಸಿಲರ್, ಬಾಲಕೃಷ್ಣ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು | 17(1)(ಚ) ಪ್ರಕರಣದ ಮೇರೆಗೆ ನಾಮನಿರ್ದೇಶಿತರಾದವರು |
| 8 | ಸಹಾಯಕ ಶಿಕ್ಷಣ ಅಧಿಕಾರಿ, (ಕೇಂದ್ರ ಕಾರ್ಯಸ್ಥಾನ), ಮೈಸೂರು | 17(1) (ಛ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತರಾದವರು<br>(ಆದೇಶ ಸಂಖ್ಯೆ: ಇಡಿ 25 ಎಸ್ಎಲ್ಎಸ್ 66 (ಎಂ.ವೈ) ದಿನಾಂಕ 5ನೇ ನವೆಂಬರ್ 1966 ಇದನ್ನು ನೋಡಿ) |
| 9 | ಡಾ॥ ಎಂ. ಸಿದ್ಧಲಿಂಗಯ್ಯ, ಸರಸ್ವತಿಪುರಂ, ಮೈಸೂರು | |

| | | |
|---|---|---|
| 10 | ಪ್ರೊ. ಡಿ. ಜವರೇಗೌಡ, ಕನ್ನಡ ವಿಭಾಗ ಮುಖ್ಯಸ್ಥ, ಮಾನಸ ಗಂಗೋತ್ರಿ, ಮೈಸೂರು | 17(1) (ಜ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತರಾದವರು (ಆದೇಶ ಸಂಖ್ಯೆ: ಇಡಿ 25 ಎಸ್‌ಎಲ್‌ಎಸ್ 66 (ಎಂ.ವೈ) ದಿನಾಂಕ 5ನೇ ನವೆಂಬರ್ 1966 ಇದನ್ನು ನೋಡಿ) |

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಬಿಜಿ) (3))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಆರ್. ಜಯರಾಮನ್,**

ಸರ್ಕಾರದ ಕಾರ್ಯದರ್ಶಿ.

**ಶಿಕ್ಷಣ ಸಚಿವಾಲಯ**

**ಆದೇಶ**

**ಬೆಂಗಳೂರು, ದಿನಾಂಕ 6ನೇ ಡಿಸೆಂಬರ್ 1966**

**ಎಸ್.ಓ. 5861.–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 16ನೇ ಪ್ರಕರಣದ (1)ನೇ, ಉಪ ಪ್ರಕರಣದ (ಕ) ಖಂಡದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1966ನೇ ಡಿಸೆಂಬರ್ 10ನೇ ದಿವಸದಿಂದ ಪರಿಣಮಿಸುವಂತೆ ಬೆಂಗಳೂರು ನಗರಕ್ಕಾಗಿ ಒಂದು ಸ್ಥಳೀಯ ಗ್ರಂಥಾಲಯ ಪ್ರಾಧಿಕಾರವನ್ನು ರಚಿಸುತ್ತದೆ.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಬಿಜಿ) (1))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**

ಸರ್ಕಾರದ ಕಾರ್ಯದರ್ಶಿ.

**ಆದೇಶ**

**ಬೆಂಗಳೂರು, ದಿನಾಂಕ 5ನೇ ನವೆಂಬರ್ 1966**

**ಎಸ್.ಓ. 5862.**– ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 17ನೇ ಪ್ರಕರಣದ (1)ನೇ, ಉಪ ಪ್ರಕರಣದ ಮೂಲಕ ಪ್ರದಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಆದೇಶ ಸಂಖ್ಯೆ: ಇಡಿ 25 ಎಸ್‌ಎಲ್‌ಎಸ್ 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್, 1966 ಇದರಲ್ಲಿ ರಚಿಸಿದ ಬೆಂಗಳೂರು ನಗರ ಗ್ರಂಥಾಲಯ ಪ್ರಾಧಿಕಾರಕ್ಕಾಗಿ ಈ ಕೆಳಕಂಡವರನ್ನು ಸದಸ್ಯರಾಗಲು ಈ ಮೂಲಕ ನಾಮನಿರ್ದೇಶನ ಮಾಡುತ್ತದೆ:–

17(1) (ಖ) ಪ್ರಕರಣದ ಮೇರೆಗೆ.–

1. ಪ್ರಾಂಶುಪಾಲ, ನ್ಯಾಷನಲ್ ಕಾಲೇಜು, ಬೆಂಗಳೂರು

17(1) (ಘ) ಪ್ರಕರಣದ ಮೇರೆಗೆ,–

1. ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮ, ಅಧ್ಯಕ್ಷ, ಗಾಂಧಿ ಸಾಹಿತ್ಯ ಸಂಘ, ಮಲ್ಲೇಶ್ವರಂ, ಬೆಂಗಳೂರು–3

17(1) (ಙ) ಪ್ರಕರಣದ ಮೇರೆಗೆ,–

1. ಮುಖ್ಯೋಪಾಧ್ಯಾಯರು, ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್, ಬೆಂಗಳೂರು

17(1) (ಛ) ಪ್ರಕರಣದ ಮೇರೆಗೆ

1. ಜಿಲ್ಲಾ ಶಿಕ್ಷಣ ಅಧಿಕಾರಿ, ನಗರ ಜಿಲ್ಲೆ, ಬೆಂಗಳೂರು

17(1) (ಜ) ಪ್ರಕರಣದ ಮೇರೆಗೆ

1. ಶ್ರೀಮತಿ ಲೀಲಾ ಪ್ರಸಾದ್, ಕುಮಾರ ಪಾರ್ಕ್, ಪಶ್ಚಿಮ ಬಡಾವಣೆ, ಬೆಂಗಳೂರು–20
2. ಶ್ರೀ ಜಿ. ನಾರಾಯಣ, ನಂ. 97, 2ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18.

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಬಿಜಿ) (2))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ.

## ಶಿಕ್ಷಣ ಸಚಿವಾಲಯ

## ಅಧಿಸೂಚನೆ

### ಬೆಂಗಳೂರು, ದಿನಾಂಕ 6ನೇ ಡಿಸೆಂಬರ್ 1966

**ಎಸ್.ಓ. 5864–** ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ ಸಂಖ್ಯೆ 10)ದ 17ನೇ ಪ್ರಕರಣದ (1)ನೇ ಉಪ ಪ್ರಕರಣದ ಮೂಲಕ ಪ್ರಧಾನ ಮಾಡಿದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು, ಆದೇಶ ಸಂಖ್ಯೆ ಇಡಿ 25 ಎಸ್‌ಎಲ್‌ಎಸ್ 66 (ಬಿಜಿ) (1), ದಿನಾಂಕ 6ನೇ ಡಿಸೆಂಬರ್ 1966 ಇದರಲ್ಲಿ ಬೆಂಗಳೂರು ನಗರಕ್ಕಾಗಿ ರಚಿಸಿದ ಸ್ಥಳೀಯ ಪ್ರಾಧಿಕಾರವು ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತದೆ:–

| | | |
|---|---|---|
| 1 | ಮೇಯರ್, ಬೆಂಗಳೂರು ನಗರ ಪಾಲಿಕೆ | ಪದನಿಮಿತ್ತ ಅಧ್ಯಕ್ಷ |
| 2 | ಪ್ರಾಂಶುಪಾಲರು, ನ್ಯಾಷನಲ್ ಕಾಲೇಜು, ಬೆಂಗಳೂರು | 17(1) (ಖ) ಪ್ರಕರಣದ ಮೇರೆಗೆ ನಾಮ ನಿರ್ದೇಶಿತನಾದ ಉಪಾಧ್ಯಕ್ಷ (ಆದೇಶ ಸಂಖ್ಯೆ ಇ.ಡಿ. 25 ಎಸ್.ಎಲ್. ಎಸ್. 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್ 1966) ಇದನ್ನು ನೋಡಿ |
| 3 | ಶ್ರೀಮತಿ ರೂಪವತಿ ಪೀತಾಂಬರ ರಾವ್, ನಂ. 96, 4ನೇ ಬ್ಲಾಕ್, ಕುಮಾರ ಪಾರ್ಕ್, ಪಶ್ಚಿಮ ಬಡಾವಣೆ, ಬೆಂಗಳೂರು–20 | 17(1) (ಗ) ಪ್ರಕರಣದೊಂದಿಗೆ ಓದಿಕೊಂಡು, 19ನೇ ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ |
| 4 | ಶ್ರೀ ಸಿ. ಓಬಳೇಶ, ನಂ. 136, ಗೋರಿಪಾಳ್ಯ, ಬೆಂಗಳೂರು–18 | |
| 5 | ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮ, ಅಧ್ಯಕ್ಷ, ಗಾಂಧಿ ಸಾಹಿತ್ಯ, ಮಲ್ಲೇಶ್ವರಂ, ಬೆಂಗಳೂರು–3 | 17(1)(ಘ) ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ (ಆದೇಶ ಸಂಖ್ಯೆ ಇಡಿ 25 ಎಸ್‌ಎಲ್‌ಎಸ್, 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್ 1966 ಇದನ್ನು ನೋಡಿ) |
| 6 | ಮುಖ್ಯೋಪಾಧ್ಯಾಯ, ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್, ಬೆಂಗಳೂರು | 17(1)(ಙ) ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ (ಆದೇಶ ಸಂಖ್ಯೆ ಇಡಿ 25 ಎಸ್‌ಎಲ್‌ಎಸ್, 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್ 1966 ಇದನ್ನು ನೋಡಿ) |
| 7 | ಶ್ರೀ ಎಸ್.ಆರ್. ಪ್ರಭು, ಮುಖ್ಯ ಪರಿಶೀಲಕ, ಕೆನರಾ ಬ್ಯಾಂಕ್ ಆಡಳಿತ ಕಛೇರಿ, ಬೆಂಗಳೂರು–2 | 17(1)(ಚ) ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ |
| 8 | ಜಿಲ್ಲಾ ಶಿಕ್ಷಣಾಧಿಕಾರಿ, ನಗರ ಜಿಲ್ಲೆ, ಬೆಂಗಳೂರು | 17(1)(ಛ) ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ (ಆದೇಶ ಸಂಖ್ಯೆ ಇಡಿ 25 ಎಸ್‌ಎಲ್‌ಎಸ್, 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್ 1966 ಇದನ್ನು ನೋಡಿ) |

| | | |
|---|---|---|
| 9 | ಶ್ರೀಮತಿ ಲೀಲಾಪ್ರಸಾದ್, ಕುಮಾರ ಪಾರ್ಕ್ ಪಶ್ಚಿಮ ಬಡಾವಣೆ, ಬೆಂಗಳೂರು–20 | 17(1)(ಜ) ಪ್ರಕರಣದ ಮೇರೆಗೆ ನಾಮನಿರ್ದೇಶನ ಮಾಡಲಾಗಿದೆ (ಆದೇಶ ಸಂಖ್ಯೆ ಇಡಿ 25 ಎಸ್‌ಎಲ್‌ಎಸ್, 66 (ಬಿಜಿ) (1) ದಿನಾಂಕ 6ನೇ ಡಿಸೆಂಬರ್ 1966 ಇದನ್ನು ನೋಡಿ) |
| 10 | ಶ್ರೀ ಜಿ. ನಾರಾಯಣ, ನಂ. 97, 11ನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು–18. | |

(ಸಂಖ್ಯೆ. ಇ.ಡಿ. 25 ಎಸ್.ಎಲ್.ಎಸ್. 66 (ಎಂವೈ) (3))

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಟಿ.ಆರ್. ಜಯರಾಮನ್,**
ಸರ್ಕಾರದ ಕಾರ್ಯದರ್ಶಿ.

**ಕರ್ನಾಟಕ ಅಧಿನಿಯಮ**

**(1976ರ ಸಂಖ್ಯೆ 45)**

**(1976ರ ಜೂನ್ 5ನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿಸಲಾಗಿದೆ)**

**ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ಅಧಿನಿಯಮ, 1976**

(1976ರ ಜೂನ್ ಮೊದಲನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು)

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 ಇದನ್ನು ತಿದ್ದುಪಡಿ ಮಾಡುವ ಅಧಿನಿಯಮ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಧಿನಿಯಮ, 1965 (ಕರ್ನಾಟಕ ಅಧಿನಿಯಮ 1965ರ 10) ಇದನ್ನು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯದ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು.

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ (ತಿದ್ದುಪಡಿ) ಅಧಿನಿಯಮ, 1976 ಎಂದು ಕರೆಯತಕ್ಕದ್ದು.

(2) 5 ಮತ್ತು 6ನೇ ಪ್ರಕರಣಗಳು 1969ರ ಏಪ್ರಿಲ್ ಮೊದಲನೇ ದಿವಸದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ತಕ್ಷಣ ಜಾರಿಗೆ ಬರತಕ್ಕದ್ದು.

ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

2. 3ನೇ ಪ್ರಕರಣದ ತಿದ್ದುಪಡಿ :– ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.
3. 16ನೇ ಪ್ರಕರಣದ ತಿದ್ದುಪಡಿ :– ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.
4. 18ನೇ ಪ್ರಕರಣದ ತಿದ್ದುಪಡಿ :– ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.
5. 30ನೇ ಪ್ರಕರಣದ ತಿದ್ದುಪಡಿ :– ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.
6. 32ನೇ ಪ್ರಕರಣದ ತಿದ್ದುಪಡಿ :– ಮೂಲ ಅಧಿನಿಯಮದಲ್ಲಿ ಸೇರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಬಿ.ಪಿ. ಜಯಕರ್**
ಸರ್ಕಾರದ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.

**ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು - 01. ಕಾ.ಸೂ. ಪಿ1**